ಅನಧಿಕೃತ ಪ್ಲಾಂಟೇಷನ್ ಬೆಳೆಗಳ ಜಮೀನು ರೈತರಿಗೆ • 25 ಎಕರೆವರೆಗೂ ಗುತ್ತಿಗೆಗೆ ಅವಕಾಶ

ಸರ್ಕಾರಿ ಜಮೀನು ಗುತ್ತಿಗೆ: ತಿದ್ದುಪಡಿ ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ಲಾಂಟೇಷನ್ ಬೆಳೆಗಳನ್ನು ಅನಧಿಕೃತವಾಗಿ ಬೆಳೆಯುತ್ತಿರುವ ಸರ್ಕಾರಿ ಜಮೀನುಗಳನ್ನು ರೈತರಿಗೆ 30 ವರ್ಷಗಳವರೆಗೆ ಗುತ್ತಿಗೆಗೆ ನೀಡಲು ಅವಕಾಶ ಕಲ್ಪಿಸುವ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಮಸೂದೆ-2022ಕ್ಕೆ ವಿಧಾನ ಪರಿಷತ್ ಬುಧವಾರ ಅಂಗೀಕಾರ ನೀಡಿತು.

ಈ ಮಸೂದೆ ಇನ್ನಷ್ಟೇ ವಿಧಾನಸಭೆಗೆ ಬರಬೇಕಿದೆ.

ಕಾಫಿ, ಕಾಳು ಮೆಣಸು, ಏಲಕ್ಕಿ, ಟೀ ಮತ್ತಿತರ ಪ್ಲಾಂಟೇಷನ್ ಬೆಳೆಗಳಿರುವ ಹಿಡುವಳಿ ಜಮೀನಿನ ಮಧ್ಯ ಭಾಗದಲ್ಲಿರುವ ಅಥವಾ ಅದಕ್ಕೆ ಹೊಂದಿಕೊಂಡಂತೆ ಇರುವ ಸರ್ಕಾರಿ ಜಮೀನಿನಲ್ಲಿ 2005ರ ಜನವರಿ 1ಕ್ಕೂ ಮುನ್ನ ಪ್ಲಾಂಟೇಷನ್ ಬೆಳೆಗಳನ್ನು ಬೆಳೆದಿದ್ದಲ್ಲಿ ಕುಟುಂಬವೊಂದಕ್ಕೆ 25 ಎಕರೆವರೆಗೂ ಗುತ್ತಿಗೆಗೆ ನೀಡಲು ಈ ತಿದ್ದುಪಡಿ ಅವಕಾಶ ಕಲ್ಪಿಸಲಿದೆ.

2017ರ ಜನವರಿ 1ಕ್ಕೂ ಮೊದಲು ಅಂತಹ ಜಮೀನುಗಳಲ್ಲಿ ಪ್ಲಾಂಟೇಷನ್ ಬೆಳೆಗಾರರು ಹೊಂದಿರುವ ಅನಧಿಕೃತ ವಾಸದ ಮನೆಗಳನ್ನೂ ಸಕ್ರಮಗೊಳಿಸಲು ಈ ತಿದ್ದುಪಡಿಯಿಂದ ಅವಕಾಶ ದೊರಕಲಿದೆ. ಅರಣ್ಯ ಜಮೀನು, ರಸ್ತೆ, ಕಾಲು ದಾರಿ ಮತ್ತಿತರ ಸಾರ್ವಜನಿಕ ಉದ್ದೇಶಕ್ಕೆ ಮೀಸಲಾದ ಜಮೀನುಗಳು, ರಾಷ್ಟ್ರೀಯ ಉದ್ಯಾನಗಳು, ನದಿ ಪಾತ್ರ, ಕಾಲುವೆಗಳು, ಕರಾವಳಿ ನಿಯಂತ್ರಣ ವಲಯದ ವ್ಯಾಪ್ತಿಯಲ್ಲಿರುವ ಜಮೀನುಗಳನ್ನು ಗುತ್ತಿಗೆಗೆ ನೀಡಲು ಅವಕಾಶವಿಲ್ಲ.

ಮಸೂದೆ ಮಂಡಿಸಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, '50 ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಪ್ಲಾಂಟೇಷನ್ ಬೆಳೆಗಾರರು ವಿವಿಧ ಬೆಳೆಗಳನ್ನು ಬೆಳೆದಿರುವ ಜಮೀನುಗಳನ್ನು ಅವರಿಗೆ ಗುತ್ತಿಗೆಗೆ ನೀಡಲಾಗುತ್ತಿದೆ. 82,000ಕ್ಕೂ ಹೆಚ್ಚು ರೈತರಿಗೆ ಇದರಿಂದ ಅನುಕೂಲವಾಗುತ್ತದೆ. ಗುತ್ತಿಗೆ ಶುಲ್ಕ ಮತ್ತು ದಂಡದ ಮೊತ್ತವನ್ನು ನಿಯಮಗಳಲ್ಲಿ ನಿಗದಿಪಡಿಸಲಾಗುವುದು' ಎಂದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ನೂರಾರು ಎಕರೆ ವಿಸ್ತೀರ್ಣದ ತೋಟಗಳನ್ನು ಹೊಂದಿರುವವರಿಗೆ ಪುನಃ ಈ ರೀತಿ ಗುತ್ತಿಗೆ ನೀಡುವ ಬದಲಿಗೆ ಕಡಿಮೆ ವಿಸ್ತೀರ್ಣದ ಜಮೀನು ಹೊಂದಿರುವವರಿಗೆ ಆದ್ಯತೆ ನೀಡಬೇಕು. ಸಣ್ಣ ಹಿಡುವಳಿದಾರರಿಗೆ ಗುತ್ತಿಗೆಗೆ ನೀಡಬೇಕು' ಎಂದು ಸಲಹೆ ನೀಡಿದರು.

ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಮೂರೂ ಪಕ್ಷಗಳ ಹಲವು ಸದಸ್ಯರು ಮಸೂದೆಯನ್ನು ಸ್ವಾಗತಿಸಿ ಮಾತನಾಡಿದರು.

ಆನ್‌ಲೈನ್‌ನಲ್ಲೇ ಜಮೀನು ದಾಖಲೆಗಳು: ಸಚಿವ ಆರ್. ಅಶೋಕ

ಬೆಳಗಾವಿ: 'ಇನ್ನು ಮುಂದೆ ಸರ್ಕಾರಿ ಜಮೀನುಗಳು ಸೇರಿದಂತೆ ಅಗತ್ಯವಿರುವ ಕಂದಾಯ ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯವಾಗಲಿವೆ. ಈ ದಾಖಲೆಗಳನ್ನು ಯಾವುದೇ ರೀತಿ ತಿದ್ದುಪಡಿ ಮಾಡಲು ಸಾಧ್ಯವಿಲ್ಲ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಜೆಡಿಎಸ್‌ನ ಗೋವಿಂದರಾಜು ಪರವಾಗಿ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ನಕಲಿ ದಾಖಲೆಗಳಿಗೆ ಕಡಿವಾಣ ಹಾಕಲು ಈ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾಯೋಗಿಕವಾಗಿ ಬಳ್ಳಾರಿಯಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಕಂದಾಯ ಕಾರ್ಯದರ್ಶಿ ಅವರು ಮಾತ್ರ ಈ ದಾಖಲೆಗಳ ಭದ್ರತಾ ವ್ಯವಸ್ಥೆಯ ಉಸ್ತುವಾರಿ ಹೊಂದಿರುತ್ತಾರೆ' ಎಂದು ವಿವರಿಸಿದರು.

'ಸ್ಥಿರಾಸ್ತಿಗಳ ನೋಂದಣಿಯ ವೇಳೆ ಸ್ವತ್ತು ಖರೀದಿ ಮಾಡುವವರು ಅಥವಾ ಮಾರಾಟ ಮಾಡುವವರು ದಾಖಲೆಗಳನ್ನು ಒದಗಿಸುವ ಪದ್ಧತಿಗಳನ್ನು ಬದಲಾವಣೆ ಮಾಡಿ, ಅಗತ್ಯ ದಾಖಲೆಗಳು ಆನ್‌ಲೈನ್ ಮೂಲಕವೇ ಲಭ್ಯವಾಗುವಂತೆ ವ್ಯವಸ್ಥೆ ಜಾರಿ ಮಾಡಲಾಗುವುದು' ಎಂದು ವಿವರಿಸಿದರು.

'ನಕಲಿ ದಾಖಲೆಗಳನ್ನು ಒದಗಿಸಿದ ಕೆಲವರು ಸಾಕಷ್ಟು ಅಕ್ರಮಗಳನ್ನು ನಡೆಸಿದ್ದಾರೆ. ಹೀಗಾಗಿ, ಈಗಿರುವ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗುವುದು. ಯಾವ ಆಸ್ತಿ ಯಾರ ಹೆಸರಿನಲ್ಲಿದೆ. ಎಲ್ಲಿ ಕೆರೆ, ಕಾಲುವೆಗಳಿವೆ, ಅದರ ಹಿನ್ನೆಲೆ ಏನು ಎನ್ನುವ ಮಾಹಿತಿಗಳು ಲಭ್ಯವಾಗಲಿವೆ' ಎಂದರು.

'ಉಪನೋಂದಣಿ ಕಚೇರಿಯಲ್ಲಿ ನೋಂದಣಿದಾರರಿಂದ ದಾಖಲೆ ಕೇಳದೆ ವೆಬ್‌ಸೈಟ್‌ನಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ನೋಂದಣಿ ಪ್ರಕ್ರಿಯೆಯನ್ನು ಮುಂದುವರಿಸಬಹುದು' ಎಂದು ಹೇಳಿದರು.

ಕಾನೂನು ತೊಡಕು ನಿವಾರಣೆಗೆ ಕ್ರಮ: 'ಕರಾವಳಿ ಭಾಗದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನಾದಿಕಾಲದಿಂದ ಅನುಭವಿಸಿಕೊಂಡು ಬರುತ್ತಿರುವ ಕಾನು, ಬಾಣೆ, ಕುಮ್ಕಿ ಜಮೀನುಗಳನ್ನು ಮಂಜೂರು ಮಾಡುವ ಬಗ್ಗೆ ನೀತಿಯೊಂದನ್ನು ರೂಪಿಸಲು ಸರ್ಕಾರ ಸಕಾರಾತ್ಮಕ ಧೋರಣೆ ಹೊಂದಿದೆ' ಎಂದರು.

'ಸದ್ಯದಲ್ಲೇ ಜನಪ್ರತಿನಿಧಿಗಳ ಸಭೆ ಕರೆದು ಚರ್ಚಿಸಿ ಕಾನೂನು ತೊಡಕುಗಳನ್ನು ಸರಿಪಡಿಸಲಾಗುವುದು' ಎಂದು ಸಚಿವ ಆರ್. ಅಶೋಕ ಅವರು, ಬಿಜೆಪಿಯ ಕೆ. ಪ್ರತಾಪ್ ಸಿಂಹ್ ನಾಯಕ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಹಾಗೂ ವಿಚಾರಣಾ ಪ್ರಾಧಿಕಾರದಲ್ಲಿ ಬಿಬಿಎಂಪಿ ಆಯುಕ್ತರ ಬದಲಿಗೆ ಜಿಲ್ಲಾಧಿಕಾರಿಯನ್ನು ಸದಸ್ಯರನ್ನಾಗಿ ನೇಮಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ-2022'ಕ್ಕೆ ವಿಧಾನ ಪರಿಷತ್ ಬುಧವಾರ ಒಪ್ಪಿಗೆ ನೀಡಿತು.

ಸುದ್ದಿ 2 ನಿಮಿಷ

ಬೆಂಗಳೂರು-ಮೈಸೂರು ಹೆದ್ದಾರಿ ಕಾಮಗಾರಿ: 5ಕ್ಕೆ ಗಡ್ಕರಿ ಪರಿಶೀಲನೆ

ಬೆಳಗಾವಿ: 'ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಜ. 5ರಂದು ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿಯನ್ನು ಪರಿಶೀಲಿಸಲಿದ್ದಾರೆ' ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಹೆದ್ದಾರಿಯಲ್ಲಿನ ಉಬ್ಬು, ತಗ್ಗುಗಳನ್ನು ಸರಿಪಡಿಸಲು ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಗುವುದು' ಎಂದು ತಿಳಿಸಿದರು.

'ಇದು ಎಕ್ಸ್‌ಪ್ರೆಸ್ ಹೆದ್ದಾರಿ. ಬೆಂಗಳೂರು-ಮೈಸೂರಿಗೆ ನೇರ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಉದ್ದೇಶ. ಇಂತಹ ರಸ್ತೆಗಳಲ್ಲಿ ಒಂದೆರಡು ಕಡೆ ಮಾತ್ರ ಸ್ಥಳೀಯ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಸಾಧ್ಯ. ಆದರೂ, ಮಂಡ್ಯ, ರಾಮನಗರ, ಚನ್ನಪಟ್ಟಣ ಮತ್ತು ಮದ್ದೂರು ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಗೂ ಸಂಪರ್ಕ ಕಲ್ಪಿಸುವ ಪ್ರಸ್ತಾವವನ್ನು ನಿತಿನ್ ಗಡ್ಕರಿಗೆ ಅವರಿಗೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಮರಿತಿಬ್ಬೇಗೌಡ ಅವರು ಮಾತನಾಡಿ, 'ಈ ಹೆದ್ದಾರಿಯಲ್ಲಿನ ಮೇಲ್ಸೇತುವೆಯ ಕೆಳಗೆ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಿಲ್ಲ. ಸರ್ವೀಸ್ ರಸ್ತೆ ಕೇವಲ ಏಳೂವರೆ ಮೀಟರ್ ಅಗಲವಿದೆ. ಈ ಯೋಜನೆಯ ಉಸ್ತುವಾರಿ ಅಧಿಕಾರಿ ಶ್ರೀಧರ್ ಯಾರಿಗೂ ಸಿಗುತ್ತಿಲ್ಲ. ಅವರೇನಾದರೂ ಮಂಡ್ಯದವರಿಗೆ ಸಿಕ್ಕರೆ ಕಟ್ಟಿ ಹಾಕಿ ಚಾಟಿಯಿಂದ ಹೊಡೆಯುತ್ತಾರೆ. ಮಂಡ್ಯ ಭಾಗದಲ್ಲಿ ಸಾವಿರಾರು ಎಕರೆ ಭೂಮಿ ಸ್ವಾಧೀನವಾಗಿದೆ. ಆದರೆ, ಆ ಭಾಗದ ರೈತರು ರಸ್ತೆ ಬಳಸದಂತೆ ಯೋಜನೆ ರೂಪಿಸಲಾಗಿದೆ. ಹೀಗಾದರೆ, ಆ ಭಾಗ ಅಭಿವೃದ್ಧಿಯಾಗುವುದು ಹೇಗೆ' ಎಂದು ಪ್ರಶ್ನಿಸಿದರು.

ಚನ್ನಮ್ಮ, ರಾಯಣ್ಣ, ಗಾಂಧಿ, ಅಂಬೇಡ್ಕರ್ ಪ್ರತಿಮೆಗೆ ಶಂಕುಸ್ಥಾಪನೆ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದ ಆವರಣದಲ್ಲಿ ಕಿತ್ತೂರು ರಾಣಿ ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪನೆಗೆ ಗುರುವಾರ ಗುದ್ದಲಿ ಪೂಜೆ ನಡೆಯಲಿದೆ.

ಬೆಳಿಗ್ಗೆ 10.15ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಪತಿ ಬಸವರಾಜ ಹೊರಟ್ಟಿ, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್ ಅವರು ಭಾಗವಹಿಸಲಿದ್ದಾರೆ.

ಗುತ್ತಿಗೆದಾರರಿಗೆ ₹6,333 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕೋಪಯೋಗಿ ಇಲಾಖೆಯು ಗುತ್ತಿಗೆದಾರರಿಗೆ 2022ರ ನವೆಂಬರ್ ಅಂತ್ಯಕ್ಕೆ ₹6,333.28 ಕೋಟಿ ಬಾಕಿ ಪಾವತಿಸಬೇಕಾಗಿದೆ.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿರುವ ಲೋಕೋಪಯೋಗಿ ಇಲಾಖೆ ಸಚಿವ ಸಿ.ಸಿ. ಪಾಟೀಲ, 'ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ಒಳಗೆ ಬಾಕಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲಾಗುವುದು' ಎಂದು ಭರವಸೆ ನೀಡಿದರು.

'ಅನುದಾನ ಮಂಜೂರಾಗದಿದ್ದರೂ ಶಾಸಕರು ಒತ್ತಡ ಹೇರಿ ರಸ್ತೆ ಕಾಮಗಾರಿಗಳನ್ನು ಮಾಡಿಸಿಕೊಳ್ಳುತ್ತಾರೆ. ಹೀಗಾಗಿ, ಅಪಾರ ಪ್ರಮಾಣದ ಬಿಲ್ ಬಾಕಿ ಉಳಿದಿದೆ. ಹಿರಿತನ ಆಧಾರದ ಮೇಲೆ ಗುತ್ತಿಗೆದಾರರಿಗೆ ಬಾಕಿ ಉಳಿದಿರುವ ಹಣವನ್ನು ಪಾವತಿಸಲಾಗುವುದು' ಎಂದು ವಿವರಿಸಿದರು.

ಶರಣಗೌಡ ಬಯ್ಯಾಪುರ ಪ್ರತಿಕ್ರಿಯಿಸಿ, 'ಮಾರ್ಚ್ ವೇಳೆಗೆ ₹10 ಸಾವಿರ ಕೋಟಿಯಷ್ಟಾಗುತ್ತದೆ. ಗುತ್ತಿಗೆದಾರರು ಸಹ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ತಲುಪಿದ್ದಾರೆ. ತ್ವರಿತಗತಿಯಲ್ಲಿ ಬಿಲ್ ಪಾವತಿಸಬೇಕು' ಎಂದು ಒತ್ತಾಯಿಸಿದರು.

ರೈತರ ಆದಾಯ ಕುಸಿತ: ಸಿದ್ದರಾಮಯ್ಯ ಕಳವಳ

ವಿಧಾನಸಭೆಯಲ್ಲಿ ಅತಿವೃಷ್ಟಿ, ಅನಾವೃಷ್ಟಿ ವಿಷಯ ಪ್ರಸ್ತಾಪ • ಎಪಿಎಂಸಿ ಕಾಯ್ದೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ರಧಾನಿ ಮೋದಿಯವರು 2023ರ ವೇಳೆಗೆ ರೈತರ ಆದಾಯ ದ್ವಿಗುಣ ಮಾಡುವುದಾಗಿ ಹೇಳಿದ್ದರು. ಆದರೆ, ದ್ವಿಗುಣ ಮಾಡುವುದು ಹಾಗಿರಲಿ, ಅವರ ಆದಾಯ ಅತಿ ವೇಗವಾಗಿ ಕ್ಷೀಣಿಸುತ್ತಿದೆ ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬುಧವಾರ ನಿಯಮ 69 ರಡಿ ಅತಿವೃಷ್ಟಿ ಮತ್ತು ಅನಾವೃಷ್ಟಿಯ ವಿಷಯವನ್ನು ಪ್ರಸ್ತಾಪಿಸಿ, ರೈತರ ಆದಾಯ ಪ್ರಪಾತಕ್ಕೆ ಹೋಗುತ್ತಿದ್ದರೆ, ಅದಾನಿ ಮತ್ತು ಅಂಬಾನಿಯವರ ಆದಾಯ ಏರುತ್ತಿದೆ. ವಿವಿಧ ಉದ್ಯಮಿಗಳಿಗೆ ಸೇರಿ ₹10 ಲಕ್ಷ ಕೋಟಿಯನ್ನು ಎನ್‌ಪಿಎ ಮಾಡಿದ್ದಾರೆ ಎಂದು ಕಿಡಿಕಾರಿದರು.

ಅಡಿಕೆ ಬೆಳೆಗಾರರ ಸಂಕಷ್ಟವನ್ನು ಪ್ರಸ್ತಾಪಿಸಿದ ಅವರು, ಅಡಿಕೆ ಬೆಳೆಗಾರರನ್ನು ಸರ್ಕಾರವೇ ನಾಶ ಮಾಡಲು ಹೊರಟಂತಿದೆ. ಭೂತಾನ್, ಬರ್ಮಾ, ವಿಯೆಟ್ನಾಂನಿಂದ ಅಡಿಕೆ ಆಮದು ಮಾಡಿಕೊಳ್ಳಲಾಗುತ್ತಿದೆ. ಬರ್ಮಾದಿಂದ ಕದ್ದು ಅಡಿಕೆ ಸಾಗಾಟ ಮಾಡಲಾಗುತ್ತಿದೆ. ಸುಮಾರು 17 ಸಾವಿರ ಟನ್ ಅಡಿಕೆ ಆಮದು ಮಾಡಿಕೊಳ್ಳಲಾಗಿದೆ. ಇದರಿಂದ ಒಂದು ಕ್ವಿಂಟಲ್‌ಗೆ ₹55 ಸಾವಿರ ಇದ್ದ ಬೆಲೆ ₹35 ಸಾವಿರದಿಂದ ₹40 ಸಾವಿರಕ್ಕೆ ಇಳಿದಿದೆ ಎಂದರು.

ಗೋಹತ್ಯೆ ನಿಷೇಧ ಕಾಯ್ದೆ ಜಾರಿ ಬಂದ ನಂತರ ರೈತರು ಸಂತೆಗಳಲ್ಲಿ ಜಾನುವಾರುಗಳನ್ನು ಮಾರಾಟ ಮಾಡದಂತಾಗಿದೆ. ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಜಾರಿಗೊಳಿಸಿದ ನಂತರ ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸಿದರು, ಇದರಿಂದಾಗಿ ಈ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಾಸು ತೆಗೆದುಕೊಂಡಿತು. ಆದರೆ ರಾಜ್ಯದಲ್ಲಿ ಎ.ಪಿ.ಎಂ.ಸಿ ಕಾಯ್ದೆಯನ್ನು ಸರ್ಕಾರ ವಾಪಾಸು ಪಡೆದುಕೊಂಡಿಲ್ಲ. ತಕ್ಷಣವೇ ಅದನ್ನು ಹಿಂಪಡೆಯಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ರಾಜ್ಯದಲ್ಲಿ ಎಂಎಸ್‌ಪಿಯನ್ನು ಕೇವಲ 19 ಉತ್ಪನ್ನಗಳಿಗೆ ನೀಡಲಾಗುತ್ತಿದೆ. ಇದನ್ನು ಹೆಚ್ಚು ಮಾಡಬೇಕು, ರೋಗಗಳಿಂದ ನಷ್ಟಕ್ಕೀಡಾದ ತೊಗರಿ, ಅಡಿಕೆ, ರಾಗಿ,-ಮೆಕ್ಕೆಜೋಳ ಮುಂತಾದ ಬೆಳೆಗಾರರಿಗೆ ಪರಿಹಾರ ನೀಡುವ ಕೆಲಸ ಮಾಡಬೇಕು. ಬೆಂಬಲ ಬೆಲೆ ಅಡಿ ಖರೀದಿಸುವ ಕೃಷಿ ಉತ್ಪನ್ನಗಳ ಪ್ರಮಾಣವನ್ನು ಹೆಚ್ಚು ಮಾಡಬೇಕು ಮತ್ತು ಸ್ವಾಮಿನಾಥನ್ ವರದಿ ಯಥಾವತ್ತು ಜಾರಿ ಮಾಡಬೇಕು ಎಂದೂ ಒತ್ತಾಯಿಸಿದರು.

> ನಟೆ ರೋಗದಿಂದ 2 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ ನಷ್ಟವಾಗಿದೆ. ₹1,000 ಕೋಟಿ ಪ್ಯಾಕೇಜ್ ನೀಡಬೇಕು, ಪ್ರತಿ ಎಕರೆಗೆ ತಲಾ ₹25 ಸಾವಿರ ಪರಿಹಾರ ನೀಡಬೇಕು
> **ಅಜಯ್ ಸಿಂಗ್**, ವಿರೋಧ ಪಕ್ಷದ ಮುಖ್ಯ ಸಚೇತಕ

> ಚರ್ಮಗಂಟುರೋಗದಿಂದ ಮೂಕ ಪ್ರಾಣಿಗಳಿಗೆ ರಕ್ಷಣೆ ಬೇಕಾಗಿದೆ. ಅದಕ್ಕೆ ಹೆಚ್ಚಿನ ಅನುದಾನ ನೀಡುವ ಜತೆಗೆ ರೋಗ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ
> **ಎಚ್.ಡಿ. ರೇವಣ್ಣ**, ಜೆಡಿಎಸ್ ಶಾಸಕ

'ಹಳ್ಳೀಲಿ ಹೋಗಿ ಮಲಗಿದರೆ ಸಾಲದು'

'ಹಳ್ಳೀಲಿ ಹೋಗಿ ಮಲಗ್ತಾ ಇದ್ದೀಯಲ್ಲಪ್ಪ ನೀನು. ಅಲ್ಲಿ ಹೋಗಿ ಹಾಸಿಗೆ ಹಾಸಿ ಮಲಗಿದರೆ ಆಗಲ್ಲ, ಅಲ್ಲಿನ ಕಷ್ಟಗಳ ಬಗ್ಗೆ ತಿಳಿದುಕೊಳ್ಳಬೇಕು. ಸಚಿವರೆಂದರೆ ಸರ್ಕಾರ ಇದ್ದಂತೆ, ಅಲ್ಲಿ ಹೋಗಿ ಜನರ ಸಮಸ್ಯೆಗಳ ಬಗ್ಗೆ ತಿಳಿದುಕೊಂಡಿದ್ದೀಯಾ'.

ಹೀಗೆಂದು ಕಂದಾಯ ಸಚಿವ ಆರ್.ಅಶೋಕ ಅವರನ್ನು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು. ಜಾನುವಾರುಗಳಿಗೆ ಚರ್ಮಗಂಟು ರೋಗದ ಬಗ್ಗೆ ಪ್ರಸ್ತಾಪಿಸಿದಾಗ ಪಶುಸಂಗೋಪನೆ ಸಚಿವ ಪ್ರಭುಚವ್ಹಾಣ್ ವಿಧಾನಸಭೆಯಲ್ಲಿ ಇರಲಿಲ್ಲ.

'ಪ್ರಭು ಚವ್ಹಾಣ್ ಇದ್ದಿದ್ದರೆ ನಿಮ್ಮ ಪ್ರಶ್ನೆ, ಲೆಕ್ಕವನ್ನು ಕೇಳಿ ಓಡಿ ಹೋಗುತ್ತಿದ್ದರು' ಎಂಬ ಅರ್ಥದಲ್ಲಿ ಅಶೋಕ ಲಘುದಾಟಿಯಲ್ಲಿ ಹೇಳಿದರು. ಆಗ, ಅಶೋಕ ಅವರ ಗ್ರಾಮವಾಸ್ತವ್ಯದ ಚಟಾಕಿ ಹಾರಿಸಿದ ಸಿದ್ದರಾಮಯ್ಯ, 'ಅವರಿಗೆ ಗೊತ್ತಾಗಲ್ಲ ಬಿಡಿ, ನಿಮಗೆ ಲೆಕ್ಕ ಗೊತ್ತಾಗುತ್ತೋ' ಎಂದು ಮರು ಪ್ರಶ್ನೆ ಹಾಕಿದರು.

ಜನವರಿ ಮೊದಲ ವಾರದಲ್ಲಿ ರಾಸುಗಳಿಗೆ ಲಸಿಕೆ

ಜನವರಿ ಮೊದಲ ವಾರದೊಳಗೆ ಚರ್ಮಗಂಟು ರೋಗದ ಜಾನುವಾರುಗಳಿಗೆ ಲಸಿಕೆ ಹಾಕಲಾಗುವುದು ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಹೇಳಿದರು.

ಸಿದ್ದರಾಮಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈವರೆಗೆ 92 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಲಾಗಿದೆ. ಇನ್ನುಳಿದ ಜಾನುವಾರುಗಳಿಗೆ ಲಸಿಕೆ ಹಾಕಲು ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದರು.

ಚರ್ಮದ ಗಂಟು ರೋಗದಿಂದ ಸಾವನ್ನಪ್ಪಿದ ಕರುಗಳಿಗೆ ₹ 5 ಸಾವಿರ, ಎಮ್ಮೆ, ಹಸುಗಳಿಗೆ ₹20 ಸಾವಿರ, ಎತ್ತುಗಳಿಗೆ ₹ 30 ಸಾವಿರ ರೂ. ಪರಿಹಾರವನ್ನು ರೈತರ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗಿದೆ. ಈ ವರೆಗೆ ಒಟ್ಟು₹ 37 ಕೋಟಿ ಪರಿಹಾರ ನೀಡಲಾಗಿದೆ ಎಂದರು.

ಭ್ರಷ್ಟರ ವಿರುದ್ಧ ಕ್ರಮ: ಭರವಸೆಗಳ ಸಮಿತಿ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅವ್ಯವಹಾರ, ಹಣ ದುರುಪಯೋಗದಂತಹ ಪ್ರಕರಣಗಳಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದೇ, ಅಂತಹ ಆರೋಪಿಗಳು ಸರ್ಕಾರದ ಎಲ್ಲ ಸೌಲಭ್ಯ ಪಡೆದುಕೊಳ್ಳಲು ಅವಕಾಶ ಕಲ್ಪಿಸಿರುವ ಕ್ರಮಕ್ಕೆ ವಿಧಾನಸಭೆಯ ಭರವಸೆಗಳ ಸಮಿತಿ ಆಕ್ಷೇಪ ವ್ಯಕ್ತಪಡಿಸಿದೆ.

ಬಿಜೆಪಿಯ ಕೆ.ರಘುಪತಿ ಭಟ್ ಅಧ್ಯಕ್ಷತೆಯ ಸಮಿತಿಯು ಲೋಕೋಪಯೋಗಿ, ಆರ್ಥಿಕ, ವಸತಿ, ಸಾರಿಗೆ ಇಲಾಖೆಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಿದ ವರದಿಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ, ಗಮನಸೆಳೆಯುವ ಸೂಚನೆ, ಬಜೆಟ್ ಮೇಲಿನ ಚರ್ಚೆ ವೇಳೆ ಸಚಿವರು ನೀಡಿದ ಭರವಸೆ ಈಡೇರಿವೆಯೇ ಎಂಬ ಬಗ್ಗೆ ಸಮಿತಿ ಪರಿಶೀಲಿಸಿದೆ. ಇಲಾಖೆ ಅಧಿಕಾರಿಗಳಿಂದ ವಿವರಣೆಯನ್ನೂ ಕೇಳಿದೆ. ಅದರ ಆಧಾರದ ಮೇಲೆ ತನ್ನ ತಕರಾರನ್ನು ದಾಖಲಿಸಿದೆ.ಸಚಿವರು ನೀಡಿದ ಭರವಸೆಗಳು ಅನೇಕ ವರ್ಷ ಕಳೆದರೂ ಈಡೇರಿಲ್ಲ ಎಂದು ಸಮಿತಿ ಆಕ್ಷೇಪಿಸಿದೆ.

ಅದರಲ್ಲೂ ಅವ್ಯವಹಾರದ ಪ್ರಕರಣಗಳಲ್ಲಿ ಕ್ರಮವನ್ನೇ ಜರುಗಿಸಿಲ್ಲ. ಇಲಾಖೆಯ ಮುಖ್ಯಸ್ಥರೇ ತಮ್ಮ ಅಧೀನ ಸಿಬ್ಬಂದಿಗೆ ರಕ್ಷಣೆ ನೀಡುವಲ್ಲಿ ಸಹಕಾರ ನೀಡುತ್ತಿರಬಹುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

2011-12ರಲ್ಲಿ ಲೋಕೋಪಯೋಗಿ ಇಲಾಖೆಯ ಮಾಗಡಿ ಉಪವಿಭಾಗದಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯುವಾಗ ನಿಯಮಗಳನ್ನು ಉಲ್ಲಂಘಿಸಲಾಗಿತ್ತು. ಈ ಬಗ್ಗೆ ಸದನ ಸಮಿತಿ ರಚಿಸಿ, ವಿಚಾರಣೆ ನಡೆಸಲಾಗಿತ್ತಲ್ಲದೇ, ವರದಿಯನ್ನು ಸದನದಲ್ಲಿ ಮಂಡಿಸಲಾಗಿತ್ತು. ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆಯೇ ಎಂದು 2013ರಲ್ಲಿ ಶಾಸಕರಾಗಿದ್ದ ಕೆ.ಬಿ. ಕೋಳಿವಾಡ ಪ್ರಶ್ನೆ ಕೇಳಿದ್ದರು.

ನಿಯಮ ಉಲ್ಲಂಘನೆ ಮತ್ತು ಹಣ ದುರುಪಯೋಗವಾಗಿರುವ ಬಗ್ಗೆ ಸದನ ಸಮಿತಿಯ ಶಿಫಾರಸಿನಂತೆ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿತ್ತು. ಮುಖ್ಯ ಎಂಜಿನಿಯರ್ ಸೇರಿದಂತೆ 15 ಜನ ಅಧಿಕಾರಿ/ನೌಕರರ ವಿರುದ್ಧ ಹಣ ದುರುಪಯೋಗದ ಆರೋಪ ಹೊರಿಸಲಾಗಿತ್ತು.

ಈ ಪೈಕಿ 12 ಜನ ಅಧಿಕಾರಿಗಳ ವಿರುದ್ಧ ಜಂಟಿ ವಿಚಾರಣೆಗೆ 2016ರಲ್ಲಿ ಆದೇಶಿಸಲಾಗಿತ್ತು. ಅಂದು ಲೋಕೋಪಯೋಗಿ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧಕರಾಗಿದ್ದ ಆರ್. ಗೋವಿಂದರಾಜು ಅವರ ಹೆಸರೂ ಇತ್ತು. ಇವರು ರಾಜ್ಯ ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರಾಗಿದ್ದು, ಇವರ ವಿರುದ್ಧದ ತನಿಖೆಯನ್ನು ಮಾತ್ರ ಇಲಾಖೆಯಾದ ಆರ್ಥಿಕ ಇಲಾಖೆಗೆ ವರ್ಗಾಯಿಸಲಾಗಿತ್ತು. ಆರ್ಥಿಕ ಇಲಾಖೆಯು ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಿತ್ತು. ಏತನ್ಮಧ್ಯೆ, 2021ರ ಮಾರ್ಚ್ 3ರಂದು ಆಡಳಿತ ಮತ್ತು ಸಿಬ್ಬಂದಿ ಇಲಾಖೆ ಹೊರಡಿಸಿದ್ದ ಆದೇಶದಲ್ಲಿ ಗೋವಿಂದರಾಜು ಹೆಸರನ್ನು ಪಟ್ಟಿಯಿಂದ ಕೈಬಿಟ್ಟು ತಿದ್ದುಪಡಿ ಮಾಡಲಾಗಿದೆ. ಈ ರೀತಿಯ ಕ್ರಮ ಸರಿಯಲ್ಲ ಎಂದು ವರದಿ ಹೇಳಿದೆ.

ವಿರಳ ಹಾಜರಿ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಬುಧವಾರ ನಡೆದ ವಿಧಾನ ಪರಿಷತ್ತಿನ ಪ್ರಶ್ನೋತ್ತರ ವೇಳೆ ಬಿಜೆಪಿಯ ಸದಸ್ಯರು ಕಡಿಮೆ ಸಂಖ್ಯೆಯಲ್ಲಿ ಹಾಜರಾದರು
–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

'ವೈಶ್ಯವಾಣಿ ಜಾತಿ ಪ್ರವರ್ಗ– 3ಬಿಗೆ ಸೇರ್ಪಡೆ'

ಬೆಳಗಾವಿ: 'ಹಿಂದುಳಿದ ವರ್ಗಗಳ ಜಾತಿ ಪಟ್ಟಿ ಪ್ರವರ್ಗ -3ಬಿ ಅಡಿಯಲ್ಲಿ 'ವೈಶ್ಯವಾಣಿ' ಸಮುದಾಯವನ್ನು ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಹರತಾಳು ಹಾಲಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರವರ್ಗ 3ಬಿಗೆ 'ವೈಶ್ಯವಾಣಿ' ಜಾತಿಯನ್ನು ಸೇರಿಸಬೇಕೆಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಈಗಾಗಲೇ ಸರ್ಕಾರಕ್ಕೆ ಸಲಹೆ ನೀಡಿದೆ' ಎಂದರು.

'ವೈಶ್ಯವಾಣಿ' ಸಮಾಜ ಹಿಂದುಳಿದ ಸಮುದಾಯವಾಗಿದ್ದು, ಜಾತಿವಾರು ಪಟ್ಟಿಗೆ ಸೇರಿಸದೇ ಇರುವುದರಿಂದ ಈ ವರ್ಗದ ಮಕ್ಕಳು ಶೈಕ್ಷಣಿಕ ಆರ್ಥಿಕ ಮತ್ತು ಇತರ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ' ಎಂದು ಹಾಲಪ್ಪ ಹೇಳಿದರು.

ಸಂಕ್ಷಿಪ್ತ ಸುದ್ದಿ

ಎಸ್‌ಸಿ, ಎಸ್‌ಟಿ: ಪರಿಷ್ಕೃತ ಮೀಸಲಾತಿ ಹುದ್ದೆ ನಿಗದಿ

ಬೆಳಗಾವಿ: ರಾಜ್ಯ ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ 17 ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ 7ರಷ್ಟು ಮೀಸಲಾತಿಗೆ ಅನುಗುಣವಾಗಿ ಹುದ್ದೆಗಳನ್ನು (ರಿಕ್ತ ಸ್ಥಾನ) ಗುರುತಿಸಿ ಬುಧವಾರ ಆದೇಶ ಹೊರಡಿಸಲಾಗಿದೆ.

ಒಟ್ಟು 100 ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ 1, 9, 15, 23, 27,33, 41,46, 49, 53, 59, 67, 75, 81, 89, 93, 96 (ಒಟ್ಟು 17), ಪರಿಶಿಷ್ಟ ಪಂಗಡಕ್ಕೆ 3, 18, 32, 39, 62, 71, 88 (ಒಟ್ಟು 7) ಹುದ್ದೆಗಳನ್ನು ಮೀಸಲು ಹುದ್ದೆಗಳೆಂದು ನಿಗದಿಪಡಿಸಲಾಗಿದೆ.

ಹುದ್ದೆಗಳ ರಿಕ್ತ ಸ್ಥಾನಗಳನ್ನು ಪರಿಷ್ಕರಿಸಿದ್ದರಿಂದ ಇನ್ನು ಮುಂದೆ ಶೇಕಡಾವಾರು ಮೀಸಲಾತಿಯು ಪ್ರವರ್ಗ 1– 4, ಪ್ರವರ್ಗ 2ಎ– 15, ಪ್ರವರ್ಗ 2ಬಿ –4, ಪ್ರವರ್ಗ 3ಎ– 4, ಪ್ರವರ್ಗ 3ಬಿ– 5, ಪರಿಶಿಷ್ಟ ಜಾತಿ– 17, ಪರಿಶಿಷ್ಟ ವರ್ಗ– 7, ಸಾಮಾನ್ಯ ಅರ್ಹತೆಗೆ – 44 (ಒಟ್ಟು 100) ಲಭ್ಯವಾಗಲಿದೆ.

ಈ ಆದೇಶ ತಕ್ಷಣದಿಂದ ಜಾರಿಗೆ ಬರಲಿದೆ. ಆದರೆ, ಯಾವುದೇ ವೃಂದದ ಹುದ್ದೆಗಳಿಗೆ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆ ಆರಂಭಗೊಂಡಿದ್ದರೆ, ಅಂಥ ಪ್ರಕ್ರಿಯೆಯನ್ನು ಈ ಹಿಂದಿನ ಮೀಸಲಾತಿಯಂತೆ (ಎಸ್‌ಸಿ 15, ಎಸ್‌ಟಿ 3 ಹುದ್ದೆ) ಪೂರ್ಣಗೊಳಿಸಬೇಕು ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

'ವಿಧಿ ವಿಜ್ಞಾನ ವರದಿ 15 ದಿನಗಳಲ್ಲಿ ಲಭ್ಯ'

ಬೆಳಗಾವಿ: 'ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ 15 ದಿನಗಳಲ್ಲಿ ಲಭ್ಯವಾಗುವಂತೆ ಮಾಡಲು ಕ್ರಮ ವಹಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಳಗಾವಿ ನಗರ ಪೊಲೀಸ್ ಆಯುಕ್ತರ ನೂತನ ಕಚೇರಿಯನ್ನು ಬುಧವಾರ ಉದ್ಘಾಟಿಸಿ ಮಾತನಾಡಿ,'ಈ ಹಿಂದೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಕೈಸೇರಲು ಮೂರು ತಿಂಗಳು ಹಿಡಿಯುತ್ತಿತ್ತು. ಸದ್ಯ 30 ದಿನದಲ್ಲಿ ವರದಿ ನೀಡಲಾಗುತ್ತಿದೆ' ಎಂದರು.

'ರಾಜ್ಯ ಪೊಲೀಸ್ ವಸತಿ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ಈ ಹಣಕಾಸು ವರ್ಷದಲ್ಲೇ 2,500 ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗುವುದು' ಎಂದು ಹೇಳಿದರು.

'ಸರ್ಕಾರದ ವತಿಯಿಂದ 116 ಪೊಲೀಸ್ ಠಾಣೆಗಳ ಹೊಸ ಕಟ್ಟಡ ನಿರ್ಮಿಸಲಾಗಿದೆ. ಎಲ್ಲಾ ಪೊಲೀಸ್ ಠಾಣೆಗಳು ಉದ್ಘಾಟನೆ ಹಂತದಲ್ಲಿವೆ. ಪೊಲೀಸ್ ಸಾರಿಗೆ ವ್ಯವಸ್ಥೆ ಬಲಪಡಿಸಲು ₹80 ಕೋಟಿ ನೀಡಲಾಗಿದೆ. 300ಕ್ಕೂ ಅಧಿಕ ಜೀಪ್ ಸ್ಕಾರ್ಪಿಯೊ, ಬೊಲೇರೊ ವಾಹನಗಳನ್ನು ಖರೀದಿಸಲಾಗಿದೆ. ವಿವಿಧ ಹಂತದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೂ ವಾಹನಗಳನ್ನು ಒದಗಿಸಲು ಸರ್ಕಾರ ಆದೇಶ ಹೊರಡಿಸಿದೆ' ಎಂದರು.

'ಕರ್ನಾಟಕ- ಮಹಾರಾಷ್ಟ್ರ ಗಡಿ ತಂಟೆ ಉಂಟಾದಾಗ ನಮ್ಮ ಪೊಲೀಸರು ಸರಿಯಾದ ನಿರ್ಧಾರ ತೆಗೆದುಕೊಂಡು ನಿಭಾಯಿಸಿದ್ದಾರೆ' ಎಂದು ತಿಳಿಸಿದರು.

ಹಾಸನ: ಕೊರಿಯರ್ ಅಂಗಡಿಯಲ್ಲಿ ಮಿಕ್ಸಿ ಸ್ಫೋಟ ಪ್ರಕರಣ

ವಿಚ್ಛೇದಿತ ಮಹಿಳೆ ಕೊಲೆಗೆ ಪ್ರಿಯಕರನ ಯತ್ನ

ಹಾಸನ: 'ವಿಚ್ಛೇದಿತ ಮಹಿಳೆಯನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆಯ ಪ್ರಿಯಕರನೇ ಮಿಕ್ಸಿಯಲ್ಲಿ ಡಿಟೋನೇಟರ್ (ಸ್ಫೋಟಕ) ಇಟ್ಟಿದ್ದ' ಎಂದು ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ತಿಳಿಸಿದರು.

'ಹಾಸನದ ವಸಂತಾ (40) ಅವರು ಮ್ಯಾಟ್ರಿಮೋನಿಯಲ್ಲಿ ಹಾಕಿದ್ದ ತಮ್ಮ ವಿವರ ನೋಡಿದ್ದ ಬೆಂಗಳೂರಿನ ಆರೋಪಿ ಅನೂಪ್ ಕುಮಾರ್ (42) ಮದುವೆ ಪ್ರಸ್ತಾಪ ಮಾಡಿದ್ದ. ಅದಕ್ಕೆ ಒಪ್ಪಿದ್ದರಿಂದ ಸಾವಿರಾರು ರೂಪಾಯಿ ಮೌಲ್ಯದ ಉಡುಗೊರೆ ಕಳುಹಿಸಿದ್ದ. ಅದೇ ಕಾರಣಕ್ಕೆ ಮಹಿಳೆ ಅಂತರ ಕಾಯ್ದುಕೊಂಡಿದ್ದರು. ಆದರೂ ಆರೋಪಿ ಪದೇಪದೇ ಫೋನ್ ಕರೆ ಮಾಡಿ ಹಾಗೂ ಮನೆ ಬಳಿಗೆ ಬಂದು ಮದುವೆಗೆ ಒತ್ತಾಯಿಸಿದ್ದ. ನಂತರ ಮಹಿಳೆಯು ಬೆಂಗಳೂರಿನ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಮುಂದೆ ಯಾವುದೇ ತೊಂದರೆ ನೀಡದಂತೆ ಆರೋಪಿಯಿಂದ ಮುಚ್ಚಳಿಕೆ ಬರೆಸಿಕೊಂಡಿದ್ದರು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ನಂತರ ಮನೆ ಬಳಿ ಬಂದಿದ್ದ ಆರೋಪಿಗೆ ಚಪ್ಪಲಿಯಲ್ಲಿ ಹೊಡೆದು ಅವಮಾನಿಸಿದ್ದರು. ಆಕ್ರೋಶಗೊಂಡ ಆತ ಸೇಡು ತೀರಿಸಿಕೊಳ್ಳಲು ಮಿಕ್ಸಿ ಕಳಿಸಿದ್ದ. ಮನೆಗೆ ಬಂದ ಪಾರ್ಸಲ್ ಬಿಚ್ಚಿ ನೋಡಿದ ಆಕೆ, ಮಿಕ್ಸಿ ಎಂದು ಗೊತ್ತಾಗಿ ಡಿ.26ರಂದು ಕೊರಿಯರ್ ಅಂಗಡಿಗೆ ವಾಪಸ್ ಕೊಟ್ಟಿದ್ದರು. ಕೊರಿಯರ್ ಮಾಡಿದವರ ಪೂರ್ಣ ವಿಳಾಸವಿಲ್ಲದ ಕಾರಣ ಅದನ್ನು ಬಿಚ್ಚಿ ಪರಿಶೀಲಿಸಲು ಮಾಲೀಕ ಶಶಿಕುಮಾರ್ ಮುಂದಾದಾಗ ಮಿಕ್ಸಿ ಸ್ಫೋಟಗೊಂಡಿತ್ತು. ಆರೋಪಿಗೆ ಸಹಕರಿಸಿದವರನ್ನು ಶೀಘ್ರ ಬಂಧಿಸಲಾಗುವುದು' ಎಂದರು.

ಮುಖ್ಯಮಂತ್ರಿ ಪುತ್ಥಳಿಗೆ ರಕ್ತ ಸುರಿದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕೆಂದು ಒತ್ತಾಯಿಸಿ ರೈತ ಸಂಘದ ಸದಸ್ಯರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ 52 ದಿನ ಪೂರೈಸಿದ್ದು, ಹೋರಾಟಗಾರರು ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ಥಳಿ ಮೇಲೆ ತಮ್ಮ ರಕ್ತ ಸುರಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು, ಕಾಂಕ್ರೀಟ್‌ನಿಂದ ತಯಾರಿಸಿದ್ದ ಮುಖ್ಯಮಂತ್ರಿಯ ಪುತ್ಥಳಿ ಇಟ್ಟು 30 ರೈತರು ಸಿರಿಂಜ್‌ನಿಂದ ರಕ್ತ ಸೆಳೆದು ಸುರಿದರು. 'ರೈತರಿಗೆ ಮೋಸ ಮಾಡಿದ ಮುಖ್ಯಮಂತ್ರಿಗೆ ರಕ್ತ ಕೊಡುತ್ತಿದ್ದೇವೆ. ಸಿಹಿ ಸುದ್ದಿ ಕೊಡುವುದಾಗಿ ಹೇಳಿ ಮಾತು ತಪ್ಪಿದ್ದಾರೆ' ಎಂದು ದೂರಿದರು.

ಡಿ.30ರಂದು ಮನ್‌ಮುಲ್ ಆವರಣದಲ್ಲಿ ಮೆಗಾ ಡೇರಿಗೆ ಚಾಲನೆ ನೀಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಬರಲಿರುವ ಹಿನ್ನೆಲೆಯಲ್ಲಿ, ಭದ್ರತೆ ಸಲುವಾಗಿ ಪೊಲೀಸರು ರೈತರ ಧರಣಿ ಸ್ಥಳವನ್ನು ತೆರವುಗೊಳಿಸಿದರು. ಹೋರಾಟಗಾರರನ್ನು ಬಂಧಿಸಿ, ಶಾಮಿಯಾನ, ವೇದಿಕೆ ಕಿತ್ತು ಹಾಕಿದರು.

ರೈತಸಂಘದ ಸದಸ್ಯರು ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪುತ್ಥಳಿ ಮೇಲೆ ತಮ್ಮ ರಕ್ತ ಸುರಿದು ಪ್ರತಿಭಟಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಪ್ರಶಸ್ತಿ ಪ್ರದಾನ

ಕಾಂಗ್ರೆಸ್‌ನ ದೇಶಪಾಂಡೆ 'ಅತ್ಯುತ್ತಮ ಶಾಸಕ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹಳಿಯಾಳ ಕ್ಷೇತ್ರದ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಅವರಿಗೆ ವಿಧಾನಸಭೆಯಲ್ಲಿ ಬುಧವಾರ 2022ನೇ ಸಾಲಿನ 'ಅತ್ಯುತ್ತಮ ಶಾಸಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಲಾಪ ಆರಂಭವಾಗುತ್ತಿದ್ದಂತೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಶಸ್ತಿಗೆ ದೇಶಪಾಂಡೆ ಅವರನ್ನು ಆಯ್ಕೆ ಮಾಡಿರುವುದಾಗಿ ಪ್ರಕಟಿಸಿದರು. ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜತೆ ಪ್ರಶಸ್ತಿ ಪ್ರದಾನ ಮಾಡಿದರು.

'ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ದೇಶಪಾಂಡೆ, ಸಚಿವರಾಗಿ ಸಣ್ಣ ಕೈಗಾರಿಕೆ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸೇರಿದಂತೆ ಅನೇಕ ಖಾತೆಗಳನ್ನು ನಿರ್ವಹಿಸಿದ್ದಾರೆ.ಸದನದ ಚೌಕಟ್ಟು ಮೀರದಂತೆ ಮಾತನಾಡುವ ಅನುಭವ ಅವರದ್ದು' ಎಂದರು.

ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ ಅವರಿಗೆ 'ಅತ್ಯುತ್ತಮ ಶಾಸಕ ಪ್ರಶಸ್ತಿ'ಯನ್ನು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರದಾನ ಮಾಡಿದರು. ಈ ವೇಳೆ, ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇದ್ದರು

'ದೇಶಪಾಂಡೆ ಅವರನ್ನು ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಪ್ರಶಸ್ತಿಯ ಗೌರವ ಹಾಗೂ ಮೌಲ್ಯ ಹೆಚ್ಚಿಸಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

'ಅತ್ಯುತ್ತಮ ಸಂಸದೀಯ ಪಟುವಾಗಿರುವ ಆರ್.ವಿ. ದೇಶಪಾಂಡೆ ಅವರು ಪ್ರಶಸ್ತಿಗೆ ಆಯ್ಕೆಯಾಗಿರುವುದು ಸಂತಸದ ವಿಷಯ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ದೇಶಪಾಂಡೆ, 'ರಾಜಕಾರಣಿಗಳ ಬಗ್ಗೆ ಜನಾಭಿಪ್ರಾಯ ಬದಲಾಗಿರುವುದು ಕಳವಳದ ಸಂಗತಿ. ಸಾರ್ವಜನಿಕ ಜೀವನದಲ್ಲಿ ರಾಜಕಾರಣಿ ಎಂದು ಪರಿಚಯಿಸಿಕೊಳ್ಳಲು ಹಿಂದೇಟು ಹಾಕುವಂತಾಗಿದೆ. ಶಾಸಕರಾದವರು ಶಾಸನ ಸಭೆಯ ಗೌರವ, ಶಿಸ್ತು ಕಾಪಾಡಿಕೊಳ್ಳಬೇಕು' ಎಂದರು.

ಸಿದ್ದರಾಮಯ್ಯ ಹಾಸ್ಯ ಚಟಾಕಿ

ಸಿದ್ದರಾಮಯ್ಯ ಅವರ ವಯಸ್ಸಿನ ಬಗ್ಗೆ ತನಿಖೆ ನಡೆಸುವ ಕುರಿತು ವಿಧಾನಸಭೆಯಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು.

'ದೇಶಪಾಂಡೆಗೂ ನನಗೂ ನಾಲ್ಕೈದು ತಿಂಗಳು ವ್ಯತ್ಯಾಸ. ಅವನು ಸ್ವಲ್ಪ ವಯಸ್ಸಾದವನಂತೆ ಕಾಣ್ತಾನೆ. ನಂಗಿನ್ನೂ ವಯಸ್ಸಾಗಿಲ್ಲ' ಎಂದು ಸಿದ್ದರಾಮಯ್ಯ ಚಟಾಕಿ ಹಾರಿಸಿದರು. ಹೀಗೆ ಹೇಳುತ್ತಿದ್ದಂತೆ, 'ನಿಮ್ಮ ಜನನ ಪ್ರಮಾಣಪತ್ರದ ನಿಖರತೆ ಬಗ್ಗೆಯೇ ಅನುಮಾನವಿದೆ. ನಿಮಗೆ ಅಷ್ಟು ವಯಸ್ಸಾಗಿಲ್ಲ ಬಿಡಿ. ತನಿಖೆಗೆ ಒಳಪಡಿಸಿದರೆ ನಿಜ ಗೊತ್ತಾಗುತ್ತದೆ' ಎಂದು ಕಾಂಗ್ರೆಸ್ ಕೃಷ್ಣಬೈರೇಗೌಡ ಹೇಳಿದಾಗ ಚರ್ಚೆ ಮತ್ತೊಂದು ಮಗ್ಗುಲಿಗೆ ತಿರುಗಿತು.

ಮಧ್ಯಪ್ರವೇಶಿಸಿದ ಕಾಗೇರಿ, 'ತನಿಖೆಗೆ ಆದೇಶಿಸುವುದು ಕಷ್ಟ. ಸದನ ಸಮಿತಿಯನ್ನೇ ಮಾಡಬೇಕು' ಎಂದಾಗ ಸದನ ನಗೆಗಡಲಾಯಿತು.

ಗುರುವಾರ, ಡಿಸೆಂಬರ್ 29, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 359 | ಪುಟ 18

● www.prajavani.net   /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

2022 ಹಿನ್ನೋಟ
ರಾಜ್ಯ ಸರ್ಕಾರಕ್ಕೆ ಮುಜುಗರ ತಂದ ವರ್ಷ

ಸಾಧ್ವಿ ಪ್ರಜ್ಞಾ ಸಿಂಗ್ ವಿರುದ್ಧ ಕಾಂಗ್ರೆಸ್ ದೂರು 5
3 ಕೋಟಿ ರೈಲ್ವೆ ಬಳಕೆದಾರರ ದತ್ತಾಂಶ ಮಾರಾಟಕ್ಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,910 ▼	18,122 ▼	₹56,360 (ಬೆಂಗಳೂರು) ▲	₹70,200 (ಬೆಂಗಳೂರು) ▲	82.80 ▲

ಒಂದು ದಿನ ಮೊದಲೇ ಕಲಾಪ ಅಂತ್ಯ

ಬೆಳಗಾವಿ: ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನ ನಿಗದಿತ ದಿನಾಂಕಕ್ಕಿಂತ ಒಂದು ದಿನ ಮೊದಲೇ ಮುಕ್ತಾಯವಾಗಲಿದೆ.

ವಿಧಾನಸಭೆಯಲ್ಲಿ ಈ ವಿಷಯ ತಿಳಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಕಲಾಪವು ಇದೇ 30ರವರೆಗೆ ನಡೆಯಬೇಕಿತ್ತು. ಆದರೆ, ಸದನದ ಅನೇಕ ಸದಸ್ಯರು ಅನ್ಯ ಕಾರ್ಯನಿಮಿತ್ತ ಅಂದು ಇರಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ, ಗುರುವಾರ (ಡಿ.29) ಸಂಜೆಯೇ ಕಲಾಪ ಮುಕ್ತಾಯಗೊಳಿಸುವ ಬಗ್ಗೆ ಹಿರಿಯ ಸದಸ್ಯರ ಜತೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿದೆ' ಎಂದರು.

ಮಧ್ಯ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕಿದೆ. ಹೀಗಾಗಿ, ಶುಕ್ರವಾರ ಮಧ್ಯಾಹ್ನದವರೆಗೆ ಸುಮಾರು 3 ಗಂಟೆ ಕಲಾಪ ನಡೆಯುತ್ತಿತ್ತು. ಗುರುವಾರವೇ ಸಮಯ ಹೊಂದಿಸಿಕೊಂಡು, ಭೋಜನ ವಿರಾಮವೂ ಇಲ್ಲದಂತೆ ನಡೆಸಿ. ಕೊನೆಯ ದಿನದ ಮೂರು ಗಂಟೆಯ ಕಲಾಪ ನಷ್ಟವಾಗದಂತೆ ನೋಡಿಕೊಳ್ಳಿ' ಎಂದು ಸಲಹೆ ನೀಡಿದರು.

ಅದನ್ನು ಕಾಗೇರಿ ಒಪ್ಪಿಕೊಂಡರು.

ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನ ಗೆಲ್ಲಿಸಲು ಅಮಿತ್ ಶಾ ಯಾತ್ರೆ

ಹಿಂದುತ್ವ–ಪ್ರಗತಿ ಮಂತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹಿಂದುತ್ವ ಹಾಗೂ ಅಭಿವೃದ್ಧಿಯ ತನ್ನ ಮಂತ್ರಕ್ಕೆ ಸಾಣೆ ಹಿಡಿಯುತ್ತಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಳೆ ಮೈಸೂರು ಭಾಗಕ್ಕೆ ಕಾಲಿಡುತ್ತಿದ್ದಾರೆ. ಬಿಜೆಪಿ ಪಾಲಿಗೆ ಲಾಗಾಯ್ತಿನಿಂದ ದುರ್ಬಲ ಕ್ಷೇತ್ರ ಎನಿಸಿರುವ ಈ ಭಾಗದಲ್ಲಿ 2023ರ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಡುವ ಉಮೇದು ಅವರ ಭೇಟಿಯ ಹಿಂದೆಯಿದೆ.

ಅಮಿತ್ ಶಾ ಗುರುವಾರ ರಾತ್ರಿ ಬೆಂಗಳೂರಿಗೆ ಬಂದಿಳಿಯಲಿದ್ದಾರೆ. ಅದರ ಮರುದಿನವೇ ವಿಜಯಪುರದಲ್ಲಿ ಕಾಂಗ್ರೆಸ್ ಬೃಹತ್ ಸಮಾವೇಶ ಆಯೋಜಿಸಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಜಾರಿಯಲ್ಲಿನ ಸರ್ಕಾರದ ವಿಳಂಬವನ್ನೇ ಮುಂದುಮಾಡಿ, ಕಾಂಗ್ರೆಸ್ ಟೀಕಾಪ್ರಹಾರ ಮಾಡಲು ಸಿದ್ಧತೆ ನಡೆಸಿದೆ. ಅದೇ ದಿನ ಮಂಡ್ಯದಲ್ಲಿ ಬೃಹತ್ ಸಮಾವೇಶದಲ್ಲಿ ಅಮಿತ್ ಶಾ ಮಾತನಾಡಿ, ಮತಬುಟ್ಟಿಗೆ ಕೈಹಾಕುವ ತಮ್ಮ ಮೊದಲ ತಂತ್ರವನ್ನು ಪ್ರದರ್ಶಿಸಲಿದ್ದಾರೆ.

ಒಕ್ಕಲಿಗರ ಮತಗಳೇ ಹೆಚ್ಚಾಗಿರುವ, ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಶಕ್ತಿಕೇಂದ್ರ ಎನಿಸಿಕೊಂಡಿರುವ ಹಳೆ ಮೈಸೂರು ಭಾಗಕ್ಕೆ ಅಮಿತ್ ಶಾ ನೀಡುತ್ತಿರುವ ಭೇಟಿ, ಎದುರಾಳಿ ಪಕ್ಷಗಳನ್ನು ಎದುರಿಸುವ ತಂತ್ರಕ್ಕೆ ಮುನ್ನುಡಿ ಎಂದೇ ಪಕ್ಷದವರು ಬಿಂಬಿಸಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸಲು ಹಳೇ ಮೈಸೂರು ಭಾಗದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಅಗತ್ಯವಿದೆ. ಆದ್ದರಿಂದ ಈ ಜಿಲ್ಲೆಗಳತ್ತ ಹೆಚ್ಚಿನ ಗಮನ ಕೇಂದ್ರೀಕರಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಬುಧವಾರ ತಿಳಿಸಿದ್ದು ಇದನ್ನೇ ಪುಷ್ಟೀಕರಿಸುತ್ತದೆ.

'ಹಿಂದುತ್ವ ಮತ್ತು ಅಭಿವೃದ್ಧಿ ವಿಷಯಗಳ ಆಧಾರದಲ್ಲಿ ಚುನಾವಣೆಯನ್ನು ಎದುರಿಸುತ್ತೇವೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಅಮಿತ್ ಶಾ ಅವರು ಯಾವ ಪಿಚ್‌ನಲ್ಲಾದರೂ ಸರಿ ಆಡಬಲ್ಲ ಒಳ್ಳೆಯ ಆಟಗಾರ. ಒಂದೇ ಪಿಚ್ ಆದರೂ ಸರಿ, ಬೇರೆ ಬೇರೆ ಪಿಚ್ ಆದರೂ ಸರಿ ಉತ್ತಮವಾಗಿಯೇ ಆಡುತ್ತಾರೆ. ಹಳೆ ಮೈಸೂರು ಮಾತ್ರವಲ್ಲ, ಇಡೀ ರಾಜ್ಯವನ್ನು ಫೋಕಸ್ ಮಾಡಿಕೊಂಡು ನಮ್ಮ ಗುರಿ ತಲುಪುತ್ತೇವೆ' ಎಂದರು.

'ಮಂಡ್ಯ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಸ್ಥಾನ ಗೆಲ್ಲುತ್ತೇವೆ. ಹಳೆ ಮೈಸೂರು ಭಾಗದಲ್ಲಿ ಹೆಚ್ಚಿನ ಸ್ಥಾನ ಗೆದ್ದರೆ ಅಧಿಕಾರಕ್ಕೆ ಬರುವುದು ಸುಲಭ. ಈ ಹಿಂದಿನ ಚುನಾವಣೆಯಲ್ಲಿ ನಾವು ಈ ಅಂಶವನ್ನು ಗುರುತಿಸಿದ್ದೇವೆ. ಈ ಭಾಗದಲ್ಲಿ ನಾವು ಜಾತಿ ಹೆಸರಿನಲ್ಲಿ ಚುನಾವಣೆ ಎದುರಿಸುವುದಿಲ್ಲ. ನಮ್ಮ ಸಿದ್ಧಾಂತ ಮತ್ತು ಅಭಿವೃದ್ಧಿಯನ್ನು ಮುಂದಿಟ್ಟು ಜನರ ಬಳಿ ಹೋಗುತ್ತೇವೆ. ಒಂದು ಕಾಲದಲ್ಲಿ ಚಿಕ್ಕಮಗಳೂರು ಕಾಂಗ್ರೆಸ್‌ನ ಭದ್ರಕೋಟೆ ಆಗಿತ್ತು. ಈಗ ಜಿಲ್ಲಾ ಪಂಚಾಯಿತಿಯಿಂದ ಹಿಡಿದು, ಸಂಸತ್ತಿನವರೆಗೆ ಬಿಜೆಪಿಯ ಜನಪ್ರತಿನಿಧಿಗಳಿದ್ದಾರೆ' ಎಂದು ರವಿ ಹೇಳಿದರು.

'ಜನರಿಗೆ ತೋರಿಸಲು ನಮ್ಮ ಬಳಿ ರಿಪೋರ್ಟ್ ಕಾರ್ಡ್ ಇದೆ. ಹಳೆ ಮೈಸೂರಿನ ಭಾಗದವರಿಗೆ ಪ್ರಧಾನ ಮಂತ್ರಿ ಕಿಸಾನ್ ಯೋಜನೆ ತಲುಪಿಲ್ಲವೇ? ಬೆಂಗಳೂರು–ಮೈಸೂರು ಕಾರಿಡಾರ್‌ನಿಂದ ಜನರಿಗೆ ಅನುಕೂಲವಾಗಿಲ್ಲವೇ? ಹಾಲು ಉತ್ಪಾದಕರಿಗೆ ಸಹಾಯಧನ ಪ್ರಾರಂಭಿಸಿದ್ದೇ ಬಿಜೆಪಿ. ಹಾಸನ ವಿಮಾನ ನಿಲ್ದಾಣ ನಿರ್ಮಾಣ ದೇವೇಗೌಡರ ಕನಸಾಗಿದ್ದರೂ ಅದನ್ನು ಸಾಕಾರಗೊಳಿಸಿದ್ದು ನಮ್ಮ ಪಕ್ಷ. ಜನರಿಗೆ ಹೇಳಲು ಇಂತಹ ಹಲವಾರು ವಿಷಯಗಳಿವೆ' ಎಂದರು.

ಮಂಡ್ಯದಲ್ಲಿ ಶುಕ್ರವಾರ ನಡೆಯಲಿರುವ ಜನಸಂಕಲ್ಪ ಸಮಾವೇಶದಲ್ಲಿ ಒಂದು ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಹಾಸನ ಭಾಗದಿಂದ ಜನರು ಬಂದು ಸೇರಲಿದ್ದಾರೆ ಎಂದು ಸಹಕಾರಿ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ.

ಶಕ್ತಿ ಸಂಚಲನ:ಅಶ್ವತ್ಥನಾರಾಯಣ

ಗೃಹ ಸಚಿವ ಅಮಿತ್ ಶಾ ಅವರ ರಾಜ್ಯ ಭೇಟಿಯಿಂದ ಪಕ್ಷಕ್ಕೆ ದೊಡ್ಡ ಮಟ್ಟದಲ್ಲಿ ಶಕ್ತಿ ಸಂಚಲನವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಾ ಅವರ ಭೇಟಿಯಿಂದ ಹಳೆ ಮೈಸೂರು ಭಾಗದಲ್ಲಿ ಪಕ್ಷದ ಶಕ್ತಿ ವೃದ್ಧಿಯಾಗಲಿದ್ದು, ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಲಿದೆ' ಎಂದರು.

ಮುಖ್ಯಾಂಶಗಳು

- ಒಕ್ಕಲಿಗರ ಮತ ಸೆಳೆಯಲು ಬಿಜೆಪಿ ಕಾರ್ಯತಂತ್ರ
- ಕಾಂಗ್ರೆಸ್–ಜೆಡಿಎಸ್ ಶಕ್ತಿಕೇಂದ್ರದತ್ತ ಕಮಲದ ಚಿತ್ತ
- ಹಳೆ ಮೈಸೂರು ಭಾಗದಲ್ಲಿ ಶಾ ಸರಣಿ ಪ್ರವಾಸಕ್ಕೆ ಸಿದ್ಧತೆ

ಬ್ರಹ್ಮರಥೋತ್ಸವ ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಕ್ಷೇತ್ರದಲ್ಲಿ ಬುಧವಾರ ಸುಬ್ರಹ್ಮಣ್ಯಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಮ್ಮು: ಭಾರಿ ಶಸ್ತ್ರಾಸ್ತ್ರ ವಶ ● ಆತ್ಮಾಹುತಿ ದಾಳಿಗೆ ಸಂಚು

ನಾಲ್ವರು ಪಾಕ್ ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದೇಶದಲ್ಲಿ ಆತ್ಮಾಹುತಿ ದಾಳಿ ನಡೆಸಲು ಅಪಾರ ಶಸ್ತ್ರಾಸ್ತ್ರಗಳೊಂದಿಗೆ ಟ್ರಕ್‌ನಲ್ಲಿ ಶ್ರೀನಗರದ ಕಡೆಗೆ ತೆರಳುತ್ತಿದ್ದ ನಾಲ್ವರು ಪಾಕ್ ಉಗ್ರರು ಜಮ್ಮು-ಶ್ರೀನಗರದ ರಾಷ್ಟ್ರೀಯ ಹೆದ್ದಾರಿಯ ಸಿಧ್ರಾ ಬೈಪಾಸ್‌ನ ತಾವಿ ಸೇತುವೆ ಬಳಿ ಬೆಳಿಗ್ಗೆ 7.30ರ ಸುಮಾರಿಗೆ ಗುಂಡಿನ ಚಕಮಕಿಯಲ್ಲಿ ಭದ್ರತಾ ಸಿಬ್ಬಂದಿಯ ಗುಂಡೇಟಿಗೆ ಹತರಾಗಿದ್ದಾರೆ.

ಉಗ್ರರು ಹೊಂದಿದ್ದ ಏಳು ಎಕೆ-47 ರೈಫಲ್‌ಗಳು, ಒಂದು ಎಂ4 ರೈಫಲ್, ಮೂರು ಪಿಸ್ತೂಲ್‌ಗಳು ಹಾಗೂ ಅಪಾರ ಪ್ರಮಾಣದ ಮದ್ದುಗುಂಡುಗಳನ್ನು ಭದ್ರತಾ ಪಡೆ ವಶಪಡಿಸಿಕೊಂಡಿದೆ.

'ರಾಷ್ಟ್ರೀಯ ಹೆದ್ದಾರಿಯಲ್ಲಿ ಅನುಮಾನಾಸ್ಪದ ರೀತಿ ಟ್ರಕ್ ಸಂಚರಿಸುತ್ತಿರುವುದು ಕ್ಷಿಪ್ರ ಕಾರ್ಯಾಚರಣೆ ಪಡೆಯ ಗಮನಕ್ಕೆ ಬರುತ್ತಿದಂತೆಯೇ ಹಿಂಬಾಲಿಸಲಾಯಿತು. 7 ಗಂಟೆ ಸುಮಾರಿಗೆ ಟ್ರಕ್ ಸಿಧ್ರಾ ಸೇತುವೆ ಬಳಿ ಚೆಕ್ ಪೋಸ್ಟ್ ತಲುಪುತ್ತಿದ್ದಂತೆ ಪೊಲೀಸರು ತಪಾಸಣೆಗಾಗಿ ತಡೆದರು. ಟ್ರಕ್ ನಿಲ್ಲಿಸಿದ ಚಾಲಕ ದಟ್ಟ ಮಂಜಿನ ಲಾಭ ಪಡೆದು, ಪರಾರಿಯಾದ. ಟ್ರಕ್‌ನಲ್ಲಿ ಅಡಗಿದ್ದ ಉಗ್ರರು ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಲು ಆರಂಭಿಸಿದರು. ಟ್ರಕ್ ಸುತ್ತುವರಿದ ಭದ್ರತಾ ಪಡೆ ಯೋಧರು ಪ್ರತಿದಾಳಿ ನಡೆಸಿ, ನಾಲ್ವರು ಉಗ್ರರನ್ನು ಕೊಂದರು' ಎಂದು ಜಮ್ಮುವಿನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮುಕೇಶ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದರು.

ಜಮ್ಮು ಬಳಿ ಬುಧವಾರ ನಡೆದ ಗುಂಡಿನ ಚಕಮಕಿಯಲ್ಲಿ ಉಗ್ರರು ಹತರಾದ ಸ್ಥಳವನ್ನು ಭದ್ರತಾ ಪಡೆ ಸಿಬ್ಬಂದಿ ಸುತ್ತುವರಿದಿದ್ದರು – ಪಿಟಿಐ ಚಿತ್ರ

ಪರಾರಿಯಾದ ಟ್ರಕ್ ಚಾಲಕನಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಗಣರಾಜ್ಯೋತ್ಸವಕ್ಕೆ ಮುನ್ನ ಉಗ್ರರ ಭಯೋತ್ಪಾದನಾ ದಾಳಿ ಸಂಚು ವಿಫಲಗೊಳಿಸುವ ಜಂಟಿ ಕಾರ್ಯಾಚರಣೆಯಲ್ಲಿ ಇದೊಂದು ಬಹುದೊಡ್ಡ ಯಶಸ್ಸು ಎಂದು ಅವರು ಹೇಳಿದರು.

'ಹತರಾದ ಉಗ್ರರ ಗುರುತು ಮತ್ತು ಉಗ್ರರು ನಂಟಿನ ಸಂಘಟನೆಯ ಸುಳಿವು ಲಭಿಸಿಲ್ಲ. ಆದರೆ, ಹತರಾದ ಉಗ್ರರು ಗಡಿಯಲ್ಲಿ ಹೊಸದಾಗಿ ಒಳನುಸುಳಿದ ಉಗ್ರರ ಗುಂಪಿನವರು ಇರಬಹುದು. ಜಮ್ಮು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆತ್ಮಾಹುತಿ ದಾಳಿ ನಡೆಸುವ ಯೋಜನೆ ಹೊಂದಿದ್ದರು' ಎಂದು ಮೂಲಗಳು ಹೇಳಿವೆ.

ಜಮ್ಮುವಿನ ನಾರ್ವಾಲ್ ಬೈಪಾಸ್ ಪ್ರದೇಶದಲ್ಲಿ ಇತ್ತೀಚೆಗೆ ಟ್ರಕ್‌ವೊಂದರಲ್ಲಿ ಅಪಾರ ಶಸ್ತ್ರಾಸ್ತ್ರ ವಶಪಡಿಸಿಕೊಂಡ ನಂತರ ಭದ್ರತಾ ಪಡೆಗಳು ಈ ಭಾಗದಲ್ಲಿ ತೀವ್ರ ಕಟ್ಟೆಚ್ಚರ ವಹಿಸಿದ್ದವು. ಹಾಗಾಗಿ ಉಗ್ರರ ವಿರುದ್ಧದ ಕಾರ್ಯಾಚರಣೆ ಸಫಲವಾಗಿದೆ ಎಂದು ಸೇನೆಯ ಟೈಗರ್ ವಿಭಾಗದ ಜನರಲ್ ಆಫೀಸರ್ ಕಮಾಂಡಿಂಗ್ ಮೇಜರ್ ಜನರಲ್ ಗೌರವ್ ಗೌತಮ್ ತಿಳಿಸಿದರು.

6ನೇ ಪುಟ ನೋಡಿ

ಪ್ರತಿರೋಧದ ಜನಸಾಹಿತ್ಯ ಸಮ್ಮೇಳನ

ಕಸಾಪದಿಂದ ಮುಸ್ಲಿಂ ಸಾಹಿತಿಗಳ ಕಡೆಗಣನೆ ಖಂಡಿಸಿ ಜನವರಿ 8ಕ್ಕೆ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಸ್ಲಿಂ ಲೇಖಕರಿಗೆ ಅವಕಾಶ ಕಲ್ಪಿಸದಿರುವುದನ್ನು ಖಂಡಿಸಿ, ಚಿಂತಕರು ಹಾಗೂ ಸಮಾನಮನಸ್ಕರು 2023ರ ಜ.8ರಂದು ಬೆಂಗಳೂರಿನಲ್ಲಿ 'ಜನಸಾಹಿತ್ಯ ಸಮ್ಮೇಳನ' ಹಮ್ಮಿಕೊಂಡಿದ್ದಾರೆ.

ಹಾವೇರಿಯಲ್ಲಿ 2023ರ ಜ.6ರಿಂದ ಜ.8ರವರೆಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಸಮ್ಮೇಳನದ ಆಹ್ವಾನ ಪತ್ರಿಕೆ ಕಳೆದ ಶನಿವಾರ ಬಿಡುಗಡೆಯಾಗಿದ್ದು, ಸನ್ಮಾನಿತರ ಪಟ್ಟಿ ಹಾಗೂ ಗೋಷ್ಠಿಗಳಲ್ಲಿ ಭಾಗವಹಿಸುವವರ ಪಟ್ಟಿಯಲ್ಲಿ ಮುಸ್ಲಿಂ ಲೇಖಕರ ಹೆಸರಿಲ್ಲ. ಇದಕ್ಕೆ ಪ್ರತಿರೋಧವಾಗಿ ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಅಲುಮ್ನಿ ಹಾಲ್‌ನಲ್ಲಿ ಜನಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.

ಮುಸ್ಲಿಂ ಸಮುದಾಯದಲ್ಲಿ ಸಾಕಷ್ಟು ಲೇಖಕರು ಹೊರಹೊಮ್ಮಿದ್ದಾರೆ. ಮುಂದಿನ 10 ವರ್ಷಗಳಲ್ಲಿ ಕನ್ನಡದ ಅತ್ಯುತ್ತಮ ಬರಹಗಾರರು ಮುಸ್ಲಿಂ ಸಮುದಾಯದಿಂದ ಬರುವುದು ನಿಚ್ಚಳ

ಪುರುಷೋತ್ತಮ ಬಿಳಿಮಲೆ, ಲೇಖಕ

'ಸಾಹಿತಿಗಳಾದ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಚಿಂತಕಿ ಪ್ರೊ.ಜಾನಕಿ ನಾಯರ್ ಸೇರಿ ಹಲವರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ. ಇದು ಕನ್ನಡದ ಮನಸ್ಸುಗಳ ತಕ್ಷಣದ ಪ್ರತಿಕ್ರಿಯೆ. ಇದು ಸಾಹಿತ್ಯ ಸಮ್ಮೇಳನಕ್ಕೆ ಪರ್ಯಾಯವೂ ಅಲ್ಲ, ಬಂಡಾಯವೂ ಅಲ್ಲ. ಇದೊಂದು ಪ್ರತಿರೋಧ ಸಮಾವೇಶ. ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಪೂರ್ವಭಾವಿ ಸಭೆ ನಡೆಸಿ, ಸಮ್ಮೇಳನದ ರೂಪುರೇಷೆ ನಿರ್ಧರಿಸಲಾಗುವುದು' ಎಂದು ಆಯೋಜಕರಲ್ಲಿ ಒಬ್ಬರಾದ ಕಾವ್ಯಾ ಅಚ್ಯುತ್ ತಿಳಿಸಿದ್ದಾರೆ.

'ಜನಸಾಹಿತ್ಯ ಸಮ್ಮೇಳನ ಎಂಬ ಪ್ರತಿರೋಧ ಸಮಾವೇಶಕ್ಕೆ ಈಗಾಗಲೇ ನಾಡಿನ ಹಿರಿ-ಕಿರಿಯ ಸಾಹಿತಿಗಳು, ಹೋರಾಟಗಾರರು ಬೆಂಬಲ ವ್ಯಕ್ತಪಡಿಸಿದ್ದಾರೆ. ಅತಿಥಿಗಳು ಹಾಗೂ ಚರ್ಚಿಸಬೇಕಾದ ವಿಷಯಗಳನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಲಾಗುವುದು' ಎಂದು ಹೇಳಿದ್ದಾರೆ.

'ಹೊಸಬರಿಗೆ ವೇದಿಕೆ ಕಲ್ಪಿಸಲಿದೆ'

'21ನೇ ಶತಮಾನದಲ್ಲಿ ಹೊಸ ಬರಹಗಾರರು, ಕನ್ನಡ ಹಾಗೂ ಕರ್ನಾಟಕದ ಸಂಸ್ಕೃತಿ ಎದುರಿಸುವ ಬಿಕ್ಕಟ್ಟನ್ನು ಅರ್ಥಮಾಡಿಕೊಂಡು, ನಾಯಕತ್ವ ವಹಿಸಿಕೊಳ್ಳುವ ಶಕ್ತಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರಿಗೆ ಇಲ್ಲವಾಗಿದೆ' ಎಂದು ಸಮ್ಮೇಳನಕ್ಕೆ ಬೆಂಬಲ ಸೂಚಿಸಿರುವ, ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಹಾಗೂ ಲೇಖಕ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

'50 ವರ್ಷಗಳಿಂದ ನಾವು ಮಾತನಾಡುತ್ತಾ ಬಂದಿದ್ದೇವೆ. ಈಗ ಗಟ್ಟಿಯಾಗಿ ಬರೆಯುವ ಹೊಸ ಮಕ್ಕಳನ್ನು ಮುಂದೆ ತಂದು, ಆತ್ಮವಿಶ್ವಾಸ ತುಂಬುವ ಕೆಲಸಕ್ಕೆ ಜನಸಾಹಿತ್ಯ ಸಮ್ಮೇಳನ ವೇದಿಕೆ ಕಲ್ಪಿಸಲಿದೆ' ಎಂದರು.

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ
ವಾರ್ಷಿಕ 8.55%* ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
ಸಂಸ್ಕರಣ ಮತ್ತು ಡಾಕ್ಯುಮೆಂಟೇಷನ್ ಶುಲ್ಕ 100% ಮನ್ನಾ.
1800 425 0018

ಟಿಡಿಪಿ ರ‍್ಯಾಲಿಯಲ್ಲಿ ಕಾಲ್ತುಳಿತ: 7 ಸಾವು

ಹೈದರಾಬಾದ್: ಟಿಡಿಪಿ ಮುಖ್ಯಸ್ಥ ಹಾಗೂ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಬುಧವಾರ ಸಂಜೆ ನೆಲ್ಲೂರ್ ಜಿಲ್ಲೆಯ ಕಂದಕೂರ್ ಪಟ್ಟಣದಲ್ಲಿ ನಡೆಸಿದ ರೋಡ್ ಶೋನಲ್ಲಿ ಉಂಟಾದ ಕಾಲ್ತುಳಿತದಿಂದಾಗಿ ಕನಿಷ್ಠ ಏಳು ಜನರು ಮೃತಪಟ್ಟಿದ್ದಾರೆ.

4

ಕೊಪ್ಪಳ: ಅನಾರೋಗ್ಯಕ್ಕೆ ಒಳಗಾಗುತ್ತಿದ್ದರಿಂದ ಕುಟುಂಬದವರಿಂದಲೇ ಕೃತ್ಯ

ದೇವದಾಸಿ ಪಟ್ಟ ಕಟ್ಟಿದ್ದ ಮೂವರ ಬಂಧನ

ಕೊಪ್ಪಳ: ಅನಾರೋಗ್ಯದಿಂದ ಬಳಲುತ್ತಿದ್ದ ಕೊಪ್ಪಳ ತಾಲ್ಲೂಕಿನ 21 ವರ್ಷದ ಯುವತಿಗೆ ಚಿಕಿತ್ಸೆ ಕೊಡಿಸದೇ ದೇವದಾಸಿ ಪಟ್ಟ ಕಟ್ಟಿದ್ದ ಆರೋಪದ ಮೇಲೆ ಆಕೆಯ ಪೋಷಕರು ಮತ್ತು ಸಹೋದರಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಯುವತಿಯ ತಂದೆ ಯಮನೂರಪ್ಪ, ತಾಯಿ ಹುಲಿಗೆವ್ವ ಮತ್ತು ಸಹೋದರಿ ಮೂಕವ್ವ ಅವರನ್ನು ಬಂಧಿಸಲಾಗಿದೆ. ಮೂಕವ್ವ ಪತಿ ಹನುಮಪ್ಪನ ಪತ್ತೆಗೆ ಶೋಧ ನಡೆದಿದೆ. ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'2018ರ ಬಳಿಕ ಜಿಲ್ಲೆಯಲ್ಲಿ ಪತ್ತೆಯಾದ ಮೊದಲ ದೇವದಾಸಿ ಪ್ರಕರಣವಿದು. ಯುವತಿ ಚೇತರಿಸಿಕೊಂಡ ಬಳಿಕ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಪದ್ಮಾವತಿ ಜಿ. ತಿಳಿಸಿದರು.

ಯುವತಿ ಪದೇ ಪದೇ ಅನಾರೋಗ್ಯಕ್ಕೆ ಒಳಗಾಗುತ್ತಿದ್ದ ಕಾರಣ 'ಮುತ್ತು' ಕಟ್ಟಿಸಿದರೆ ಗುಣಮುಖ ಆಗುವರು ಎಂಬ ಮೂಢನಂಬಿಕೆಯಿಂದ ಹೆತ್ತವರೇ ಹುಲಿಗಿಯಲ್ಲಿ ಕಳೆದ ಮೇ ತಿಂಗಳಲ್ಲಿ ಯುವತಿಯನ್ನು ದೇವದಾಸಿಯಂಥ ಅನಿಷ್ಟ ಪದ್ಧತಿಗೆ ನೂಕಿದ್ದರು. ಇದರ ಬಗ್ಗೆ ಸಂಶಯಪಟ್ಟ ದಲಿತ ಸಮುದಾಯದ ಮುಖಂಡರು, ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಅವರು ಗ್ರಾಮಕ್ಕೆ ಭೇಟಿ ನೀಡಿದಾಗ, ಪ್ರಕರಣ ಬೆಳಕಿಗೆ ಬಂತು.

ಒಳ ಪುಟಗಳು

ದೇಶದ ಮೂಲಚೈತನ್ಯಕ್ಕೆ ನಿರಂತರ ಪೆಟ್ಟು: ಮಲ್ಲಿಕಾರ್ಜುನ ಖರ್ಗೆ 6
ಕೋವಿಡ್: 'ಏರ್ ಸುವಿಧಾ' ಮತ್ತೆ ಜಾರಿ 6
ಮುಕೇಶ್ ಅಂಬಾನಿ ರಿಲಯನ್ಸ್ ಮುಖ್ಯಸ್ಥರಾಗಿ 20 ವರ್ಷ 10
ಟಿ20 ವಿಶ್ವಕಪ್: ಶಿಖಾಗೆ ಸ್ಥಾನ 11

ಭೂ ಕಬಳಿಕೆದಾರರಿಂದ ಕಾಡಿನ ಮರಗಳಿಗೆ ವಿಷ ಪ್ರಾಶನ

ಅರಣ್ಯ ರಕ್ಷಣೆಗೆ ಗ್ರಾಮಸ್ಥರ ಕಾವಲು!

● ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಭೂಮಿ ಕಬಳಿಸುವ ದುರುದ್ದೇಶದಿಂದ ಕಾಡಿನಲ್ಲಿ ಹುಲುಸಾಗಿ ಬೆಳೆದ ಮರಗಳಿಗೆ ವಿಷ ಉಣಿಸಿ ಕೊಲ್ಲುವ ಪ್ರಕ್ರಿಯೆಗೆ ತಡೆಯೊಡ್ಡಲು ಸೊರಬ ತಾಲ್ಲೂಕಿನ ಹಲಸಿನಕೊಪ್ಪದ ಗ್ರಾಮಸ್ಥರು ಸಂಘಟಿತರಾಗಿದ್ದಾರೆ. ದಿನಕ್ಕೊಬ್ಬರಂತೆ ಸರದಿಯಲ್ಲಿ ಕಾಡಿನ ಕಾವಲು ಕಾಯುತ್ತಾರೆ.

ಪಕ್ಕದ ಕ್ಯಾಸನೂರು ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಹಲಸಿನಕೊಪ್ಪ ಗ್ರಾಮ ಹೊಂದಿಕೊಂಡಿದೆ. ಗ್ರಾಮದ ವ್ಯಾಪ್ತಿಯಲ್ಲಿರುವ 400 ಎಕರೆಯಷ್ಟು ಅರಣ್ಯ ಪ್ರದೇಶದ ಮೇಲೆ ಐದು ತಿಂಗಳ ಹಿಂದೆ ಭೂಕಬಳಿಕೆದಾರರ ಕಣ್ಣು ಬಿದ್ದಿದೆ.

'ಮಳೆಗಾಲದಲ್ಲೂ ಕಾಡಿನಲ್ಲಿ ಮರಗಳು ಏಕಾಏಕಿ ಒಣಗಲು ಶುರುವಾಗಿದ್ದವು. ಇದು ನಮ್ಮಲ್ಲಿ ಅನುಮಾನ ಮೂಡಿಸಿತ್ತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ತೂತು ಕೊರೆದು ವಿಷ ಹಾಕಿ ಮರಗಳನ್ನು ಸಾಯಿಸುತ್ತಿರುವುದು, ನಂತರ ಅಲ್ಲಿ ಅಡಿಕೆ ಗಿಡ ಬೆಳೆಸುತ್ತಿರುವುದು ಕಂಡು ಬಂದಿತ್ತು' ಎಂದು ಗ್ರಾಮದ ಸಂಜೀವಿನಿ ಗ್ರಾಮ ವಿಕಾಸ ಸಂಸ್ಥೆ ಕಾರ್ಯಕರ್ತ ಬರಗಿ ಶ್ರೀನಿವಾಸ 'ಪ್ರಜಾವಾಣಿ'ಗೆ ತಿಳಿಸಿದರು.

ಸೊರಬ ತಾಲ್ಲೂಕಿನ ಹಲಸಿನಕೊಪ್ಪದ ಬಳಿಯ ಕಾಡಿನಲ್ಲಿ ಮರಗಳ ಹನನ ಮಾಡಿ ಅಲ್ಲಿ ಅಡಿಕೆ ಗಿಡ ನೆಟ್ಟಿರುವುದನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ತೋರಿಸಿದ ಗ್ರಾಮಸ್ಥರು..

ಪ್ರಜಾವಾಣಿ ವಿಶೇಷ

'ಹೊರಗಿನಿಂದ ಬಂದ ಕೆಲವರು ಭೂಮಿ ಕಬಳಿಸಲು ಮರಗಳ ಹನನಕ್ಕೆ ಮುಂದಾಗಿದ್ದಾರೆ ಎಂಬುದು ಗೊತ್ತಾಯಿತು. ಆಗಿನಿಂದ ಕಾಡು ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದೇವೆ. ದುಷ್ಕರ್ಮಿಗಳು ಮತ್ತೆ ಮರಗಳಿಗೆ ವಿಷ ಉಣಿಸುವುದನ್ನು ತಡೆಯಲು ಅರಣ್ಯದಲ್ಲಿ ಗ್ರಾಮದ ಒಬ್ಬರು ನಿತ್ಯ ಕಾವಲು ಕಾಯುತ್ತಿದ್ದೇವೆ' ಎಂದು ಗ್ರಾಮ ಅರಣ್ಯ ಕಾವಲು ಸಮಿತಿ ಅಧ್ಯಕ್ಷ ಹರಿಯಪ್ಪ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ರೈತರ ಪ್ರಯತ್ನಕ್ಕೆ ಪರಿಸರ ಸಂಘಟನೆ ಬೆಂಬಲ
- 400 ಎಕರೆ ಅರಣ್ಯ ಪ್ರದೇಶದ ಮೇಲೆ ಭೂಗಳ್ಳರ ಕಣ್ಣು

ಸಾಗರ ಡಿಎಫ್‌ಒ ಜೊತೆ ಈ ಬಗ್ಗೆ ಮಾತನಾಡುವೆ. ಹಲಸಿನಕೊಪ್ಪ ಭಾಗದಲ್ಲಿ ಏನಾಗಿದೆ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.
ಕೆ.ಟಿ. ಹನುಮಂತಪ್ಪ
ಸಿಸಿಎಫ್, ಶಿವಮೊಗ್ಗ

ಅರಣ್ಯ ಮತ್ತು ಕಂದಾಯ ಇಲಾಖೆ ಅಲ್ಲಿ ಅರಣ್ಯ ಭೂಮಿ ಕಬಳಿಕೆ ತಡೆಯಲು ಪರಿಣಾಮಕಾರಿ ಕ್ರಮ ಕೈಗೊಳ್ಳಲಿ.
ಅನಂತ ಹೆಗಡೆ ಅಶೀಸರ, ವೃಕ್ಷ ಲಕ್ಷ ಆಂದೋಲನದ ಅಧ್ಯಕ್ಷ

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

bob World | बैंक ऑफ़ बड़ौदा Bank of Baroda | Azadi Ka Amrit Mahotsav
ಪ್ರತಿಯೊಂದು ಕ್ರಾಂತಿಯು ಒಂದು ಕಿಡಿಯಿಂದ ಆರಂಭವಾಗುತ್ತದೆ
ಅಗ್ನಿವೀರರ
ಜೊತೆಯಲ್ಲಿ ಸಾಗುವುದರಿಂದ
ಪ್ರಸ್ತುತಪಡಿಸಲಾಗುತ್ತಿದೆ
ಅಗ್ನಿವೀರರಿಗಾಗಿ ಬರೋಡಾ ಸೈನ್ಯ ವೇತನ ಪ್ಯಾಕೇಜ್
• ರೂ.75 ಲಕ್ಷದ ತನಕ ವ್ಯಾಪಕ ವೈಯಕ್ತಿಕ ಅಪಘಾತ ವಿಮಾ ಸುರಕ್ಷೆ
• ರೂ.3 ಲಕ್ಷದ ತನಕ ವೇತನದ ಓವರ್‌ಡ್ರಾಫ್ಟ್
• ಸೇವಾ ಶುಲ್ಕಗಳ ಮೇಲೆ ಆಕರ್ಷಕ ರಿಯಾಯಿತಿಗಳು
• ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್‌ನಲ್ಲಿ ವಿಶೇಷ ಸೌಲಭ್ಯಗಳು
• ವಿಡಿಯೊ ಕೆವೈಸಿಯ ಮಾಧ್ಯಮದ ಮೂಲಕ ಖಾತೆ ತೆರೆಯುವ ಸುಲಭ ಪ್ರಕ್ರಿಯೆ

ಟೋಲ್ ಫ್ರೀ ನಂಬರ್‌ನಲ್ಲಿ ಕರೆ ಮಾಡಿರಿ (24x7): 1800 258 44 55 | 1800 102 44 55
www.bankofbaroda.in | ನಮ್ಮನ್ನು ಫಾಲೋ ಮಾಡಿರಿ
ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿರಿ

ಜಯಶ್ರೀ ಅವರಿಂದ ರಂಗಸಂಗೀತ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ರಂಗ ಕಲಾವಿದೆ, ಗಾಯಕಿ ಬಿ.ಜಯಶ್ರೀ ಅವರಿಂದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಗುರುವಾರ (29ರಂದು) ಸಂಜೆ 6.30ಕ್ಕೆ 'ತಾಯೇ' ಕನ್ನಡ ರಂಗಭೂಮಿ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ.

ಜಯಶ್ರೀ ಮತ್ತು ಅವರ ತಂಡದ ಕಂಚಿನ ಕಂಠದಲ್ಲಿ ನಡೆಯಲಿರುವ ಈ ಸಂಗೀತ ಯಾತ್ರೆಯು ಸುಮಾರು ನೂರು ವರ್ಷಗಳ ರಂಗಚರಿತ್ರೆಯಲ್ಲೂ ಕೇಳುಗರನ್ನು ಸುತ್ತಾಡಿಸಲಿದೆ. ಸ್ವಾತಂತ್ರ್ಯಪೂರ್ವದಲ್ಲೇ ಪ್ರವರ್ಧಮಾನಕ್ಕೆ ಬಂದ ವೃತ್ತಿ ರಂಗಭೂಮಿಯಲ್ಲಿ ಇದುವರೆಗೆ ಆಗಿರುವ ಸ್ಥಿತ್ಯಂತರ ಮತ್ತು 1970ರ ದಶಕದಿಂದೀಚೆಗೆ ನಡೆದ ಹವ್ಯಾಸಿ ರಂಗಭೂಮಿಯ ವಿಕಾಸದ ಕಥೆಗಳೂ ಈ ರಂಗಗೀತೆಗಳೊಂದಿಗೆ ಗರಿ ಬಿಚ್ಚಲಿವೆ.

ಕಂಪನಿ ನಾಟಕದ ಪಾತ್ರಧಾರಿಗಳು ಸ್ವತಃ ಹಾಡುತ್ತಿದ್ದ ಆ ಕಾಲಘಟ್ಟದಿಂದ ಹಿಡಿದು ತಂತ್ರಜ್ಞಾನ ಬಳಕೆಯ ಇಂದಿನ

ಬಿ. ಜಯಶ್ರೀ

ಕಾಲಘಟ್ಟದವರೆಗೆ ರಂಗಭೂಮಿ ಸಂಗೀತ ಮತ್ತು ಅದರ ಪರಿಕರದ ಬಳಕೆಯಲ್ಲಿ ಆಗಿರುವ ಬದಲಾವಣೆಗಳನ್ನು ಜಯಶ್ರೀ ಅವರ ತಂಡ ಕಟ್ಟಿಕೊಡಲಿದೆ. 'ಸಾವಿರದ ಶರಣವ್ವ ಕರಿಮಾಯಿ ತಾಯೇ'ಯಂತಹ ಗೀತೆಗಳು ಈ ಕಾರ್ಯಕ್ರಮದಲ್ಲಿ ಮಾರ್ದನಿಸಲಿವೆ.

ಪತ್ರಕರ್ತೆ, ಲೇಖಕಿ ಪ್ರೀತಿ ನಾಗರಾಜ್ ಈ ಸಂಗೀತ ಸಂಜೆಯನ್ನು ನಿರ್ವಹಣೆ ಮಾಡ ಲಿದ್ದಾರೆ. ಕಲಾವಿದರಾದ ರೋಹಿಣಿ ರಘುನಂದನ್, ಲೋಕೇಶ್ ಆಚಾರ್, ಪೂಜಾ ರಾವ್, ಜಿ.ವಿ. ಭಾರ್ಗವ್, ಅರವಿಂದ ಕುಪ್ಲಿಕರ್, ದೀಪಾ ಅಗರ್‌ವಾಲ್, ಜಿ.ವಿವೇಕ್ ಅವರೂ ಭಾಗವಹಿಸಲಿದ್ದಾರೆ ಎಂದು ಬಿಐಸಿ ಮಾಹಿತಿ ನೀಡಿದೆ.

ಆಟೊ ಚಾಲಕರ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನಧಿಕೃತ ಬೈಕ್ ಟ್ಯಾಕ್ಸಿ ಸಂಚಾರಕ್ಕೆ ಕಡಿವಾಣ ಹಾಕಬೇಕು ಮತ್ತು ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗೆ ನೀಡಿರುವ ಅನುಮತಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಆಟೊ ಚಾಲಕರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

10 ಸಾವಿರಕ್ಕೂ ಹೆಚ್ಚು ಚಾಲಕರು ಆಟೊರಿಕ್ಷಾಗಳ ಸಹಿತ ರಸ್ತೆಗೆ ಇಳಿಯಲಿದ್ದಾರೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಲಿದ್ದು, ಸುತ್ತಮುತ್ತಲ ಪ್ರದೇಶದಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

ಮೊದಲ ಹಂತದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವುದು. ಸರ್ಕಾರ ನಿರ್ಲಕ್ಷ್ಯ ವಹಿಸಿದರೆ ಆಟೊರಿಕ್ಷಾ ಸಂಚಾರ ಸ್ಥಗಿತಗೊಳಿಸಿ ಹೋರಾಟ ನಡೆಸಬೇಕಾಗುತ್ತದೆ ಎಂದು ಆಟೊ ಚಾಲಕರ ಒಕ್ಕೂಟದ ಸಂಚಾಲಕ ಎಂ.ಮಂಜುನಾಥ್ ಎಚ್ಚರಿಸಿದರು.

'ಈವರೆಗೆ ಅಕ್ರಮವಾಗಿದ್ದ ಬೈಕ್ ಟ್ಯಾಕ್ಸಿಯನ್ನು ಸಕ್ರಮ ಮಾಡಲು ಹೊರಟಿರುವುದು ಆಟೊ ಚಾಲಕರ ದುಡಿಮೆಗೆ ಮಾರಕವಾಗಲಿದೆ. 15 ಲಕ್ಷ ಆಟೊ ಚಾಲಕರು ಇದೇ ವೃತ್ತಿ ನಂಬಿಕೊಂಡು ಜೀವನ ನಡೆಸುತ್ತಿದ್ದೇವೆ. 5 ಕಿಲೋ ಮೀಟರ್‌ಗೆ ₹25 ನಿಗದಿ ಮಾಡಿ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದರೆ, ಆಟೊರಿಕ್ಷಗಳನ್ನು ಹತ್ತುವವರು ಯಾರು' ಎಂದು ಪ್ರಶ್ನಿಸಿದರು.

ವಿಷ್ಣುವರ್ಧನ್ ಅಭಿಮಾನಿಗಳಿಂದ ಪಾದಯಾತ್ರೆ ನಾಳೆ

ಬೆಂಗಳೂರು: ನಟ ವಿಷ್ಣುವರ್ಧನ್ ಅವರ 13 ವರ್ಷದ ಪುಣ್ಯ ತಿಥಿಯ ಅಂಗವಾಗಿ 'ವಿಎಸ್‌ಎಸ್ ಅಭಿಮಾನ್ ಡಾ.ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್' ವತಿಯಿಂದ ಡಿ. 30ರಂದು ಬನಶಂಕರಿ ದೇವಸ್ಥಾನದಿಂದ ಅಭಿಮಾನ್ ಸ್ಟುಡಿಯೋ ವರೆಗೂ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ರಾಜುಗೌಡ, 'ಅಭಿಮಾನ್ ಸ್ಟುಡಿಯೋದಲ್ಲಿರುವ ವಿಷ್ಣುವರ್ಧನ್ ಸಮಾಧಿಯ ಭೂಮಿಗೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ಕೂಡಲೇ ಸರ್ಕಾರ ಮಧ್ಯಪ್ರವೇಶಿಸಿ ಅವರ ಸಮಾಧಿಯ 10 ಗುಂಟೆ ಜಾಗದ ಪ್ರಕರಣವನ್ನು ಇತ್ಯರ್ಥಪಡಿಸಬೇಕು' ಎಂದು ಆಗ್ರಹಿಸಿದರು.

'ಮೈಸೂರಿನಲ್ಲಿ ಸ್ಥಾಪಿಸಿರುವ 'ವಿಷ್ಣುವರ್ಧನ್ ಸ್ಮಾರಕ'ವನ್ನು ಸರ್ಕಾರ 2022ರ ಡಿ.18 ರಂದು ಲೋಕಾರ್ಪಣೆ ಮಾಡುವುದಾಗಿ ತಿಳಿಸಿತ್ತು. ಆದರೆ ಇದುವರೆಗೂ ಲೋಕಾರ್ಪಣೆ ಮಾಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ನಟ ವಿಷ್ಣುವರ್ಧನ್ ಅಭಿಮಾನಿಗಳು ಡಿ. 30ರಂದು (ಶುಕ್ರವಾರ) ನಡೆಯುವ ಪಾದಯಾತ್ರೆ ಬೆಳಿಗ್ಗೆ 7.30ಕ್ಕೆ ಪ್ರಾರಂಭವಾಗಲಿದೆ. ಅಭಿಮಾನ್ ಸ್ಟುಡಿಯೋಗೆ ತೆರಳಿ ವಿಷ್ಣುವರ್ಧನ್ ಸಮಾಧಿಗೆ ಪೂಜೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

ಪುಸ್ತಕ ಖರೀದಿ: ಶೇ 50 ರಿಯಾಯಿತಿ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಜ.1ರಿಂದ ಜ.31ರವರೆಗೆ ಪುಸ್ತಕಗಳ ಖರೀದಿಯ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರವು ಆನ್‌ಲೈನ್ ಮಾರಾಟ ವ್ಯವಸ್ಥೆಯನ್ನೂ ರೂಪಿಸಿದ್ದು, kuvempubhashabharathi.org ಮೂಲಕ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದೆ.

ಸಂಪರ್ಕಕ್ಕೆ: 080 23183311 ಅಥವಾ 23183312

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ–1/ಟೆಂಡರ್/44/2022–23 ದಿನಾಂಕ: 27-12-2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Viveka Yojane/ 2022-23 ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **05–01–2023 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/3766/ಅಡ್ವರ್ಟೈಸ್/2022–23

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 21–2/2022–23
ದಿನಾಂಕ: 26.12.2022 (3ನೇ ಕರೆ)

(ಕಟ್ಟಡ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ ಮತ್ತು ದ್ವಿ–ಲಕೋಟೆ** ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **27.12.2022 ರಿಂದ 10.01.2023ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **03.01.2023 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ)**. (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **10.01.2023 (ಸಂಜೆ 4.00 ಗಂಟೆಯವರೆಗೆ)**. (3) ಆರ್ಥಿಕ ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12.01.2023 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 409/ಎಂಸಿ&ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ–563101. e-mail : eepwdkolar07@gmail.com,
website: www.kpwd.gov.in, e-portal: http://eproc.karnataka.gov.in
ದೂರವಾಣಿ: 08152–222022, ಫ್ಯಾಕ್ಸ್: 08152–227443

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 1
ಮರು ಟೆಂಡರ್ ಅಧಿಸೂಚನೆ ಸಂಖ್ಯೆ: 32/ 2022–23 ದಿನಾಂಕ: 26.12.2022

ಕೋಲಾರ ಜಿಲ್ಲೆ ಕೋಲಾರ, ಕೆ.ಜಿ.ಎಫ್. ಮಾಲೂರು, ಮುಳಬಾಗಿಲು ಹಾಗೂ ಶ್ರೀನಿವಾಸಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 3054–ರಸ್ತೆ ಮತ್ತು ಸೇತುವೆಗಳ ನಿರ್ವಹಣೆ, ಮತ್ತು 2059 & 2216 ಕಟ್ಟಡಗಳ ನಿರ್ವಹಣೆ ಅಡಿಯಲ್ಲಿ ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಟ: ರೂ.1.00 ಲಕ್ಷಗಳು ಗರಿಷ್ಟ: 12.42 ಲಕ್ಷಗಳು.** ಇ.ಎಂ.ಡಿ ಮೊತ್ತ: **ಕನಿಷ್ಟ: ರೂ.2,500.00 ಗರಿಷ್ಟ: 31,050.00** ಕಾಲಾವಧಿ: **2 ತಿಂಗಳು** ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ–1 ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc.karnataka. gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **04.01.2023 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **05.01.2023 ರಂದು ಸಂಜೆ 16.30 ಗಂಟೆಯ** ನಂತರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(Viz., http://eproc.karnataka.gov.in)** ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಇ–ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ಕೋಲಾರ ವಿಭಾಗ ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 447 /ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ G20

ಇ-ಟೆಂಡರು ಸೂಚನೆ ಸಂ. 35/MYS/2022
ದಿನಾಂಕ: 22.12.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	(ಉಪ–ಕಾಮಗಾರಿ–1) ಕಡೂರು–ಚಿಕ್ಕಮಗಳೂರು ವಿಭಾಗ: ಕಡೂರು–ಸಖರಾಯಪಟ್ಟಣ ನಿಲ್ದಾಣಗಳ ನಡುವೆ ಕಿ.ಮೀ. 7/000–500 ಮಧ್ಯ ದುರ್ಬಲವಾಗಿರುವ ಕಟಿಂಗ್‌ಗಳ ರಕ್ಷಣಾ ಕೆಲಸಗಳು. (ಉಪ–ಕಾಮಗಾರಿ–2) ಕಡೂರು–ಚಿಕ್ಕಮಗಳೂರು ವಿಭಾಗ: ಸಖರಾಯಪಟ್ಟಣ–ಚಿಕ್ಕಮಗಳೂರು ನಿಲ್ದಾಣಗಳ ನಡುವೆ ಕಿ.ಮೀ. 23/ 500–24/200 ಮಧ್ಯ ದುರ್ಬಲವಾಗಿರುವ ಕಟಿಂಗ್‌ಗಳ ರಕ್ಷಣಾ ಕೆಲಸಗಳು. (ಉಪ–ಕಾಮಗಾರಿ–3) ಕಡೂರು–ಚಿಕ್ಕಮಗಳೂರು ವಿಭಾಗ: ಸಖರಾಯಪಟ್ಟಣ–ಚಿಕ್ಕಮಗಳೂರು ನಿಲ್ದಾಣಗಳ ನಡುವೆ ಕಿ.ಮೀ. 31/600–32/400 ಮಧ್ಯ ದುರ್ಬಲವಾಗಿರುವ ಕಟಿಂಗ್‌ಗಳ ರಕ್ಷಣಾ ಕೆಲಸಗಳು. (ಉಪ–ಕಾಮಗಾರಿ–4) ಕಡೂರು–ಚಿಕ್ಕಮಗಳೂರು ವಿಭಾಗದಲ್ಲಿ ಕಿ.ಮೀ. 7/000–500 ಕಿಮೀ., 23/500–24/200 ಕಿಮೀ., 31/600–32/400 ಕಿ.ಮೀ. ಮಧ್ಯೆ ದುರ್ಬಲವಾಗಿರುವ ಕಟಿಂಗ್‌ಗಳ ರಕ್ಷಣಾ ಕೆಲಸಗಳಿಗೆ ಸಂಬಂಧಿಸಿದಂತೆ. ಚೈನ್ ಲಿಂಕ್ ಮೆಶ್–ನೆಟಿಂಗ್‌ನೊಂದಿಗೆ ಗ್ಯಾಲ್ವನೈಸ್ಡ್ ಸ್ಟೀಲ್ ವೈರ್ ರೋಪ್‌ಗಳು.	ರೂ. 6,44,93,122/-
2	ಉಪ–ಕಾಮಗಾರಿ–1: ಮೈಸೂರು–ಎಲಿಯೂರು ವಿಭಾಗ: ಎಲಿಯೂರು ಮತ್ತು ಬ್ಯಾಡರಹಳ್ಳಿ ನಿಲ್ದಾಣಗಳ ನಡುವೆ ಎರಡೂ ಬದಿಗಳಲ್ಲಿರುವ ಕಿ.ಮೀ. 104/200–105/700 ಮಧ್ಯ ಡಿಎನ್ ಲೈನ್‌ಗಳಲ್ಲಿ ದುರ್ಬಲವಾಗಿರುವ ಕಟಿಂಗ್‌ಗಳ ರಕ್ಷಣಾ ಕೆಲಸಗಳು. ಉಪ–ಕಾಮಗಾರಿ–2: ಎಲಿಯೂರು ಮತ್ತು ಬ್ಯಾಡರಹಳ್ಳಿ ನಿಲ್ದಾಣಗಳ ನಡುವೆ ಎರಡೂ ಬದಿಗಳಲ್ಲಿರುವ ಕಿ.ಮೀ. 104/200–105/700 ಮಧ್ಯ ಡಿಎನ್ ಲೈನ್‌ಗಳಲ್ಲಿ ಚೈನ್ ಲಿಂಕ್ ಮೆಶ್–ನೆಟಿಂಗ್ ನೊಂದಿಗೆ ಗ್ಯಾಲ್ವನೈಸ್ಡ್ ಸ್ಟೀಲ್ ವೈರ್ ರೋಪ್‌ಗಳು.	ರೂ. 2,27,25,820/-
3	ಎಂವೈಎಸ್–ಸಿಎಂಎನ್‌ಆರ್ ವಿಭಾಗದಲ್ಲಿ 763 ಆರ್‌ಯುಬಿ ಸ್ಪಾನ್ 1x12.20ಮೀ ನ ಪ್ಲಾಟ್‌ಫಾರ್ಮ್‌ಗಾಗಿ ಅಬುಟ್‌ಮೆಂಟ್ ಮತ್ತು ಪಿಯರ್‌ಗಳ ಪರಿಶೀಲನೆ, ಎಂವೈಎಸ್–ಎಎಸ್‌ಕೆ ವಿಭಾಗದಲ್ಲಿ ಬ್ರಿಡ್ಜ್ ಸಂ. 279 ಆರ್‌ಯುಬಿ ಸ್ಪಾನ್ 1x12.20ಮೀ., ಬ್ರಿಡ್ಜ್ ಸಂ. 242 ಕಾವೇರಿ ಸ್ಪಾನ್ 13x12.20ಮೀ., ಬ್ರಿಡ್ಜ್ ಸಂ. 91 ಸ್ಪಾನ್ 1x12.20ಮೀ., ಜಿಆರ್‌ಯು–ಆರ್‌ಡಿಜಿ ವಿಭಾಗದಲ್ಲಿ ಬ್ರಿಡ್ಜ್ ಸಂ. 28 ಸ್ಪಾನ್ 3x12.20ಮೀ, ಬ್ರಿಡ್ಜ್ ಸಂ. 74 ಸ್ಪಾನ್ 4x12.20ಮೀ, ಬ್ರಿಡ್ಜ್ ಸಂ. 75 ಸ್ಪಾನ್ 4x12.20ಮೀ.& ಬ್ರಿಡ್ಜ್ ಸಂ. 119 ಸ್ಪಾನ್ 4φ12.20, ಆರ್‌ಆರ್‌ಬಿ–ಟಿಎಲ್‌ಜಿಪಿ ವಿಭಾಗದಲ್ಲಿ ಬ್ರಿಡ್ಜ್ ಸಂ. 48ಬಿ ಸ್ಪಾನ್ 1φ18.30 ಮೀ, ಬ್ರಿಡ್ಜ್ ಸಂ. 59 ಭದ್ರ ಸ್ಪಾನ್ 11x18.30 ಮೀ, ಬ್ರಿಡ್ಜ್ ಸಂ. 86 ತುಂಗಾ ಸ್ಪಾನ್15x18.30 ಮೀ & ಬ್ರಿಡ್ಜ್ ಸಂ. 104ಎ ಸ್ಪಾನ್ 1φ30.50 ಮೀ ಡಿಆರ್‌ಯು–ಸಿಎಂಜಿಆರ್ ವಿಭಾಗದಲ್ಲಿ ಬ್ರಿಡ್ಜ್ ಸಂ. 27 ಸ್ಪಾನ್ 1x18.30ಮೀ & ಬ್ರಿಡ್ಜ್ ಸಂ. 39 ಸ್ಪಾನ್ 1φ18.30. (ಒಟ್ಟು 14 ಬ್ರಿಡ್ಜ್‌ಗಳು)	ರೂ. 96,05,311/-
4	ಹಾಸನ–ಮಂಗಳೂರು ವಿಭಾಗ: ಹಾಸನ–ಮಂಗಳೂರು ವಿಭಾಗದಲ್ಲಿರುವ ಎಸ್‌ಎಸ್‌ಇ/ಬ್ರಿಡ್ಜ್/ಎಸ್‌ಕೆಎಲ್‌ಆರ್ ವ್ಯಾಪ್ತಿಯಲ್ಲಿ (ಎಸ್‌ಕೆಎಲ್‌ಆರ್–ಎಸ್‌ಬಿಹೆಚ್‌ಆರ್ ಘಾಟ್ ವಿಭಾಗ) 2020–21 & 2022–23 ರ ಅವಧಿಯಲ್ಲಿ ಮಾಡಬೇಕಾದ ಸ್ಟೀಲ್ ಗಿರ್ಡರ್ ಬ್ರಿಡ್ಜ್‌ಗಳ ಪೈಂಟಿಂಗ್ ಕೆಲಸ. (ಬ್ರಿಡ್ಜ್ ಸಂ. 293, 296, 298, 300, 367, 400, 474, 539 & ಐಓಹೆಚ್ ಷೆಡ್ ಮತ್ತು 15, 23, 133, 142, 165, 177, 180, 183, 184, 185, 186, 187, 188, 189, 190, 192, 193, 194, 200, 232, 233, 238, 239, 241, 243, 246, 247, 248, 249, 250, 251, 252, 264, 281, 283, 287, 289, 292, 297, 303, 318, 322, 326, 327, 328, 334, 335, 337, 353, 358, 366 & 578)	ರೂ. 1,47,94,769/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.01.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್ / ಸಂಯೋಜನೆ ಮೈಸೂರು

PUB/571/AAD/PRB/SWR/2022-23

S.W.Railways SWRRLY SWRRLY

ಬ್ರಿಗೇಡ್, ಎಂ.ಜಿ.ರಸ್ತೆ– ಹೆಚ್ಚು ಜನ ಸೇರುವ ನಿರೀಕ್ಷೆ

ವರ್ಷಾಚರಣೆ: ಚಲನವಲನ ಕ್ಯಾಮೆರಾಗಳಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ನಗರದ ಬ್ರಿಗೇಡ್ ರಸ್ತೆಗೆ ಬುಧವಾರ ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅವರು ಭೇಟಿ ನೀಡಿ ಭದ್ರತೆ ಪರಿಶೀಲಿಸಿದರು. ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ಹಾಗೂ ಡಿಸಿಪಿ ಶ್ರೀನಿವಾಸ್‌ಗೌಡ ಹಾಜರಿದ್ದರು

ಬೆಂಗಳೂರು: ಹೊಸ ವರ್ಷಾಚರಣೆಗೆ ಕ್ಷಣಗಣನೆ ಆರಂಭವಾಗಿದೆ. ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ, ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ಅವರು ಸಂಭ್ರಮಾಚರಣೆ ನಡೆಯುವ ರಸ್ತೆಗಳಿಗೆ ಬುಧವಾರ ಭೇಟಿ ನೀಡಿ ಭದ್ರತಾ ಕ್ರಮ ಪರಿಶೀಲಿಸಿದರು.

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ.ರಸ್ತೆ, ಇಂದಿರಾನಗರ, ಕೋರಮಂಗಲ ಹಾಗೂ ಎಚ್‌ಎಸ್‌ಆರ್ ಲೇಔಟ್ ರಸ್ತೆಗಳಲ್ಲಿ ಹೊಸ ವರ್ಷ ಸ್ವಾಗತಿಸಲು ಈ ಬಾರಿ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ.

ರಾತ್ರಿ 12ರಿಂದ ರಾತ್ರಿ 1 ಗಂಟೆಯ ತನಕ ಮಾತ್ರ ಸಂಭ್ರಮಕ್ಕೆ ಅವಕಾಶ ನೀಡಲಾಗುವುದು. ಅದಾದ ಮೇಲೆ ರಸ್ತೆಗಳಿಂದ ಜನರು ಮನೆಗಳಿಗೆ ತೆರಳಬೇಕು. ಸಂಭ್ರಮಾಚರಣೆಯ ಎಲ್ಲ ದೃಶ್ಯಗಳೂ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಲಿವೆ. ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿ.ಸಿ ಟಿ.ವಿ ಕ್ಯಾಮೆರಾ, ಬಾರ್, ಪಬ್, ಹೋಟೆಲ್‌ನಲ್ಲಿ ಪರಿಶೀಲನೆ ನಡೆಸಲಾಗಿದೆ. ನಿಯಮ ಮೀರಿದರೆ ಕ್ರಮ ಕೈಗೊಳ್ಳಲಾಗುವುದು. ರಸ್ತೆಯ ಎರಡು ಬದಿಯಲ್ಲೂ ಬ್ಯಾರಿಕೇಡ್ ಹಾಕಿ ವಾಹನ ಸಂಚಾರವನ್ನು ಸಂಜೆಯಿಂದಲೇ ನಿರ್ಬಂಧಿಸಲಾಗುವುದು. ಮಾಸ್ಕ್ ಧರಿಸಿದ್ದವರಿಗೆ ಮಾತ್ರ ಪ್ರವೇಶ ನೀಡಲು ಪೊಲೀಸರು ನಿರ್ಧರಿಸಿದ್ದಾರೆ.

> **ಎಲ್ಲ ಪ್ರಮುಖ ಸ್ಥಳದಲ್ಲಿ ಡ್ರೋನ್ ನಿಗಾ ವಹಿಸಲಿದೆ. ಈ ವರ್ಷ ಹೆಚ್ಚಿನ ಜನರು ಸೇರುವ ನಿರೀಕ್ಷೆಯಿದೆ.**
> **ಪ್ರತಾಪ್ ರೆಡ್ಡಿ,** ನಗರ ಪೊಲೀಸ್ ಆಯುಕ್ತ

ಸಂಭ್ರಮಾಚರಣೆ ನಡೆಯುವ ರಸ್ತೆಗಳ ಪ್ರವೇಶ ದ್ವಾರ, ಪಬ್, ರೆಸ್ಟೋರೆಂಟ್ ಪ್ರವೇಶ ದ್ವಾರದ ಬಳಿ ಮಾಸ್ಕ್ ತೆಗೆದು ಕ್ಯಾಮೆರಾಕ್ಕೆ ಮುಖ ಚಹರೆ ತೋರಿಸಿಯೇ ಪ್ರವೇಶಿಸಬೇಕು. ಪ್ರತಿ ಪಬ್ ಎದುರು ಮಹಿಳಾ ಸಿಬ್ಬಂದಿ, ಪುರುಷ ಸಿಬ್ಬಂದಿ, ಒಂದು ಪೊಲೀಸ್ ವಾಹನ ನಿಯೋಜಿಸಲಾಗುವುದು. ಅಹಿತಕರ ಘಟನೆ ನಡೆದರೆ ಕಿಡಿಗೇಡಿಗಳನ್ನು ಸ್ಥಳದಲ್ಲಿಯೇ ಬಂಧಿಸಲಾಗುವುದು. ಓಲಾ, ಉಬರ್‌ಗಳ ಪಾರ್ಕಿಂಗ್‌ಗೆ ಪ್ರತ್ಯೇಕ ಸ್ಥಳ ನಿಗದಿಗೊಳಿಸಲಾಗಿದೆ. ಅದೇ ಸ್ಥಳದಲ್ಲಿ ಪಾರ್ಕಿಂಗ್ ಮಾಡಬೇಕು ಎಂದು ಪೊಲೀಸರು ಹೇಳಿದರು.

ಕೆಲವು ಪ್ರಮುಖ ರಸ್ತೆಗಳನ್ನು ಬಂದ್ ಮಾಡುವುದರಿಂದ ಬದಲಿ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಅವರು ಹೇಳಿದರು.

ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ಹಾಜರಿದ್ದರು.

ಆಂಬುಲೆನ್ಸ್ ವ್ಯವಸ್ಥೆ

ಆಗ್ನೇಯ ವಿಭಾಗದಲ್ಲಿ ಸಾಕಷ್ಟು ಸಂಖ್ಯೆಯ ಪಬ್ ಹಾಗೂ ರೆಸ್ಟೋರೆಂಟ್‌ಗಳಿದ್ದು, ಪ್ರತಿ ಪಬ್ ಎದುರೂ ಸಿಬ್ಬಂದಿ ನಿಯೋಜಿಸಲು ಆ ವಿಭಾಗದ ಪೊಲೀಸರು ತೀರ್ಮಾನಿಸಿದ್ದಾರೆ.

ಸಂಭ್ರಮದ ವೇಳೆ ಅತಿಯಾದ ಮದ್ಯ ಸೇವಿಸಿ ಪ್ರಜ್ಞೆ ತಪ್ಪಿದವರನ್ನು ಆಂಬುಲೆನ್ಸ್‌ನಲ್ಲಿ ಕೂರಿಸಲಾಗುವುದು. ಜತೆಗೆ, ಆಯತಪ್ಪಿಬಿದ್ದರೆ ಹಾಗೂ ಆರೋಗ್ಯ ಸಮಸ್ಯೆ ಎದುರಾದವರಿಗೂ ಸ್ಥಳದಲ್ಲಿರುವ ಆಂಬುಲೆನ್ಸ್‌ನಲ್ಲಿಯೇ ಪ್ರಾಥಮಿಕ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಆಂಬುಲೆನ್ಸ್ ನಿಯೋಜಿಸುವಂತೆ ಆರೋಗ್ಯ ಇಲಾಖೆಗೂ ಮನವಿ ಸಲ್ಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನೈಸ್ ರಸ್ತೆ: ಬೈಕ್ ಸಂಚಾರ ನಿಷೇಧ

ನೈಸ್ ರಸ್ತೆಯಲ್ಲಿ ಡಿ.31ರಂದು ರಾತ್ರಿ 8ರಿಂದ ಜ.1ರ ಬೆಳಿಗ್ಗೆ 6ರ ವರೆಗೆ ನೈಸ್ ರಸ್ತೆಯಲ್ಲಿ ಬೈಕ್ ಸಂಚಾರ ನಿಷೇಧಿಸಲಾಗಿದೆ.

ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನೈಸ್ ರಸ್ತೆಯ ಧನನಾಯಕನಹಳ್ಳಿ ಸೇತುವೆಯಿಂದ ನೈಸ್ ರಸ್ತೆಯ ಕಚೇರಿಯ ಸೇತುವೆವರೆಗೆ 8 ಕಿ.ಮೀ ಹಾಗೂ ನೈಸ್ ಕಚೇರಿಯ ಸೇತುವೆಯಿಂದ ಡಿಸೋಜಾ ಸೇತುವೆ ತನಕ 8 ಕಿ.ಮೀ ಸೇರಿ ಒಟ್ಟು 16 ಕಿ.ಮೀ ಅಂತರದಲ್ಲಿ ರಸ್ತೆ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ. ಬೈಕ್ ಸವಾರರೇ ಸಾವು, ನೋವಿಗೆ ಒಳಗಾಗುತ್ತಿದ್ದಾರೆ. ಹೊಸ ವರ್ಷಾಚರಣೆ ಕಾರಣದಿಂದ ಈ ಮಾರ್ಗದಲ್ಲಿ ಬೈಕ್ ಸಂಚಾರ ನಿರ್ಬಂಧಿಸಲಾಗಿದೆ. ನೈಸ್ ಟೋಲ್ ಪ್ರವೇಶ ಹಾಗೂ ನಿರ್ಗಮನದ ಬಳಿ ನೈಸ್ ಸಂಸ್ಥೆ ತಮ್ಮ ಸಿಬ್ಬಂದಿ ನಿಯೋಜಿಸಿ ದ್ವಿಚಕ್ರ ವಾಹನಗಳನ್ನು ಒಳಕ್ಕೆ ಬಾರದಂತೆ ತಡೆಯಬೇಕು ಎಂದು ಕೆಂಗೇರಿ ಸಂಚಾರ ಪೊಲೀಸ್ ಠಾಣೆಯ ಪೊಲೀಸರು ಸೂಚಿಸಿದ್ದಾರೆ.

ಸುದ್ದಿ 2 ನಿಮಿಷ

ಕೇಂದ್ರ ಗೃಹ ಸಚಿವರ ಭರವಸೆ ಕೊಡಿಸಿ: ಸಿ.ಎಂಗೆ ಡಿಕೆಶಿ ಸವಾಲು

ಬೆಂಗಳೂರು: ರಾಜ್ಯದ ಒಂದಿಂಚು ಪ್ರದೇಶವನ್ನೂ ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವ ಪ್ರಶ್ನೆ ಇಲ್ಲ ಎಂಬ ಭರವಸೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಗೃಹ ಸಚಿವರಿಂದ ಕೊಡಿಸಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದ್ದಾರೆ.

ರಾಜ್ಯದ 865 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಲು ಬದ್ಧ ಎಂಬುದಾಗಿ ಮಹಾರಾಷ್ಟ್ರ ವಿಧಾನಮಂಡಲದಲ್ಲಿ ನಿರ್ಣಯ ಕೈಗೊಂಡಿರುವ ಕುರಿತು ಬುಧವಾರ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ರಾಜ್ಯದ ಒಂದಿಂಚೂ ಜಾಗವನ್ನು ಬಿಟ್ಟುಕೊಡುವ ಪ್ರಶ್ನೆ ಇಲ್ಲ ಎಂಬ ಪೊಳ್ಳು ಹೇಳಿಕೆಗಳನ್ನು ನೀಡುವುದನ್ನು ಮುಖ್ಯಮಂತ್ರಿ ನಿಲ್ಲಿಸಲಿ. ಆ ವಿಚಾರದಲ್ಲಿ ನಿಜವಾದ ಬದ್ಧತೆ ತೋರಿಸಲಿ' ಎಂದು ಆಗ್ರಹಿಸಿದ್ದಾರೆ.

'ನಿಜವಾಗಿಯೂ ರಾಜ್ಯದ ಒಂದು ಇಂಚು ಪ್ರದೇಶವನ್ನೂ ಬಿಟ್ಟುಕೊಡಲು ಸಿದ್ಧರಿಲ್ಲದೇ ಇದ್ದರೆ ಮುಖ್ಯಮಂತ್ರಿಯವರು ಈಗಾಗಲೇ ದಿಟ್ಟ ನಿರ್ಧಾರ ಕೈಗೊಳ್ಳಬೇಕಿತ್ತು. ಈಗಲಾದರೂ ದೆಹಲಿಗೆ ಸರ್ವಪಕ್ಷಗಳ ಮುಖಂಡರ ನಿಯೋಗ ಕರೆದೊಯ್ಯಲಿ. ರಾಜ್ಯದ ಯಾವುದೇ ಪ್ರದೇಶವನ್ನೂ ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವ ಪ್ರಶ್ನೆ ಇಲ್ಲ ಎಂಬುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಭರವಸೆ ಕೊಡಿಸಲಿ' ಎಂದು ಒತ್ತಾಯಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಜಾರಿ ನಿರ್ದೇಶನಾಲಯದ ನೋಟಿಸ್

ಬೆಂಗಳೂರು: ನಗರದಾದ್ಯಂತ ಕೊಳವೆಬಾವಿ ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಸಂಬಂಧ ವಿವರಣೆ ಕೇಳಿ ಜಾರಿ ನಿರ್ದೇಶನಾಲಯವು(ಇಡಿ) ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ನೀಡಿದೆ.

'ಬಿಬಿಎಂಪಿ ಅಧಿಕಾರಿಗಳು ₹970 ಕೋಟಿ ದುರುಪಯೋಗ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಮುಖಂಡ ಎನ್. ಆರ್. ರಮೇಶ್ ಈ ಹಿಂದೆ ಎಸಿಬಿಯಲ್ಲಿ ದೂರು ದಾಖಲಿಸಿದ್ದರು. ಎಸಿಬಿ ವಿಸರ್ಜನೆಯಾದ ಬಳಿಕ ದೂರು ಇ.ಡಿಗೆ ವರ್ಗಾವಣೆಯಾಗಿತ್ತು. ಈಗ ಇ.ಡಿ ವಿವರಣೆ ಕೇಳಿದೆ. 'ಆರೋಪಗಳ ಸಂಬಂಧ ವಿಚಾರಣೆ ನಡೆಯುತ್ತಿರುವುದರಿಂದ ಇ.ಡಿ ಕೆಲವು ವಿವರಗಳನ್ನು ಕೇಳಿದೆ. ಎಲ್ಲಾ ದಾಖಲೆಗಳ ಸಹಿತ ವಿವರಣೆ ಸಲ್ಲಿಸಲು ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದ್ದು, ಅವರು ವಿವರಣೆ ಸಲ್ಲಿಸಲಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಉಪ ಖನಿಜ ನಿಯಮ: ನ್ಯೂನತೆ ಸರಿಪಡಿಸಿ'

ಬೆಂಗಳೂರು: ಕರ್ನಾಟಕ ಉಪ ಖನಿಜಗಳ ನಿಯಮಾವಳಿಗಳಲ್ಲಿರುವ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಫೆಡರೇಷನ್ ಆಫ್ ಕರ್ನಾಟಕ ಗ್ರಾನೈಟ್ ಆ್ಯಂಡ್ ಸ್ಟೋನ್ಸ್ ಇಂಡಸ್ಟ್ರಿ ತಿಳಿಸಿದೆ.

'ನಿಯಮಗಳಲ್ಲಿನ ನ್ಯೂನತೆಗಳ ಕಾರಣದಿಂದಾಗಿ ಅಲಂಕಾರಿಕ ಶಿಲಾ ಗಣಿ ಮಾಲೀಕರು ಸಕ್ರಮವಾಗಿ ನಡೆಸುತ್ತಿರುವ ಗಣಿಗಳು ಸಹ ಅಕ್ರಮದ ವ್ಯಾಪ್ತಿಗೆ ಬರುತ್ತಿವೆ. ಹೀಗಾಗಿ ಹಲವು ತಿದ್ದುಪಡಿಗಳು ಅವಶ್ಯ. ಅಲಂಕಾರಿಕ ಶಿಲೆ ಗಣಿಗಾರಿಕೆಯಲ್ಲಿ ಮೊದಲ ಸ್ಥಾನದಲ್ಲಿದ್ದ ಕರ್ನಾಟಕ, ಇದೀಗ 5ನೇ ಸ್ಥಾನಕ್ಕೆ ಕುಸಿದಿದೆ' ಎಂದು ಸಂಸ್ಥೆಯ ಅಧ್ಯಕ್ಷ ಉಮಾಶಂಕರ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ವಿಮಾನ ನಿಲ್ದಾಣ: ಕೋವಿಡ್ ಸಾಂಕ್ರಾಮಿಕ ತಡೆಗೆ ಕಟ್ಟೆಚ್ಚರ

19 ಪ್ರಯಾಣಿಕರಿಗೆ ಸೋಂಕು ದೃಢ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿದೇಶದಿಂದ ಆಗಮಿಸುತ್ತಿರುವ ಪ್ರಯಾಣಿಕರನ್ನು ನಿಲ್ದಾಣದಲ್ಲಿಯೇ ಜಿಲ್ಲಾ ಆರೋಗ್ಯ ಇಲಾಖೆಯು ಪರೀಕ್ಷೆಗೆ ಒಳಪಡಿಸುತ್ತಿದ್ದು, ಡಿ. 1ರಿಂದ ಬುಧವಾರದವರೆಗೆ 19 ಪ್ರಯಾಣಿಕರಲ್ಲಿ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ.

ಬಿಎಫ್.7 ರೂಪಾಂತರಿ ವೈರಸ್‌ನ ಆತಂಕದ ಹಿನ್ನೆಲೆಯಲ್ಲಿ ಸರ್ಕಾರ ಹೊಸ ಮಾರ್ಗಸೂಚಿ ಹೊರಡಿಸಿದ್ದು, ಇದರ ಕಟ್ಟುನಿಟ್ಟಿನ ಪಾಲನೆಗೆ ನಿರ್ದೇಶನ ನೀಡಲಾಗಿದೆ. ವಿಮಾನ ನಿಲ್ದಾಣದಲ್ಲಿ ಶೇ 2ರಷ್ಟು ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಲಾಗುತ್ತಿದೆ. ಸೋಂಕು ದೃಢಪಟ್ಟ ಪ್ರಯಾಣಿಕರ ಮೇಲೆ ಈಗಾಗಲೇ ಆರೋಗ್ಯ ಇಲಾಖೆ ನಿಗಾ ಇಟ್ಟಿದೆ. ಎಲ್ಲರಿಗೂ ಹೋಂ ಕ್ವಾರಂಟೈನ್ ಆಗುವಂತೆ ಸೂಚಿಸಲಾಗಿದೆ.

ಹೆಚ್ಚಿನ ಸಿಬ್ಬಂದಿ ನಿಯೋಜನೆ

ಕೋವಿಡ್ ನಿಯಂತ್ರಣಕ್ಕೆ ಪ್ರಾರಂಭದಿಂದಲೇ ನಿಗಾವಹಿಸುವ ದೃಷ್ಟಿಯಿಂದ ವಿಮಾನ ನಿಲ್ದಾಣದಲ್ಲಿ ಇಬ್ಬರು ವೈದ್ಯಾಧಿಕಾರಿಗಳು ಹಾಗೂ ಎಂಟು ಆರೋಗ್ಯ ನಿರೀಕ್ಷಕರನ್ನು ನೇಮಿಸಲಾಗಿದೆ.

ಸೋಂಕಿತರ ಪ್ರಾಥಮಿಕ ಸಂಪರ್ಕ ಪತ್ತೆ ಹಚ್ಚುವ ಕಾರ್ಯವನ್ನು ಆರೋಗ್ಯ ಇಲಾಖೆ ಮಾಡುತ್ತಿದೆ. ಇನ್ನೂ ಸೋಂಕಿತರ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದ್ದು, ವರದಿ ಆಧಾರದಡಿ ಚಿಕಿತ್ಸೆ ನೀಡಲಾಗುತ್ತದೆ.

ಹೆಚ್ಚುವರಿ ಮುನ್ನೆಚ್ಚರಿಕೆ: ಕೋವಿಡ್ ಮುನ್ನೆಚ್ಚರಿಕಾ ಕ್ರಮವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಆರ್. ಲತಾ, 'ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎರಡು ವೈದ್ಯಕೀಯ ತಂಡದೊಂದಿಗೆ ಹೆಚ್ಚುವರಿಯಾಗಿ ಇನ್ನೆರಡು ತಂಡಗಳನ್ನು ನಿಯೋಜಿಸಲಾಗಿದೆ. ನೆಗಡಿ, ಕೆಮ್ಮು, ಜ್ವರ ಸೇರಿದಂತೆ ಕೋವಿಡ್ ಲಕ್ಷಣವಿರುವ ಪ್ರಯಾಣಿಕರನ್ನು ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ. ಮಂಗಳವಾರದಿಂದಲೇ ಕೋವಿಡ್‌ಗಾಗಿಯೇ ಎರಡು ಪ್ರತ್ಯೇಕ ಆಂಬುಲೆನ್ಸ್ ನಿಯೋಜಿಸಲಾಗಿದೆ' ಎಂದು ವಿವರಿಸಿದರು.

ರೋಗಿಗಳಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಅಗತ್ಯ ಚಿಕಿತ್ಸೆಗಾಗಿ ವ್ಯವಸ್ಥೆ ಮಾಡಲಾಗಿದೆ. ಸುಲಭ ರೋಗಿಗಳ ನಿಗಾವಣೆಗೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೆಚ್ಚುವರಿಯಾಗಿ ನಿಯೋಜಿಸಲಾಗಿದೆ. ದಿನದಿಂದ ದಿನಕ್ಕೆ ವಿದೇಶದಿಂದ ಬರುತ್ತಿರುವ ಪ್ರಯಾಣಿಕರಲ್ಲಿ ಕೊರೊನಾ ಸೋಂಕು ದೃಢಪಡುವುದು ಹೆಚ್ಚಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಕಳೆದ ಎರಡು ದಿನಗಳಲ್ಲಿ ಏಳು ಪ್ರಯಾಣಿಕರಲ್ಲಿ ಸೋಂಕು ಇರುವುದು ದೃಢಪಟ್ಟಿದೆ. ಅವರ ವಿಳಾಸ ಪಡೆದು ಹೋಂ ಕ್ವಾರಂಟೈನ್ ಮಾಡಲಾಗಿದೆ. ಪ್ರತಿದಿನ ವಿದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ಹದ್ದಿನ ಕಣ್ಣಿಡಲಾಗಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿಜಯೇಂದ್ರ ತಿಳಿಸಿದರು

ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್‌ನಿಂದ ನಿರುದ್ಯೋಗಿ ಯುವಕ–ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ. ಡಿಗ್ರಿ ಮತ್ತು ಡಿಪ್ಲೊಮಾ ಪದವಿ ಪಡೆದ ಕನಿಷ್ಠ 18ರಿಂದ 27 ವರ್ಷದೊಳಗಿನ, ಪರಿಶಿಷ್ಟ ಜಾತಿ ಮತ್ತು ಪಂಗಡದ 30 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಡಿಸೆಂಬರ್ 30ರೊಳಗೆ ಅರ್ಜಿ ಸಲ್ಲಿಸಬಹುದು. 2023ರ ಜನವರಿ 1ರಿಂದ ಕಂಪ್ಯೂಟರ್ ತರಬೇತಿ ತರಗತಿಗಳು ಪ್ರಾರಂಭವಾಗಲಿವೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಈ ಕುರಿತ ಹೆಚ್ಚಿನ ಮಾಹಿತಿಗಾಗಿ 23440036/23463580/9448538107 ಸಂಪರ್ಕಿಸಿ.

ನಗರದಲ್ಲಿ ಇಂದು

ಕುವೆಂಪು ಜಯಂತಿ ವಿಶೇಷ ಕಾರ್ಯಕ್ರಮಗಳು: 'ಕುವೆಂಪು ಅವರ ವೈಚಾರಿಕ ಪ್ರಜ್ಞೆ': ಅಧ್ಯಕ್ಷತೆ: ಪಿ. ಶ್ಯಾಮರಾಜು, ಸಂಪನ್ಮೂಲ ವ್ಯಕ್ತಿ: ಕಾನಕಾನಹಳ್ಳಿ ಶಿವಮಾಧು ಎಂ., ಉಪಸ್ಥಿತಿ: ಪಾಯಲ್‌ದತ್ತ ಚೌಧರಿ, ಆಯೋಜನೆ ಮತ್ತು ಸ್ಥಳ: ರೇವಾ ವಿಶ್ವವಿದ್ಯಾಲಯ, ರುಕ್ಮಿಣಿ ಜ್ಞಾನವನ, ಯಲಹಂಕ, ಬೆಳಿಗ್ಗೆ 10

ಕುವೆಂಪು

ಕುವೆಂಪು ಜಯಂತ್ಯೋತ್ಸವ: ಅತಿಥಿಗಳು: ಸಾ.ರಾ. ಗೋವಿಂದು, ಧರಣೇಶ್ ಬಿ.ಎ., ಫಾಲನೇತ್ರ, ಎ.ಎಂ. ಲೋಕೇಶ್, ಪ್ರಸನ್ನಕುಮಾರ್, ಕನ್ನಡ ಕೃಷ್ಣ, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಕಣ್ಮಣಿ ಡಾ. ರಾಜ್‌ಕುಮಾರ್ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10.30

ವಿಶ್ವಮಾನವ ಕುವೆಂಪು: ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಅತಿಥಿ: ಬಿ.ಆರ್. ರವಿಕಾಂತೇಗೌಡ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ನಾಗಪ್ಪ ರಸ್ತೆ ಶೇಷಾದ್ರಿಪುರ, ಬೆಳಿಗ್ಗೆ 11

ಕುವೆಂಪು ಜಯಂತ್ಯುತ್ಸವ: ಉದ್ಘಾಟನೆ: ಶಿವನಂದ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಕುವೆಂಪು ಪುತ್ಥಳಿಗೆ ಮಾಲಾರ್ಪಣೆ: ಎಲ್. ಹನುಮಂತಯ್ಯ, ಅತಿಥಿ: ರಾಜಶೇಖರ್ ಮಠಪತಿ, ಉಪಸ್ಥಿತಿ: ಬೇಂದ್ರೆ ಕೃಷ್ಣಪ್ಪ, ಸನ್ಮಾನಿತರು: ಫಾಲನೇತ್ರ, ಡಾ. ವೆಂಕಟೇಶ್, ರೆಫಯಲ್‌ರಾಜು, ಮಂಜುನಾಥರಾಜು, ಹೇಮಂತ್‌ರಾಜ್, ಗಿರೀಶ್ ಲಕ್ಕಣ್ಣ, ನಾಗೇಶ್, ಎಚ್. ಶಿವರಾಮೇಗೌಡ, ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಮಲ್ಲೇಶ್ವರ ವೃತ್ತದ ಮೇಲ್ಸೇತುವೆ ಬಳಿ, ಮಲ್ಲೇಶ್ವರ, ಸಂಜೆ 4

ಕುವೆಂಪು ಜಯಂತ್ಯುತ್ಸವ: ಉದ್ಘಾಟನೆ: ಕೆ. ಮರುಳಸಿದ್ದಪ್ಪ, ಅಧ್ಯಕ್ಷತೆ: ಎ.ಜೆ. ಸದಾಶಿವ, ಅತಿಥಿ: ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಕುವೆಂಪು ಪ್ರತಿಮೆ, ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಎ.ಜೆ.ಸದಾಶಿವ



ಎಸ್.ಜಿ. ಸಿದ್ಧರಾಮಯ್ಯ

ಕುವೆಂಪು ಜನ್ಮದಿನಾಚರಣೆ: ಅಧ್ಯಕ್ಷತೆ: ಮಹೇಶ ಜೋಶಿ, ಉಪನ್ಯಾಸ:ಕೆ. ಸಿ. ಶಿವಾರೆಡ್ಡಿ, ವಿಷಯ: ಕುವೆಂಪು ಬರಹಗಳಲ್ಲಿ ಕನ್ನಡಪರ ಚಿಂತನೆಗಳು, ಮಹೇಶ್ವರಿ ಜಿ.ಬಿ., ವಿಷಯ: ಕುವೆಂಪು ಅವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆ, ಗಂಗನಹಳ್ಳಿ ಶಿವಲಿಂಗಯ್ಯ, ವಿಷಯ: ಕುವೆಂಪು ಅವರ ಶ್ರೀರಾಮಯಣ ದರ್ಶನಂ ಗಮಕ ವಾಚನ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 4.30

ರಾಷ್ಟ್ರ ಕವಿ ಕುವೆಂಪು ಜನ್ಮದಿನಾಚರಣೆ: ಉದ್ಘಾಟನೆ: ಪುಸ್ತಕಮನೆ ಹರಿಹರಪ್ರಿಯ, ಅಭಿನಂದನೆ: ವಿ. ಸೋಮಣ್ಣ, ಅಧ್ಯಕ್ಷತೆ: ಸಿ. ಸೋಮಶೇಖರ್, ಗುಂಡೀಗೆರೆ ವಿಶ್ವನಾಥ, ಅತಿಥಿಗಳು: ಶೈಲಜ ವಿ. ಸೋಮಣ್ಣ, ಅರುಣ್ ಸೋಮಣ್ಣ, ದಾಸೇಗೌಡ, ಮಹೇಶ ಎಚ್.ಪಿ, ನೃತ್ಯ ಪ್ರದರ್ಶನ: ಕಲಾಗೌರಿ ನೃತ್ಯ ತಂಡ, ಆಯೋಜನೆ: ರಂಗೋತ್ರಿ, ಸ್ಥಳ: ಜ್ಞಾನಸೌಧ, ಶ್ರೀ ಅನಂತಕುಮಾರ ಸಭಾಂಗಣ, ಮೂಡಲಪಾಳ್ಯ, ಸಂಜೆ 5

ಆನಂದಮಯ ಈ ಜಗ ಹೃದಯ: ಉದ್ಘಾಟನೆ: ವೈ.ಕೆ. ಮುದ್ದುಕೃಷ್ಣ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು: ಅಪ್ಪಗೆರೆ ತಿಮ್ಮರಾಜು, ಜೆ.ಎಚ್. ಅನಿಲಕುಮಾರ್, ಉಪಸ್ಥಿತಿ: ಎಂ. ನರಸಿಂಹ್, ಡೇವಿಡ್ ಮಂಡ್ಯ, ವಾದ್ಯ ಸಂಗೀತ: ಅಭಿಷೇಕ್ ರಾಮಪ್ರಸಾದ್ ಹಾಗೂ ತಂಡ, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಸಂಜೆ 5.30

ರಾಷ್ಟ್ರ ಕವಿ ಕುವೆಂಪು ಜನ್ಮದಿನ ಹಾಗೂ ವಿಶ್ವಮಾನವ ದಿನಾಚರಣೆ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಅತಿಥಿ: ಪ್ರೇಮಾ ಸಿದ್ದರಾಜು, ಗೀತ ಗಾಯನ: ಮುನಿರಾಜು ಕಡಬಗೆರೆ ಮತ್ತು ತಂಡ, ಕಿರುನಾಟಕ: ರಂಗಭಾರತಿ, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿಪಾರ್ಕ್, ಭಾರತ್ ನಗರ, ಸಂಜೆ 5.30

ವಿಶ್ವಮಾನವ ದಿನಾಚರಣೆ: ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿ: ರಾಜಪ್ಪ ದಳವಾಯಿ, ಉಪಸ್ಥಿತಿ: ಆರ್.ಪಿ.ಮೋಹನ್, ಚನ್ನಕೇಶವ ಮೂರ್ತಿ ಎಂ., ಗುರುರಾಜ್ ಎಂ., ನಾಟಕ ಪ್ರದರ್ಶನ: ಸ್ಮಶಾನ ಕುರುಕ್ಷೇತ್ರಂ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರ ಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 5.30

ಸಾಹಿತ್ಯ ವೆಂಕಟಸುಬ್ರಹ್ಮಣ್ಯಂ ಮತ್ತು ಪ್ರತ್ಯುಷ ಎಸ್. ಗೌಡ

ಗುರು-ಶಿಷ್ಯೆಯರ ನೃತ್ಯ ಪ್ರದರ್ಶನ: ಸಾಹಿತ್ಯ ವೆಂಕಟಸುಬ್ರಹ್ಮಣ್ಯಂ ಮತ್ತು ಪ್ರತ್ಯುಷ ಎಸ್. ಗೌಡ (ಗುರು-ಶಿಷ್ಯರು) ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

'ಕುವೆಂಪು ಮತ್ತು ವೈಚಾರಿಕ ಪ್ರಜ್ಞೆ' ಕುರಿತು ಉಪನ್ಯಾಸ: ಅಧ್ಯಕ್ಷತೆ: ಜಗದೀಶ್ ರೆಡ್ಡಿ, ಅತಿಥಿ: ಎಂ.ಸಿ. ನರೇಂದ್ರ, ಉಪನ್ಯಾಸ: ನಳಿನಿ ವೆಂಕಪ್ಪ, ಉಪಸ್ಥಿತಿ: ಮಹಾಂತೇಶ್ ದೇಗಾವಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಅಣ್ಣನ ನೆನೆಪು' ನಾಟಕ ಪ್ರದರ್ಶನ: ವಿನ್ಯಾಸ ಮತ್ತು ನಿರ್ದೇಶನ: ಹನು ರಾಮಸಂಜೀವ್, ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ಗಾಯನ: ವಿಭಾ ಗುರುರಾಜ್ ಮತ್ತು ಅಶ್ವಿನಿ ಗಲಗಲಿ, ಸ್ಥಳ: ಇ.ಎ. ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 7

ನೃತ್ಯ ಸಿರಿ: ಭರತನಾಟ್ಯ ಪ್ರದರ್ಶನ: ಲತಾ ಲಕ್ಷ್ಮೀಶ್ ಸಂಯೋಗ ಕಲಾ ಶಾಲೆಯ ಶಿಷ್ಯರಿಂದ, ನಾಗೇಶ್ ಜಿ.ಎಸ್. ಮತ್ತು ರಂಜಿತಾ ನಾಗೇಶ್, ದೀಪಾ ಸುಧೀಂದ್ರ ಮಾರ್ಗಂ ಸ್ಕೂಲ್ ಆಫ್ ಪರ್ಫಾಮಿಂಗ್ ಆರ್ಟ್ಸ್, ಕೂಚಿಪುಡಿ ಪ್ರದರ್ಶನ: ಚೇತನ್ ಗಂಗಟ್ಕರ್, ಚಂದ್ರಪ್ರಭಾ ಚೇತನ್, ಆಯೋಜನೆ: ಸುಧೀಂದ್ರ ನೃತ್ಯ ಕಲಾನಿಕೇತನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.45

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಅತಿಥಿಗಳು: ಕೆ.ಜಿ.ಎಫ್. ಬಾಬು (ಯೂಸುಫ್ ಷರೀಫ್), ಜಮೀನ್ ಪ್ರಕಾಶ್, ಜಯ್ ಶಂಕರ್ (ಜೆ.ಸಿ), ಆಯೋಜನೆ: ಕನ್ನಡ ಚಳವಳಿ ಕೇಂದ್ರ ಕೂಟ, ಸ್ಥಳ: ಜಯಚಾಮರಾಜೇಂದ್ರ ಒಡೆಯರ್ ಮಂಟಪ, ಕಬ್ಬನ ಪೇಟೆ ಮಾರುಕಟ್ಟೆ ಮುಂಭಾಗ, ಸಂಜೆ 6

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಾರ್ಷಿಕೋತ್ಸವ: ಅತಿಥಿ: ಗೋಪಾಲನ್ ಜಗದೀಶ್, ಉಪನ್ಯಾಸ: ಎಸ್.ಎಸ್. ಅಯ್ಯಂಗಾರ್, ಉಪಸ್ಥಿತಿ: ಮುತ್ತುರಾಮನ್, ರಮೇಶ್ ಎಚ್.ಎನ್., ವಾಸುದೇವಮೂರ್ತಿ ಎಲ್., ಸ್ಥಳ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣ, ಕೆ.ಆರ್. ಸರ್ಕಲ್, ಸಂಜೆ 6

ಶಂಕರ್ ನಾಗ್ ನಾಟಕೋತ್ಸವ ಸಮಾರೋಪ ಸಮಾರಂಭ ಮತ್ತು 'ಧ್ವಯ' ನಾಟಕ ಪ್ರದರ್ಶನ: ನಿರ್ದೇಶನ: ಪ್ರಶಾಂತ್ ಉದ್ಯಾವರ್, ತಂಡ: ಅರೆಹೊಳೆ ಪ್ರತಿಷ್ಠಾನ ಮತ್ತು ಕಲಾಭಿ ಥಿಯೇಟರ್, ಆಯೋಜನೆ: ರಂಗ ಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ನಾಗಸಂದ್ರ–ಬಿಐಇಸಿ ನಡುವೆ ಆಗಸ್ಟ್‌ನಲ್ಲಿ ಮೆಟ್ರೊ ರೈಲು ಸಂಚಾರ ನಿರೀಕ್ಷೆ

ಐದು ವರ್ಷ ತೆವಳಿದ ಹಸಿರು ಮಾರ್ಗದ ವಿಸ್ತರಣೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಭೂ ವಿವಾದ, ಗುತ್ತಿಗೆದಾರರ ವಿಳಂಬ ಸೇರಿ ಹಲವು ತೊಡಕುಗಳ ನಡುವೆ ಮೆಟ್ರೊ ರೈಲು ಹಸಿರು ಮಾರ್ಗದ ವಿಸ್ತರಣೆ (ರೀಚ್–3ಸಿ) ಕಾಮಗಾರಿ ಐದು ವರ್ಷಗಳಿಂದ ಕುಂಟುತ್ತಾ ಸಾಗಿದೆ.

ಮುಂದೇನು? 3

ನಾಗಸಂದ್ರದಿಂದ ಬಿಐಇಸಿ (ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ) ತನಕ 3.77 ಕಿಲೋ ಮೀಟರ್ ಉದ್ದದ ಮಾರ್ಗದಲ್ಲಿ ಮೂರು ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಬಹುಬೇಡಿಕೆಯ ಈ ಕಾಮಗಾರಿ 2017ರ ಮೇ ತಿಂಗಳಿನಲ್ಲಿ ಆರಂಭವಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯೇ ಈ ಮಾರ್ಗಕ್ಕೆ ಕಗ್ಗಂಟಾಗಿ ಕಾಡಿತ್ತು. ಹೈಕೋರ್ಟ್‌ನಲ್ಲೂ ವ್ಯಾಜ್ಯ ಇದ್ದಿದ್ದರಿಂದ ಈ ಮಾರ್ಗದ ವಿಸ್ತರಣೆ ಕಾಮಗಾರಿಗೆ ಗ್ರಹಣವೇ ಹಿಡಿದಿತ್ತು. ಕಾಮಗಾರಿಯೂ ಸ್ಥಗಿತಗೊಂಡಿತ್ತು.

ಚಿಕ್ಕಬಿದರಕಲ್ಲು ಮೂಲಕ ಜಿಂದಾಲ್–ಪ್ರೆಸ್ಟೀಜ್ ಲೇಔಟ್ ಹಾಗೂ ಅಂಚೆಪಾಳ್ಯ ಮೆಟ್ರೊ ನಿಲ್ದಾಣಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ಹೆಚ್ಚುವರಿ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಸವಾಲಾಗಿತ್ತು. ಪ್ರೆಸ್ಟೀಜ್ ಸಂಸ್ಥೆಯು ತನ್ನ ಪ್ರದೇಶದಲ್ಲಿ 12.5 ಅಡಿ ಅಗಲದ ರಸ್ತೆ ನಿರ್ಮಿಸಿ ಸಾರ್ವಜನಿಕರ ಬಳಕೆಗೆ ನೀಡಲು ಒಪ್ಪಿದ ಬಳಿಕ ಸಮಸ್ಯೆ ಇತ್ಯರ್ಥವಾಗಿದೆ.

ಈಗ ಕಾಮಗಾರಿ ನಡೆಯುತ್ತಿದೆಯಾದರೂ ವೇಗ ಪಡೆದುಕೊಂಡಿಲ್ಲ. ನಾಗಸಂದ್ರದಿಂದ ನೈಸ್ ರಸ್ತೆ ತನಕ ಎತ್ತರಿಸಿದ ಮಾರ್ಗದ ಕಾಮಗಾರಿ ಪೂರ್ಣಗೊಂಡಿದೆ. ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ಕಾಮಗಾರಿ ನಡೆಯುತ್ತಿದ್ದು, ಪಿಲ್ಲರ್‌ಗಳು ನಿರ್ಮಾಣವಾಗುತ್ತಿವೆ. ಅವುಗಳ ಮೇಲೆ ಕ್ಯಾಪ್ ಅಳವಡಿಸಿ ಸೆಗ್ಮೆಂಟ್‌ಗಳನ್ನು ಜೋಡಿಸುವ ಕಾಮಗಾರಿ ಇನ್ನಷ್ಟೇ ನಡೆಯಬೇಕಿದೆ.

ಬಳಿಕ ಹಳಿಗಳ ಜೋಡಣೆ, ಸಿಗ್ನಲಿಂಗ್, ಸಿಸ್ಟಮ್ ಕಾಮಗಾರಿ ನಡೆಯಬೇಕಿದೆ. ಜೊತೆ ಜೊತೆಯಲ್ಲೇ ನಿಲ್ದಾಣಗಳ ನಿರ್ಮಾಣ ಕೆಲಸ ನಡೆಯುತ್ತಿದೆ. ಆದರೆ, ನಿರೀಕ್ಷೆಯಷ್ಟು ವೇಗದಲ್ಲಿ ಕಾಮಗಾರಿ ನಡೆಯುತ್ತಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳೇ ಹೇಳುತ್ತಾರೆ.

ಸಿಂಪ್ಲೆಕ್ಸ್ ಕಂಪನಿ ಈ ಕಾಮಗಾರಿ ನಿರ್ವಹಿಸುತ್ತಿದ್ದು, ಬಿಎಂಆರ್‌ಸಿಎಲ್ ಅಧಿಕಾರಿಗಳ ವೇಗಕ್ಕೆ ಸ್ಪಂದಿಸುತ್ತಿಲ್ಲ. ಜೂನ್ ವೇಳೆಗೆ ಕಾಮಗಾರಿ ಪೂರ್ಣಗೊಂಡು ರೈಲುಗಳ ಸಂಚಾರ ಆರಂಭವಾಗಲಿದೆ ಎಂದು ಅಧಿಕಾರಿಗಳು ನಿರೀಕ್ಷಿಸಿದ್ದರು. ಆದರೆ, ಇನ್ನೂ ಎರಡು ತಿಂಗಳು ವಿಳಂಬವಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಿದ್ದಾರೆ.

ಅಂಕಿ–ಅಂಶ

3.77 ಕಿ.ಮೀ — ನಾಗಸಂದ್ರ–ಬಿಐಇಸಿ ನಡುವಿನ ಮಾರ್ಗದ ಉದ್ದ

₹964.68 ಕೋಟಿ — ಕಾಮಗಾರಿಯ ಅಂದಾಜು ವೆಚ್ಚ

ನಾಗಸಂದ್ರ–ಬಿಐಇಸಿ ನಡುವೆ ಮೆಟ್ರೊ ರೈಲು ಮಾರ್ಗದ ಕಾಮಗಾರಿ ನಡೆಯುತ್ತಿರುವುದು

–ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್

ತುಮಕೂರು ರಸ್ತೆ ದಟ್ಟಣೆಗೆ ಪರಿಹಾರ

ಈ ಮಾರ್ಗದ ಕಾಮಗಾರಿ ಪೂರ್ಣಗೊಂಡರೆ ತುಮಕೂರು ರಸ್ತೆಯಲ್ಲಿ ನೈಸ್ ರಸ್ತೆ ಜಂಕ್ಷನ್‌ನಿಂದ ಆಚೆಗೆ ಮಾದಾವರ ತನಕ ಮೆಟ್ರೊ ರೈಲು ಮಾರ್ಗ ವಿಸ್ತರಣೆಯಾದಂತೆ ಆಗಲಿದೆ. ನೆಲಮಂಗಲ ಸುತ್ತಮುತ್ತಲ ಪ್ರದೇಶದಿಂದ ನಗರಕ್ಕೆ ಬರುವ ಜನರಿಗೆ ಹೆಚ್ಚಿನ ಅನುಕೂಲ ಆಗಲಿದೆ. ಸದ್ಯ ನಾಗಸಂದ್ರ ತನಕ ಬಂದು ಮೆಟ್ರೊ ರೈಲು ಹತ್ತಬೇಕಿದ್ದು, ಮೂರುವರೆ ಕಿಲೋ ಮೀಟರ್ ಹಿಂದೆಯೇ ಮೆಟ್ರೊ ರೈಲು ಸಂಪರ್ಕ ದೊರೆತಂತಾಗಲಿದೆ. ತುಮಕೂರು ರಸ್ತೆಯಲ್ಲಿ ಈಗಿರುವ ದಟ್ಟಣೆಯೂ ಕೊಂಚ ಕಡಿಮೆಯಾಗುವ ಸಾಧ್ಯತೆ ಇದೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ನಿಲ್ದಾಣಗಳು

- ಮಂಜುನಾಥನಗರ
- ಜಿಂದಾಲ್
- ಬಿಐಇಸಿ

ನಾಗಸಂದ್ರ–ಬಿಐಇಸಿ ನಡುವೆ ಮೆಟ್ರೊ ರೈಲು ಮಾರ್ಗದ ನೈಸ್ ರಸ್ತೆ ಜಂಕ್ಷನ್ ಬಳಿ ನಿರ್ಮಾಣ ಹಂತದಲ್ಲಿರುವ ಮೆಟ್ರೊ ಪಿಲ್ಲರ್‌ಗಳು

ಈ ಮಾರ್ಗವನ್ನು ಸಿಂಪ್ಲೆಕ್ಸ್ ಕಂಪನಿ ಗುತ್ತಿಗೆ ಪಡೆದಿದ್ದು, ಬೇರೆ ಬೇರೆ ಕಾರಣಗಳಿಂದ ವಿಳಂಬ ಮಾಡುತ್ತಿದೆ. ಆದರೂ, ಜುಲೈ ಅಥವಾ ಆಗಸ್ಟ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಅಂದಾಜಿದೆ.

ಅಂಜುಂ ಪರ್ವೇಜ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಮಗು ಸಾವು: ಸಂಬಂಧಿಕರ ಪ್ರತಿಭಟನೆ

ಚಿಕ್ಕಮಗಳೂರು: ನಗರದ ಜಿಲ್ಲಾಸ್ಪತ್ರೆಯಲ್ಲಿ ಮಕ್ಕಳ ವಿಭಾಗದ ವಾರ್ಡ್‌ನಲ್ಲಿ ನಾಲ್ಕು ತಿಂಗಳ ಗಂಡು ಮಗು ಮೃತಪಟ್ಟಿದ್ದು, ನರ್ಸ್ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದು ಆರೋಪಿಸಿ ಸಂಬಂಧಿಕರು ಬುಧವಾರ ಪ್ರತಿಭಟನೆ ನಡೆಸಿದರು.

ಹಾಸನ ಜಿಲ್ಲೆಯ ಎಸ್.ಸೂರಾಪುರದ ಮೀನಾಕ್ಷಿ ಅವರ ನಾಲ್ಕು ತಿಂಗಳ ಕಂದಮ್ಮ ಮೃತಪಟ್ಟಿದೆ. ನವಜಾತ ಶಿಶು ಆರೈಕೆ ವಿಶೇಷ ಘಟಕ ಮುಂಭಾಗದಲ್ಲಿ ಸಂಬಂಧಿಕರು ಪ್ರತಿಭಟನೆ ನಡೆಸಿ, ನರ್ಸ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಮಗುವಿನ ತಾಯಿ ಮೀನಾಕ್ಷಿ ಮಾತನಾಡಿ, ಹಿಂಸೆಯಿಂದ ಹಾಲುಣಿಸಬೇಡಿ ಎಂದು ವೈದ್ಯರು ಹೇಳಿದ್ದಾರೆ ಎಂದರೂ ನರ್ಸ್ ಕೇಳದೇ, ಮಗುವನ್ನು ನನ್ನ ಎದೆಗೆ ಹಾಕಿ ಹಾಲು ಕುಡಿಯುವಂತೆ ತಟ್ಟಿದರು. ಮಗು ಉಸಿರು ಕಟ್ಟಿತು' ಎಂದು ಆರೋಪಿಸಿದರು.

ರ್‍ಯಾಂಬೊ ಸರ್ಕಸ್... ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ನಡೆಯುತ್ತಿರುವ ರ್‍ಯಾಂಬೊ ಸರ್ಕಸ್‌ನ ದೃಶ್ಯ.

ಪ್ರಜಾವಾಣಿ ಚಿತ್ರ/ಮರಿಯಾ ಎಸ್. ಮಟ್ಟತಿಲ್

ಐಎಲ್‌ಐ, ಸಾರಿ: ಶೇ 15 ಹೆಚ್ಚಳ

ಚಳಿ, ಹವಾಮಾನ ವೈಪರೀತ್ಯ ಕಾರಣ • ಆರ್‌ಜಿಐಸಿಡಿಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಳಿ ಹಾಗೂ ಹವಾಮಾನ ವೈಪರೀತ್ಯದಿಂದ ನಗರದಲ್ಲಿ ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಪ್ರಕರಣಗಳು ಶೇ 15ರಷ್ಟು ಹೆಚ್ಚಳವಾಗಿವೆ.

ಈ ಸಮಸ್ಯೆ ಎದುರಿಸುತ್ತಿರುವವರಿಗೆ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯಲ್ಲಿ (ಆರ್‌ಜಿಐಸಿಡಿ) ಚಿಕಿತ್ಸೆ ಒದಗಿಸಲಾಗುತ್ತಿದೆ. ಐಎಲ್‌ಐ, ಸಾರಿ ಸಮಸ್ಯೆ ಇರುವವರಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಸಂಸ್ಥೆಗೆ ಪ್ರತಿನಿತ್ಯ 200ಕ್ಕೂ ಅಧಿಕ ಹೊರರೋಗಿಗಳು ಭೇಟಿ ನೀಡುತ್ತಿದ್ದು, ಅವರಲ್ಲಿ ಶೇ 50ರಷ್ಟು ಮಂದಿ ತೀವ್ರ ಉಸಿರಾಟದ ಸಮಸ್ಯೆ ಎದುರಿಸುತ್ತಿರುವವರೇ ಆಗಿದ್ದಾರೆ.

ಸಂಸ್ಥೆಯಲ್ಲಿ ನಡೆಸಲಾಗುತ್ತಿರುವ ಕೋವಿಡ್ ಪರೀಕ್ಷೆಗಳಲ್ಲಿ ಪ್ರತಿನಿತ್ಯ ಒಂದೆರಡು ಕೋವಿಡ್ ಪ್ರಕರಣಗಳು ದೃಢಪಡುತ್ತಿವೆ. ಸೋಂಕಿತರಾದವರಿಗೆ 200 ಹಾಸಿಗೆಗಳ ಮೇಕ್ ಶಿಫ್ಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ.

ಕೋವಿಡ್ ಹೆಚ್ಚಳವಿಲ್ಲ: 'ಚಳಿಗಾಲದ ಅವಧಿಯಲ್ಲಿ ವಾತಾವರಣದಲ್ಲಿ ತೇವಾಂಶ ಇರುವುದರಿಂದ ಐಎಲ್‌ಐ, ಸಾರಿ ಪ್ರಕರಣಗಳು ಸಹಜವಾಗಿ ಹೆಚ್ಚಳವಾಗುತ್ತವೆ. ಪ್ರತಿ ವರ್ಷ ಈ ವೇಳೆ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುತ್ತವೆ. ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳವಾಗಿಲ್ಲ. ಕೊರೊನಾ ಸೋಂಕು ತಗುಲಿದವರಿಗೂ ತೀವ್ರತೆ ಕಡಿಮೆ ಇರುವುದರಿಂದ ವಿಶೇಷ ಚಿಕಿತ್ಸೆ ಇಲ್ಲದೆಯೇ ಚೇತರಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಆತಂಕಪಡುವ ಅಗತ್ಯವಿಲ್ಲ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

'ಚೀನಾದಲ್ಲಿ ಲಸಿಕಾಕರಣ ಸರಿಯಾದ ರೀತಿಯಲ್ಲಿ ನಡೆದಿರಲಿಲ್ಲ. ಕೋವಿಡ್ ನಿಯಮಾವಳಿಯೂ ಸಮರ್ಪಕವಾಗಿ ಅಲ್ಲಿ ಪಾಲನೆಯಾಗಿಲ್ಲ. ಇದರಿಂದಾಗಿ ಅಲ್ಲಿ ಪ್ರಕರಣಗಳು ಹೆಚ್ಚಿ, ವೈರಾಣು ಜೀವಕ್ಕೆ ಅಪಾಯವನ್ನು ತಂದೊಡ್ಡಿತು. ನಮ್ಮಲ್ಲಿ ಲಸಿಕಾಕರಣ ಉತ್ತಮವಾಗಿ ನಡೆದಿದ್ದರಿಂದ ಪ್ರತಿಕಾಯಗಳು ಅಭಿವೃದ್ಧಿ ಹೊಂದಿವೆ' ಎಂದು ಹೇಳಿದರು.

268 ಮರಗಳಿಗೆ ಕೊಡಲಿ

ಬೆಂಗಳೂರು: ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ನಡುವಿನ 'ಸಂಪಿಗೆ' ಕಾರಿಡಾರ್ ಸಿವಿಲ್ ಕಾಮಗಾರಿ ಆರಂಭಿಸಲು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ–ರೈಡ್) ಸಿದ್ಧತೆ ಆರಂಭಿಸಿದ್ದು, ಈ ಮಾರ್ಗಕ್ಕೆ 268 ಮರಗಳು ಬಲಿಯಾಗಲಿವೆ.

661 ಮರಗಳನ್ನು ಕಡಿಯಲು ಕೆ–ರೈಡ್ ಅನುಮತಿ ಕೋರಿತ್ತು. ಆದರೆ, 268 ಮರಗಳನ್ನು ಮಾತ್ರ ಕಡಿಯಲು ಬಿಬಿಎಂಪಿ ಅನುಮತಿ ನೀಡಿದೆ. 661 ಮರಗಳಲ್ಲಿ ಈ ರೈಲು ಮಾರ್ಗಕ್ಕೆ ಅಗತ್ಯವಾಗಿ 315 ಮರಗಳು ತೆಗೆಯಲೇಬೇಕಾಗುತ್ತದೆ. ಆದರೆ, ಇವುಗಳ ಪೈಕಿ 58 ಮರಗಳನ್ನು ಸ್ಥಳಾಂತರಿಸಲು ಸಾಧ್ಯವಿದೆ ಎಂದು ಬಿಬಿಎಂಪಿ ಅಂದಾಜಿಸಿದೆ.

ಆದ್ದರಿಂದ 268 ಮರಗಳನ್ನು ಮಾತ್ರ ಅನುಮತಿಸಿ ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಆದೇಶ ಹೊರಡಿಸಿದ್ದಾರೆ. ಈ ಮಾರ್ಗದ ಕಾಮಗಾರಿಯನ್ನು ಎಲ್ ಆ್ಯಂಡ್ ಟಿ ಕಂಪನಿ ಗುತ್ತಿಗೆ ಪಡೆದುಕೊಂಡಿದೆ. ಹೆಬ್ಬಾಳ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಕಾಮಗಾರಿ ಆರಂಭಿಸಲು ತಯಾರಿ ನಡೆಸುತ್ತಿದೆ. ಸದ್ಯದಲ್ಲೇ ಸಿವಿಲ್ ಕಾಮಗಾರಿ ಆರಂಭವಾಗುವ ಸಾಧ್ಯತೆ ಇದೆ.

ಕೆ–ರೈಡ್ ಮೊದಲ ಹಂತದಲ್ಲಿ ಕೈಗೆತ್ತಿಕೊಂಡಿರುವ ಚಿಕ್ಕಬಾಣಾವರ–ಬೈಯಪ್ಪನಹಳ್ಳಿ ನಡುವೆ 25 ಕಿ.ಮೀ. ಮಾರ್ಗದಲ್ಲಿ 9.72 ಕಿ.ಮೀ. ಎತ್ತರಿಸಿದ ಮಾರ್ಗ ನಿರ್ಮಾಣವಾಗಲಿದೆ. 24 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸಮಯ ನಿಗದಿ ಮಾಡಲಾಗಿದೆ. ಈ ಮಾರ್ಗದಲ್ಲಿ 14 ನಿಲ್ದಾಣಗಳು ನಿರ್ಮಾಣವಾಗಲಿವೆ.

ಬೆಂಗಳೂರು ವಿವಿಯ ಕಾರ್ಯಾಗಾರವನ್ನು ಗಿಡಕ್ಕೆ ನೀರುಣಿಸಿ ಉದ್ಘಾಟಿಸಿದರು

'ವಿದ್ಯಾರ್ಥಿಗಳು ಉತ್ಸಾಹದ ಚಿಲುಮೆಗಳಾಗಲಿ'

ಬೆಂಗಳೂರು: 'ವಿದ್ಯಾರ್ಥಿಗಳು ಉತ್ಸಾಹದ ಚಿಲುಮೆಗಳಾಗಿ ವಿವಿಧ ಹುದ್ದೆಗಳನ್ನು ಅಲಂಕರಿಸುವುದರ ಮೂಲಕ ದೇಶಸೇವೆ ಮಾಡಬೇಕು' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಜಯಕರ ಎಸ್.ಎಂ. ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಮತ್ತು ಸಾಧನಾ ಅಕಾಡೆಮಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಶಾಲೆಗಳಿದ್ದಂತೆ. ಅವರಿಗೆ ಒಂದು ರೂಪ ನೀಡಿ ಸಿದ್ಧಗೊಳಿಸುವ ಕಾರ್ಯ ಸ್ಪರ್ಧಾತ್ಮಕ ಪರೀಕ್ಷೆಗಳಿಂದ ಆಗಬೇಕು. ಅಂದಾಗ ಮಾತ್ರ ಅವರು ಸರ್ಕಾರಿ ಹುದ್ದೆಗಳನ್ನು ಪಡೆಯಲು ಸಾಧ್ಯ' ಎಂದರು.

ಬೆಂಗಳೂರು ವಿ.ವಿಯ ಕುಲಸಚಿವ ಮಹೇಶ ಬಾಬು, ಮಂಜುನಾಥ್ ಪಿ. ಮತ್ತು ಮಹೇಶ್ ಮಾಸಾಳ್ ಅವರು ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಉಪನ್ಯಾಸ ನೀಡಿದರು. ನರಸಿಂಹಮೂರ್ತಿ, ಕೆ. ರಾಮಮೂರ್ತಿ ಇದ್ದರು.

ಬೆಂಗಳೂರು ಭೂಸಾರಿಗೆ ಪ್ರಾಧಿಕಾರಕ್ಕೆ ಪರಿಷತ್ ಅಸ್ತು

ಬೆಳಗಾವಿ: ವಿಧಾನಸಭೆ ಅಂಗೀಕರಿಸಿದ್ದ 'ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಮಸೂದೆ–2022' ಕ್ಕೆ ವಿಧಾನ ಪರಿಷತ್ ಬುಧವಾರ ಅನುಮೋದನೆ ನೀಡಿತು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸದನದಲ್ಲಿ ಈ ಮಸೂದೆ ಮಂಡಿಸಿದರು.

ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರತಿಕ್ರಿಯಿಸಿ, 'ಈ ಪ್ರಾಧಿಕಾರ ಸ್ಥಾಪನೆಯಿಂದ ಈಗಿರುವ ಸಾಂವಿಧಾನಿಕ ಸಂಸ್ಥೆಗಳನ್ನು ಕಡೆಗಣಿಸಿದಂತಾಗುತ್ತದೆ. ಇದು ಪರ್ಯಾಯ ಆಡಳಿತಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ, ಈ ಮಸೂದೆಯನ್ನು ಪರಿಶೀಲನಾ ಸಮಿತಿ ಅಥವಾ ಜಂಟಿ ಸದನ ಸಮಿತಿಯ ಪರಾಮರ್ಶೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ಕೆ.ಎಸ್. ನವೀನ್, 'ಸಂಚಾರ ವ್ಯವಸ್ಥೆಯಲ್ಲಿ ಜಗತ್ತಿನಲ್ಲೇ ಅತ್ಯಂತ 5ನೇ ಕೆಟ್ಟ ನಗರ ಎನ್ನುವ ಕುಖ್ಯಾತಿಗೆ ಬೆಂಗಳೂರು ನಗರ ಒಳಗಾಗಿದೆ. ಹೀಗಾಗಿ, ಮುಂದಿನ 50 ವರ್ಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕು' ಎಂದರು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್, 'ಈಗಾಗಲೇ ನೂರು ಇಲಾಖೆಗಳಿವೆ. ಇದು 101ನೇಯದ್ದಾಗಲಿದೆ. ಯಾಕೆ ಇಷ್ಟು ಡಬ್ಬಾ ಅಂಗಡಿಗಳನ್ನು ತೆಗೆಯುತ್ತೀರಿ' ಎಂದು ಪ್ರಶ್ನಿಸಿದರು.

ಜನವಿರೋಧಿ ಕೃಷಿ ಕಾನೂನು ರದ್ದುಪಡಿಸಲು ರೈತ ಸಂಘ ಆಗ್ರಹ

ಜ.2ಕ್ಕೆ ಕೂಡಲಸಂಗಮದಿಂದ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನವಿರೋಧಿ ಕೃಷಿ ಕಾನೂನುಗಳು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆ ರದ್ದುಪಡಿಸಬೇಕು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜ.2ರಿಂದ 11ರ ವರೆಗೆ ಕೂಡಲಸಂಗಮದಿಂದ ಬೆಂಗಳೂರಿನವರೆಗೂ 'ಸಮಾಜ ಪರಿವರ್ತನ ಸತ್ಯಾಗ್ರಹ ಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೈತರ ಎಲ್ಲ ಬೆಳೆಗಳಿಗೆ ಖಾತರಿ ಖರೀದಿಯೊಂದಿಗೆ ಸಮಗ್ರ ಉತ್ಪಾದನಾ ವೆಚ್ಚ ಮತ್ತು ಕನಿಷ್ಠ ಬೆಂಬಲ ಬೆಲೆ ದೊರೆಯುವಂತಾಗಬೇಕು. ರಾಜ್ಯ ಸರ್ಕಾರವು ಶ್ರೀಮಂತರಿಗೆ ಅನುಕೂಲವಾಗುವಂತೆ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ಮಾಡಿದ್ದು, ಅದನ್ನು ರದ್ದುಪಡಿಸಬೇಕು' ಎಂದು ಒತ್ತಾಯಿಸಿದರು.

'ನರೇಗಾ ಕೆಲಸದ ದಿನಗಳನ್ನು 200 ದಿನಕ್ಕೆ ಹೆಚ್ಚಿಸಿ ₹600 ಕೂಲಿ ಪಾವತಿಸಬೇಕು. ದಲಿತರ ಮೇಲಿನ ದೌರ್ಜನ್ಯಗಳನ್ನು ನಿಯಂತ್ರಿಸಿ, ಶಾಲಾ–ಕಾಲೇಜುಗಳಲ್ಲಿ ಕಡ್ಡಾಯವಾಗಿ ಸಂವಿಧಾನದ ಪಠ್ಯ ಬೋಧಿಸಬೇಕು' ಎಂದರು.

'ಶಿಕ್ಷಣದ ಖಾಸಗೀಕರಣ ಮತ್ತು ಸಮಾಜದ ಕೋಮುವಾದೀಕರಣವನ್ನು ನಿಲ್ಲಿಸಬೇಕು. ಸಾರ್ವಜನಿಕ ಉದ್ದಿಮೆಗಳು ಮತ್ತು ಸಾರ್ವಜನಿಕ ಭೂಮಿಯ ಖಾಸಗೀಕರಣ ಮತ್ತು ಮಾರಾಟ ನಿಯಂತ್ರಿಸಬೇಕು. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರ ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಗೊಳಿಸಬೇಕು ಎಂದು ರಾಜ್ಯದಾದ್ಯಂತ ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಮಂಡ್ಯದಲ್ಲಿ 52 ದಿನಗಳಿಂದ ಅಹೋರಾತ್ರಿ ಧರಣಿ ನಡೆಯುತ್ತಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಆದ್ದರಿಂದ ಡಿ. 30ರಂದು ಮಂಡ್ಯಕ್ಕೆ ಆಗಮಿಸುತ್ತಿರುವ ಗೃಹ ಸಚಿವ ಅಮಿತ್ ಶಾ ಅವರಿಗೆ ಬಿಸಿ ಮುಟ್ಟಿಸಲು ರೈತರಿಂದ ರಸ್ತೆ ಬಂದ್ ಮಾಡಲಾಗುವುದು' ಎಂದರು.

ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀಪಾಟೀಲ, ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಕಾರ್ಯದರ್ಶಿ ಗೋಪಾಲ ಪಾಪೇಗೌಡ ಇದ್ದರು.

COOK REQUIRED IMMEDIATELY

A reputed Temple cum Vedhapatashala situated at Coimbatore, Tamil Nadu required a COOK to cater the needs of 50 Vedhapatashala students and also to prepare "Neivedhiyam" for God. The candidate should be well versed in Vegetarian Cooking. Salary will not be a constraint for suitable candidate.

Iyyer (or) Iyyengar candidature will be given preference Interested candidates shall get in touch, immediately, with

Mr.Chandrakumar - HR - Mobile : 96295-63666

ಹೆಸರಘಟ್ಟ ಮುಖ್ಯರಸ್ತೆಯ ಭುವನೇಶ್ವರಿ ನಗರದ ಮಂಜುನಾಥ ನೇತ್ರಾಲಯದಿಂದ ಆರು ತಿಂಗಳ ಮಗುವಿನ ಅಪರೂಪದ ಲೆನ್ಸ್ ಸೆಕ್ಟೊಮಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಸಿದ ವೈದ್ಯರ ತಂಡ.

6 ತಿಂಗಳ ಮಗುವಿನ ಲೆನ್ಸ್ ಸೆಕ್ಟೊಮಿ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟ ಮುಖ್ಯರಸ್ತೆಯ ಭುವನೇಶ್ವರಿ ನಗರದ ಮಂಜುನಾಥ ನೇತ್ರಾಲಯದಲ್ಲಿನ ವೈದ್ಯರು ಆರು ತಿಂಗಳ ಮಗುವಿನ ಎರಡು ಕಣ್ಣುಗಳ ಲೆನ್ಸ್ ಸೆಕ್ಟೊಮಿ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾಗಿದ್ದಾರೆ.

'ನಮ್ಮ ಆರು ತಿಂಗಳ ಮಗುವಿನ ಕಣ್ಣುಗಳು ಕಾಣುತ್ತಿರಲಿಲ್ಲ. ಅನೇಕ ಆಸ್ಪತ್ರೆಗಳನ್ನು ಸುತ್ತಿದ್ದೆವಾದರೂ ವೈದ್ಯರು ಚಿಕಿತ್ಸೆ ಮಾಡಲು ಹಿಂಜರಿದಿದ್ದರು. ಆಗ ಮೋದಿ ಕಣ್ಣಿನ ಆಸ್ಪತ್ರೆ ವೈದ್ಯರು ಮಂಜುನಾಥ ನೇತ್ರಾಲಯಕ್ಕೆ ಹೋಗುವಂತೆ ಸೂಚಿಸಿದರು.ಡಾ. ಮಂಜುನಾಥ್ ಅವರನ್ನು ಭೇಟಿ ಮಾಡಿದವು. ಅವರು ಮಗುವಿನ ಲೆನ್ಸ್ ಸೆಕ್ಟೊಮಿ ಶಸ್ತ್ರಚಿಕಿತ್ಸೆ ಮಾಡಿ, ಮತ್ತೆ ಕಣ್ಣು ಕಾಣುವ ಹಾಗೆ ಮಾಡಿದ್ದಾರೆ' ಎಂದು ಮಗುವಿನ ತಾಯಿ ಹೇಮಾವತಿ ಸಂತೋಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಾ. ಮಂಜುನಾಥ್, ಡಾ. ಮಹೇಶ್, ಡಾ. ತುಂಗಪ್ಪ ಮುಂತಾದವರಿದ್ದರು.

‘ಶರಾವತಿ ಸಂತ್ರಸ್ತರ ಒಕ್ಕಲೆಬ್ಬಿಸುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಶರಾವತಿ ಸಂತ್ರಸ್ತರು ಮತ್ತು ಅನುಸೂಚಿತ ಬುಡಕಟ್ಟುಗಳ ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವುದಿಲ್ಲ, ಕೇಂದ್ರ ಸರ್ಕಾರ, ಸುಪ್ರೀಂಕೋರ್ಟ್ ಮನವೊಲಿಸಿ ಜಮೀನನ್ನು ಅವರ ಹೆಸರಿಗೆ ಮಾಡಿಕೊಡಲಾಗುವುದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬುಧವಾರ ನಿಯಮ 69 ರಡಿ ಹರತಾಳು ಹಾಲಪ್ಪ ಮತ್ತು ದಿನಕರ ಶೆಟ್ಟಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ ನೀಡಿದ ಸಚಿವರು, ‘ಶರಾವತಿ ಸಂತ್ರಸ್ತರ ವಿಚಾರದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಕೇಂದ್ರಕ್ಕೆ ನಿಯೋಗ ಒಯ್ದು ಇತ್ಯರ್ಥಪಡಿಸುತ್ತೇವೆ. ಈ ವಿಚಾರವನ್ನು ನಮಗೆ ಬಿಡಿ’ ಎಂದು ಹೇಳಿದರು.

ಈ ಪ್ರಕರಣಗಳಲ್ಲಿ ಒತ್ತುವರಿದಾರರಿಗೆ ಸರ್ಕಾರ ನೋಟಿಸ್ ಜಾರಿ ಮಾಡಿರುವುದರ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಮೂಡಿಸಲಾಗುತ್ತಿದೆ. ಈ ನೋಟಿಸ್ ಒಕ್ಕಲೆಬ್ಬಿಸಲು ಅಲ್ಲ. ಅಲ್ಲಿ ವಾಸವಿರುವುದಕ್ಕೆ ದಾಖಲೆಗಳ ಪರಾಮರ್ಶೆಗೆ ಮಾತ್ರ. ಈ ರೀತಿ ಸಂಗ್ರಹಿಸಿದ ದಾಖಲೆಗಳು ವಿಭಾಗೀಯ ಅಧಿಕಾರಿಗೆ ಹೋಗುತ್ತದೆ. ಈ ನೋಟಿಸಿನ ಬಗ್ಗೆ ಭಯ ಬೇಕಿಲ್ಲ. ಅಪಪ್ರಚಾರಗಳಿಗೆ ಕಿವಿಗೊಡಬೇಕಾಗಿಲ್ಲ ಎಂದರು.

1980 ರ ಅರಣ್ಯ ಕಾಯ್ದೆ ಜಾರಿಗೆ ಬಂದ ಮೇಲೆ ರಾಜ್ಯ ಸರ್ಕಾರ ಕೇಂದ್ರದ ಮತ್ತು ಸುಪ್ರೀಂಕೋರ್ಟ್ ಒಪ್ಪಿಗೆ ಪಡೆಯದೇ ಜಮೀನು ಡಿ–ನೋಟಿಫೈ ಮಾಡಿದ್ದನ್ನು ಹೈಕೋರ್ಟ್ ಒಪ್ಪಿಕೊಂಡಿಲ್ಲ. ಇದು ನ್ಯಾಯಾಂಗ ಉಲ್ಲಂಘನೆ ಆಗುವುದರಿಂದ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲ ಎಂದು ಮಾಧುಸ್ವಾಮಿ ವಿವರಿಸಿದರು. ಕೇಂದ್ರಕ್ಕೆ ಮನವರಿಕೆ ಮಾಡಿ ಭೂಮಿ ಅವರ ಹೆಸರಿಗೆ ಮಾಡಲು ಸರ್ವ ಪ್ರಯತ್ನ ನಡೆಸಲಾಗುವುದು ಎಂದರು.

ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ರೋಡ್ ಶೋನಲ್ಲಿ ಅವಘಡ

ಕಾಲ್ತುಳಿತ: ಏಳು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಟಿಡಿಪಿ ಮುಖ್ಯಸ್ಥ ಹಾಗೂ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಬುಧವಾರ ಸಂಜೆ ನೆಲ್ಲೂರ್ ಜಿಲ್ಲೆಯ ಕಂದಕೂರ್ ಪಟ್ಟಣದಲ್ಲಿ ನಡೆಸಿದ ರೋಡ್ ಶೋನಲ್ಲಿ ಉಂಟಾದ ಕಾಲ್ತುಳಿತದಿಂದಾಗಿ ಕನಿಷ್ಠ ಏಳು ಜನರು ಮೃತಪಟ್ಟಿದ್ದಾರೆ.

ರ‍್ಯಾಲಿಯಲ್ಲಿ ಭಾಗವಹಿಸಲು ಬಂದಿದ್ದ ಏಳು ಟಿಡಿಪಿ ಬೆಂಬಲಿಗರು ಒಳಚರಂಡಿ ಕಾಲುವೆಗೆ ಬಿದ್ದಿದ್ದಾರೆ ಎಂದು ವರದಿಯಾಗಿದೆ. ಘಟನೆಯಲ್ಲಿ ಇನ್ನೂ ಹಲವರು ಗಾಯಗೊಂಡಿದ್ದು, ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ.

ನಂತರ ಎನ್‌ಟಿಆರ್ ವೃತ್ತದಲ್ಲಿ ನಡೆದ ರ‍್ಯಾಲಿಯಲ್ಲಿ ಟಿಡಿಪಿ ವತಿಯಿಂದ ಮೃತರ ಕುಟುಂಬಕ್ಕೆ ತಲಾ ₹ 10 ಲಕ್ಷ ಪರಿಹಾರವನ್ನು ನಾಯ್ಡು ಘೋಷಿಸಿದರು. ನಂತರ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

‘ಎನ್‌ಟಿಆರ್ ಟ್ರಸ್ಟ್ ಮೂಲಕ ಮೃತರ ಕುಟುಂಬದವರ ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವುದು ಸೇರಿದಂತೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡಲಾಗುವುದು. ಗಾಯಾಳುಗಳ ಚಿಕಿತ್ಸಾ ವೆಚ್ಚ ಭರಿಸಲಾಗುವುದು’ ಎಂದು ನಾಯ್ಡು ಹೇಳಿದರು.

ಚಂದ್ರಬಾಬು ನಾಯ್ಡು ಅವರು ಜಗನ್ ಮೋಹನ್ ರೆಡ್ಡಿ ಸರ್ಕಾರದ ವಿರುದ್ಧ ‘ಆಂಧ್ರಕ್ಕೆ ಯಾಕೆ ಈ ದುರವಸ್ಥೆ’ ಎಂಬ ಘೋಷವಾಕ್ಯದಡಿ ರಾಜ್ಯದಾದ್ಯಂತ ರ‍್ಯಾಲಿ ನಡೆಸುತ್ತಿದ್ದು, ಇದರಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರುತ್ತಿದ್ದಾರೆ. ಬುಧವಾರ ಸಂಜೆ ಇಂತಹ ರೋಡ್‌ಶೋ ನಡೆಯುತ್ತಿದ್ದ ವೇಳೆ ಈ ಕಾಲ್ತುಳಿತ, ಸಾವು ಸಂಭವಿಸಿದೆ.

ಬಿಜೆಪಿ ಆಗ್ರಹ: ವಿರೋಧ ಪಕ್ಷಗಳ ರ‍್ಯಾಲಿಗಳ ಬಗ್ಗೆಯೂ ಪೊಲೀಸರು ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸೋಮು ವೀರರಾಜು ಒತ್ತಾಯಿಸಿದ್ದಾರೆ.

ಆಂಧ್ರ ಪ್ರದೇಶದ ನೆಲ್ಲೂರ್‌ನ ಕಂದಕೂರ್‌ನಲ್ಲಿ ಬುಧವಾರ ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು ಅವರ ರೋಡ್‌ಶೋನಲ್ಲಿ ಕಾಲ್ತುಳಿತ ಸಂಭವಿಸಿದ ವೇಳೆ ಜನ ಗಾಬರಿಗೊಂಡರು –ಪಿಟಿಐ ಚಿತ್ರ

ಹಾವೇರಿಯಲ್ಲಿ ಕುಸ್ತಿ ಹಬ್ಬ

ಬೆಳಗಾವಿ: ‘ಕೆಲವು ವರ್ಷಗಳಿಂದ ಸ್ಥಗಿತಗೊಂಡಿರುವ ಕುಸ್ತಿ ಹಬ್ಬವನ್ನು ಈ ಬಾರಿ ಹಾವೇರಿಯಲ್ಲಿ ನಡೆಸಲು ಉದ್ದೇಶಿಸಲಾಗಿದೆ’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ್ ಪೂಜಾರಿ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಸಿ.ಎಂ. ನಿಂಬಣ್ಣನವರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕುಸ್ತಿ ಹಬ್ಬದ ದಿನಾಂಕವನ್ನು ಚರ್ಚಿಸಿ ನಿಗದಿಪಡಿಸಲಾಗುವುದು. ಮಾಜಿ ಕುಸ್ತಿಪಟುಗಳಿಗೆ ನೀಡಲಾಗುತ್ತಿದ್ದ ಮಾಸಾಶನವನ್ನು ಅರ್ಜಿ ವಿಲೇವಾರಿಗೆ ಆದ್ಯತೆ ಮೇಲೆ ಕ್ರಮವಹಿಸಲಾಗುವುದು’ ಎಂದು ಭರವಸೆ ನೀಡಿದರು.

‘ಧಾರವಾಡ ಜಿಲ್ಲೆಯಲ್ಲಿ 461 ಮಾಜಿ ಕುಸ್ತಿಪಟುಗಳು ಮಾಸಾಶನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಹಣಕಾಸಿನ ಕೊರತೆ ಎಂದು ಹೇಳಿ ಮಂಜೂರು ಮಾಡಿಲ್ಲ’ ಎಂದು ನಿಂಬಣ್ಣನವರ್ ಅಸಮಾಧಾನ ವ್ಯಕ್ತಪಡಿಸಿದರು.

‘ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ರಾಜ್ಯದಾದ್ಯಂತ 1,408 ಮಾಜಿ ಕುಸ್ತಿಪಟುಗಳಿಗೆ ಮಾಸಾಶನ ನೀಡಲಾಗುತ್ತಿದೆ. ರಾಜ್ಯಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹ 2,500, ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹ 3,000, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಿದವರಿಗೆ ₹ 4000 ಮಾಸಾಶನವನ್ನು ಕಳೆದ ಮಾರ್ಚ್‌ನಿಂದ ಕ್ರಮಾಗಿ ₹ 3,500, ₹ 4,000, ₹ 5,000ಗೆ ಹೆಚ್ಚಿಸಲಾಗಿದೆ’ ಎಂದರು.

ಬೆಂಗಳೂರು ಉತ್ತರ ತಾಲ್ಲೂಕಿನ ಹೊಸಹಳ್ಳಿಪಾಳ್ಯದಲ್ಲಿ(ಆತ್ತಿನಗಪಾಳ್ಯ) ಶ್ರೀರಂಗ ಯಕ್ಷಗಾನ ಮತ್ತು ಜಾನಪದ ಕಲಾ ಸಂಘದಿಂದ ಬುಧವಾರ ಕೆ.ಆರ್. ಸೀತಾರಾಮಾಂಜನೇಯ ತಂಡದವರು ಯಕ್ಷಗಾನ ನಾಟಕ ಪ್ರದರ್ಶಿಸಿದರು. ಶೃತಿಧರ, ತಂಡದಿಂದ ರಂಗ ಗೀತೆಗಳ ಗಾಯನ ನಡೆಯಿತು. ಕೆ.ಆರ್. ಮೋಹನ್ ರಂಗನಾಥ್, ಭಕ್ತವತ್ಸಲ ಎಂ., ಲಿಂಗಮೂರ್ತಿ ಬಿಂದು ಮಾಧವ, ರಾಮಣ್ಣ ಇದ್ದರು.

ಕಾಲೊನಿಗಿಂತ ಸ್ಮಶಾನಕ್ಕೆ ಹೆಚ್ಚು ಅನುದಾನ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜನರು ನೆಲೆಸಿರುವ ಕಾಲೊನಿಯ ಅಭಿವೃದ್ಧಿಗಿಂತ ಸ್ಮಶಾನದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಟ್ಟ ಸಮಾಜ ಕಲ್ಯಾಣ ಇಲಾಖೆ ಕ್ರಮವನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೃಷ್ಣಬೈರೇಗೌಡ ಕುಟುಕಿದರು.

ಕಾಂಗ್ರೆಸ್‌ನ ರೂಪಕಲಾ ಶಶಿಧರ್ ಅವರ ಪರವಾಗಿ ಪ್ರಶ್ನೆ ಕೇಳಿದ ಕೃಷ್ಣ ಬೈರೇಗೌಡ, ಕೆಜಿಎಫ್ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸ್ಮಶಾನಗಳ ಅಭಿವೃದ್ಧಿಗೆ ₹ 21 ಕೋಟಿ ಅನುದಾನ ನೀಡಿರುವ ಸರ್ಕಾರ, ಪರಿಶಿಷ್ಟರಿರುವ ಕಾಲೊನಿಗಳ ಅಭಿವೃದ್ಧಿ ₹ 4 ಕೋಟಿ ಮಾತ್ರ ನೀಡಿದೆ. ಇದನ್ನು ನೋಡಿದರೆ ಸರ್ಕಾರಕ್ಕೆ ಇರುವ ಹಿತಾಸಕ್ತಿಗಳೇನು? ಮೊದಲು ಬದುಕಿರುವವರ ನೆಲೆಯನ್ನು ಅಭಿವೃದ್ಧಿಪಡಿಸಬೇಕು’ ಎಂದರು.

‘ಸ್ಮಶಾನಗಳ ಅಭಿವೃದ್ಧಿಗೆ ನೀಡಿರುವ ₹ 21 ಕೋಟಿಯನ್ನು 4ಜಿ ವಿನಾಯಿತಿಯಲ್ಲಿ ಟೆಂಡರ್ ಇಲ್ಲದೇ ಕಾಮಗಾರಿ ನಡೆಸಲಾಗುತ್ತಿದ್ದು, ಟೆಂಡರ್ ಇಲ್ಲದೆ ಕಾಮಗಾರಿ ಮಾಡುವುದರಿಂದ ಭ್ರಷ್ಟಾಚಾರ ನಡೆದಿರುವ ಸಾಧ್ಯತೆಯಿದೆ. ಕಾಮಗಾರಿಗಳನ್ನು ತಕ್ಷಣ ಸ್ಥಗಿತಗೊಳಿಸಿ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಉತ್ತರ ನೀಡಿದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ‘ಟೆಂಡರ್ ಇಲ್ಲದೇ ಕಾಮಗಾರಿ ನಡೆಯುತ್ತಿರುವ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದೇನೆ. ಈ ಟೆಂಡರ್ ಪ್ರಕ್ರಿಯೆಯನ್ನು ಲೋಕೋಪಯೋಗಿ ಇಲಾಖೆಯಿಂದ ನಡೆಸಲಾಗುವುದು. ಅಗತ್ಯವಿದ್ದರೆ ತನಿಖೆಗೂ ಸಿದ್ಧ’ ಎಂದರು.

ಕೃಷಿ ಯಂತ್ರೋಪಕರಣಕ್ಕೆ ₹ 406 ಕೋಟಿ ವಿನಿಯೋಗ: ಬಿ.ಸಿ.ಪಾಟೀಲ

ಬೆಳಗಾವಿ: ‘ಪ್ರಸಕ್ತ ಸಾಲಿನಲ್ಲಿ ಕೃಷಿ ಯಂತ್ರೋಪಕರಣಕ್ಕೆ ₹ 406 ಕೋಟಿ ವಿನಿಯೋಗಿಸಲಾಗುತ್ತಿದೆ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘2022–23ನೇ ಸಾಲಿನ ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆಯಡಿ ಮೊದಲ ಕಂತಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಕೇಂದ್ರ ಸರ್ಕಾರ 35 ಟ್ರ್ಯಾಕ್ಟರ್ ಹಾಗೂ 1,255 ಪವರ್ ಟಿಲ್ಲರ್ ಹಂಚಿಕೆ ಮಾಡಿದೆ. ಈವರೆಗೆ ಕೇಂದ್ರ ಸರ್ಕಾರ ₹ 83 ಕೋಟಿ, ರಾಜ್ಯ ಸರ್ಕಾರ ₹ 30 ಕೋಟಿ ಬಿಡುಗಡೆ ಮಾಡಿದೆ’ ಎಂದರು.

‘ಕೇಂದ್ರ ಸರ್ಕಾರದಿಂದ ಎರಡನೇ ಕಂತಿನ ಕ್ರಿಯಾ ಯೋಜನೆ ಅನುಮೋದನೆಗೆ ಬಾಕಿಯಿದೆ. ‘ಈ ಹಿಂದೆ 25 ಎಚ್‌ಪಿ ಸಾಮರ್ಥ್ಯದ ಟ್ರ್ಯಾಕ್ಟರ್ ನೀಡಲಾಗುತ್ತಿದ್ದು, ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ 45 ಎಚ್‌ಪಿ ಟ್ರ್ಯಾಕ್ಟರ್ ನೀಡಲಾಗುತ್ತಿದೆ’ ಎಂದರು.

ಕೆಳಸೇತುವೆ ಕಾಮಗಾರಿ ವೀಕ್ಷಿಸಿದ ಶಾಸಕ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಾರತ್ತಹಳ್ಳಿ ಸಮೀಪದ ರೈಲ್ವೆ ಕೆಳಸೇತುವೆಗೆ ಹೊಂದಿಕೊಂಡಿರುವ ಅಶ್ವತ್ಥ್ ನಗರ, ಚಿನ್ನಪ್ಪನಹಳ್ಳಿ, ಮುನ್ನೇಕೊಳಾಲು, ಸ್ಪೈಸ್ ಗಾರ್ಡನ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಕೆಳಗೆ ನಿರ್ಮಾಣ ಆಗುತ್ತಿರುವ (ಪುಶ್ ಬಾಕ್ಸ್) ಕೆಳಸೇತುವೆಯ ಕಾಮಗಾರಿಯನ್ನು ಶಾಸಕ ಅರವಿಂದ ಲಿಂಬಾವಳಿ ವೀಕ್ಷಿಸಿದರು.

ಅರವಿಂದ ಲಿಂಬಾವಳಿ ಮಾತನಾಡಿ, ನಗರದಿಂದ ವರ್ತೂರು, ವೈಟ್‌ಫೀಲ್ಡ್ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಮಾರುತ್ತಹಳ್ಳಿ ಸಮೀಪದಲ್ಲಿ 1 ಕಿ.ಮೀ. ಅಂತರದಲ್ಲಿ ಎಲ್ಲೂ ತಿರುವು ಇಲ್ಲದಿರುವುದರಿಂದ ವಾಹನ ಸವಾರರಿಗೆ ತೊಂದರೆಯಾಗಿತ್ತು. ಸದಾ ವಾಹನ ದಟ್ಟಣೆಯಿಂದ ಸಾರ್ವಜನಿಕರು ಸುತ್ತಮುತ್ತಲಿನ ಪ್ರದೇಶಗಳಿಗೆ ತೆರಳಲು ಸಮಸ್ಯೆ ಎದುರಿಸುವಂತಾಗಿತ್ತು. ಸ್ಥಳೀಯರ ಮನವಿ ಮೇರೆಗೆ ವಾಹನ ಸವಾರರಿಗೆ ಅನುಕೂಲವಾಗಲು ಕೆಳಸೇತುವೆ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಪ್ರಧಾನ ಕಾರ್ಯದರ್ಶಿ ರಾಜೇಶ್, ಮುಖಂಡರಾದ ರಾಜಾರೆಡ್ಡಿ, ವರ್ತೂರು ಶ್ರೀಧರ್, ಶ್ರೀಧರ್ ರೆಡ್ಡಿ ಇದ್ದರು.

ಕೆಳಸೇತುವೆ ಕಾಮಗಾರಿಯನ್ನು ಶಾಸಕ ಅರವಿಂದ ಲಿಂಬಾವಳಿ ವೀಕ್ಷಿಸಿದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಪ್ರಧಾನ ಕಾರ್ಯದರ್ಶಿ ರಾಜೇಶ್, ಮುಖಂಡರಾದ ರಾಜಾರೆಡ್ಡಿ, ವರ್ತೂರು ಶ್ರೀಧರ್, ಶ್ರೀಧರ್ ರೆಡ್ಡಿ ಇದ್ದರು.

ಸುದ್ದಿ 2 ನಿಮಿಷ

ಅವೈಜ್ಞಾನಿಕ ರಸ್ತೆ ಉಬ್ಬುಗಳ ತೆರವು– ಕಾರಜೋಳ

ಬೆಳಗಾವಿ: ‘ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು’ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಅವರು ವಿಷಯ ಪ್ರಸ್ತಾಪಿಸಿ, ‘ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಹಾಕಿರುವುದರಿಂದ ತೀವ್ರ ಸಮಸ್ಯೆಯಾಗುತ್ತಿದೆ. ಇಂತಹ ಉಬ್ಬುಗಳಿಂದ ಹಲವು ಕಡೆ ಅಪಘಾತಗಳು ಸಂಭವಿಸಿ ಜೀವಹಾನಿಯೂ ಸಂಭವಿಸಿದೆ’ ಎಂದರು.

ಅದಕ್ಕೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕೂಡಾ ದನಿಗೂಡಿಸಿದರು.

‘ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವು ಮಾಡಲೇಬೇಕು’ ಎಂದು ಸಿದ್ದರಾಮಯ್ಯ ಪಟ್ಟು ಹಿಡಿದರು.

ಆಗ ಮಾತನಾಡಿದ ಕಾರಜೋಳ, ‘ಕೆಲವು ಕಡೆ ಅವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಅಳವಡಿಸಲು ಶಾಸಕರ ಒತ್ತಡ ಕೂಡಾ ಕಾರಣ. ಹೀಗಾಗಿ, ತೆರವುಗೊಳಿಸಲು ಎಲ್ಲ ಶಾಸಕರು ಸಹಕರಿಸಬೇಕು’ ಎಂದು ಅವರು ಹೇಳಿದರು.

ರಷ್ಯಾ ಜಲಾಂತರ್ಗಾಮಿ ನಿರ್ಮಾಣ ಕೇಂದ್ರದ ನಿರ್ದೇಶಕ ನಿಗೂಢ ಸಾವು

ನವದೆಹಲಿ: ಒಡಿಶಾದಲ್ಲಿ ರಷ್ಯಾದ ಉದ್ಯಮಿ ಹಾಗೂ ರಾಜಕಾರಣಿ ಪಾವೆಲ್ ಆ್ಯಂಥವ್ ಅವರು ಇದೇ 24ರಂದು ನಿಗೂಢವಾಗಿ ಮೃತಪಟ್ಟ ದಿನವೇ ಭಾರತಕ್ಕೆ ಜಲಾಂತರ್ಗಾಮಿಗಳನ್ನು ಪೂರೈಸುವ ರಷ್ಯಾದ ಅಡ್ಮಿರಾಲ್ಟಿ ಶಿಪ್‌ಯಾರ್ಡ್‌ನ ಮಹಾನಿರ್ದೇಶಕ ಅಲೆಕ್ಸಾಂಡರ್ ಬುಝುಕೋವ್ ಅವರು ಸಹ ಮೃತಪಟ್ಟಿದ್ದಾರೆ.

ಬುಝುಕೋವ್ ಅವರು ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಸಿ ಅಡ್ಮಿರಾಲ್ಟಿ ಶಿಪ್‌ಯಾರ್ಡ್‌ನಲ್ಲಿ 2012ರಿಂದ ಮುಖ್ಯಸ್ಥರಾಗಿದ್ದರು. ರಷ್ಯಾದ ನೌಕಾಪಡೆಗಾಗಿ ನಿರ್ಮಿಸಲಾಗಿರುವ ’ವೆಲಿಕಿಯಾ ಲುಕಿ‘ ಜಲಾಂತರ್ಗಾಮಿಯನ್ನು ದೇಶಕ್ಕೆ ಸಮರ್ಪಿಸುವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಒಂದು ದಿನದ ಬಳಿಕ ಅವರ ಸಾವನ್ನು ಶಿಪ್‌ಯಾರ್ಡ್ ಪ್ರಕಟಿಸಿದೆ.

ಈ ಹಿಂದಿನ ಸೋವಿಯತ್ ಒಕ್ಕೂಟದ ಅತ್ಯಂತ ಹಳೆಯ ಹಾಗೂ ದೊಡ್ಡ ಶಿಪ್‌ಯಾರ್ಡ್ ಆಗಿರುವ ಅಡ್ಮಿರಾಲ್ಟಿ ಡೀಸೆಲ್–ಎಲೆಕ್ಟ್ರಿಕ್ ಜಲಾಂತರ್ಗಾಮಿಗಳನ್ನು ನಿರ್ಮಿಸುವಲ್ಲಿ ಖ್ಯಾತವಾಗಿದ್ದು, ಭಾರತೀಯ ನೌಕಾಪಡೆಗೆ ಇಲ್ಲಿಂದ ಕನಿಷ್ಠ 15 ಜಲಾಂತರ್ಗಾಮಿಗಳು ಪೂರೈಕೆಯಾಗಿವೆ.

ಒಡಿಶಾದಲ್ಲಿ ಆ್ಯಂಥವ್ ಮತ್ತು ಅವರ ಸ್ನೇಹಿತ ವ್ಲಾಡಿಮಿರ್ ಬಿದೆನೊ ಅವರ ನಿಗೂಢ ಸಾವಿನ ಕುರಿತು ಈಗಾಗಲೇ ಸಿಐಡಿ ತನಿಖೆ ಆರಂಭವಾಗಿದೆ.

‘ಪಶುಚಿಕಿತ್ಸಾ ವಾಹನಗಳಿಗೆ ಸಿಬ್ಬಂದಿಯೇ ಇಲ್ಲ’

ಬೆಳಗಾವಿ: ‘ಪಶು ಸಂಗೋಪನಾ ಇಲಾಖೆ 290 ಪಶು ಚಿಕಿತ್ಸಾ ವಾಹನಗಳನ್ನು ಖರೀದಿಸಿ ಹಲವು ತಿಂಗಳಾಗಿದ್ದರೂ ಅಗತ್ಯವಿರುವ ಸಿಬ್ಬಂದಿಯನ್ನು ನೇಮಿಸಿಲ್ಲ. ಇದರಿಂದ, ಯೋಜನೆಯ ಉದ್ದೇಶ ಈಡೇರಿಲ್ಲ’ ಎಂದು ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಎಸ್. ರವಿ ದೂರಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಜಾನುವಾರುಗಳಿಗೆ ಚರ್ಮಗಂಟು ರೋಗ ತಗುಲಿದ್ದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಇಲಾಖೆ ಸ್ಪಂದಿಸುತ್ತಿಲ್ಲ. ಜಾನುವಾರುಗಳಿಗೆ ಸರ್ಕಾರ ದಯಾಮರಣ ಪಾಲಿಸಲಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯರ ಪ್ರಶ್ನೆಗೆ ಉತ್ತರಿಸಿದ ಸಚಿವ ಪ್ರಭು ಚವ್ಹಾಣ್, ‘ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ನೇಮಕಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಈ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಈ ಪಶು ಚಿಕಿತ್ಸಾ ವಾಹನದಲ್ಲಿ ಒಬ್ಬ ಪಶುವೈದ್ಯರು, ಒಬ್ಬ ಅರೆ ತಾಂತ್ರಿಕ ಸಿಬ್ಬಂದಿ ಮತ್ತು ವಾಹನ ಚಾಲಕರನ್ನು ನಿಯೋಜಿಸಲಾಗುವುದು’ ಎಂದು ತಿಳಿಸಿದರು.

ಶಿವಪುರ ಕೆರೆ ಪುನರುಜ್ಜೀವನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲುಷಿತಗೊಂಡಿದ್ದ ನೆಲಗದರನಹಳ್ಳಿ ಮತ್ತು ಶಿವಪುರ ಕೆರೆಗಳ ಪುನರುಜ್ಜೀವನಕ್ಕೆ ಕೊನೆಗೂ ಕಾಲ ಕೂಡಿ ಬಂದಿದ್ದು, ಅಭಿವೃದ್ಧಿ ಕಾಮಗಾರಿಗೆ ಬುಧವಾರ ಚಾಲನೆ ದೊರೆತಿದೆ.

ಈ ಭಾಗದ ಗ್ರಾಮಗಳ ಜನರ ಜೀವನಾಡಿಯಂತಿದ್ದ ಈ ಕೆರೆಗಳು ನಗರ ಬೆಳೆದಂತೆ ಕೈಗಾರಿಕೆಗಳ ತ್ಯಾಜ್ಯ ಮತ್ತು ಒಳಚರಂಡಿ ನೀರು ಹರಿದು ಕಲುಷಿತಗೊಂಡಿದ್ದವು. ಇವುಗಳ ಪುನರುಜ್ಜೀವನ ಕಾಮಗಾರಿ ಆರಂಭವಾಗಿದ್ದು, ಕೆರೆಯ ಸುತ್ತಲೂ ಏರಿ, ನಡಿಗೆ ಪಥ ನಿರ್ಮಿಸಲಾಗುವುದು. ಅಲ್ಲಲ್ಲಿ ಬೆಂಚ್‌ಗಳನ್ನು ಅಳವಡಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಒಳಚರಂಡಿ ನೀರು ಕೆರೆಗೆ ಬರುವುದನ್ನು ತಪ್ಪಿಸಿ ಮಳೆ ನೀರು ಮಾತ್ರ ಕೆರೆಗೆ ಸೇರುವಂತೆ ಮಾಡಲು ಯೋಜನೆ ರೂಪಿಸಲಾಗಿದೆ. ₹4 ಕೋಟಿ ವೆಚ್ಚದಲ್ಲಿ ನೆಲಗದರನಹಳ್ಳಿ ಕೆರೆ ಮತ್ತು ₹2 ಕೋಟಿ ವೆಚ್ಚದಲ್ಲಿ ಶಿವಪುರ ಕೆರೆ ಅಭಿವೃದ್ಧಿಯಾಗಲಿದೆ ಎಂದು ಕೆರೆ ಪುನರುಜ್ಜೀವನ ಕಾಮಗಾರಿಗೆ ಚಾಲನೆ ನೀಡಿದ ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ತಿಳಿಸಿದರು.

‘30 ವರ್ಷಗಳ ಹಿಂದೆ ಈ ಎರಡು ಕೆರೆಗಳಲ್ಲಿನ ನೀರನ್ನು ಜನ ಕುಡಿಯಲು ಬಳಸುತ್ತಿದ್ದರು. ಬಳಿಕ ಕಲುಷಿತಗೊಂಡಿದ್ದರಿಂದ ದನ–ಕರುಗಳು ನೀರು ಕುಡಿಯಲೂ ಸಾಧ್ಯವಾಗದ ಸ್ಥಿತಿ ಇತ್ತು. ಪುನರುಜ್ಜೀವನ ಕಾಮಗಾರಿಗೆ ಈಗ ಚಾಲನೆ ನೀಡಲಾಗಿದೆ. ಇದರಿಂದ ಜನರಿಗೆ ಅನುಕೂಲ ಆಗಲಿದೆ’ ಎಂದರು.

ನೆಲಗದರನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಚಾಲನೆ ನೀಡಿದರು. ಜೆಡಿಎಸ್ ಮುಖಂಡರಾದ ಮುನಿಸ್ವಾಮಣ್ಣ, ನರಸಿಂಹಮೂರ್ತಿ, ರುದ್ರೇಗೌಡ, ಸಿ.ಜೆ.ರಮೇಶ್, ಗೋಪಾಲಕೃಷ್ಣ, ಕೆ.ಎನ್. ರಾಜಣ್ಣ, ಎಚ್.ಜಿ. ಸುರೇಶ್ ಹಾಗೂ ಗ್ರಾಮಸ್ಥರು ಇದ್ದರು

‘ಮಿಡ್‌ನೈಟ್ ವಾಕಥಾನ್’ಗೆ ಚಾಲನೆ

ಸುಶಾಸನ ಸಂಸ್ಕೃತಿ ಪರಿಚಯಿಸಿದ ಮೇರುವ್ಯಕ್ತಿ ವಾಜಪೇಯಿ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸುಶಾಸನ ಸಂಸ್ಕೃತಿಯನ್ನು ದೇಶಕ್ಕೆ ಪರಿಚಯಿಸಿದ ಮೇರುವ್ಯಕ್ತಿಯಾಗಿದ್ದಾರೆ’ ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ದಿವಂಗತ ಪ್ರಧಾನಿ ವಾಜಪೇಯಿ ಅವರ 98ನೇ ಜನ್ಮದಿನದ ಅಂಗವಾಗಿ ‘ನಮ್ಮ ಮಲ್ಲೇಶ್ವರ ಮತ್ತು ಡಾ.ಸಿ ಎನ್ ಅಶ್ವತ್ಥನಾರಾಯಣ ಪ್ರತಿಷ್ಠಾನ’ ಆಯೋಜಿಸಿದ್ದ ‘ಮಿಡ್‌ನೈಟ್ ವಾಕಥಾನ್’ಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ವಾಜಪೇಯಿ ಅವರ ಆದರ್ಶಗಳಿಗೆ ತಕ್ಕಂತೆ ಶಿಕ್ಷಣ, ಕ್ರೀಡಾ ಮತ್ತು ಆರೋಗ್ಯ ಸೌಲಭ್ಯ, ನಾಗರಿಕ ಸುರಕ್ಷತೆ ಮತ್ತು ಸುಂದರ ಪರಿಸರ ನಿರ್ಮಾಣ ಈ ಐದು ಅಂಶಗಳನ್ನು ಮಾದರಿ ಮಲ್ಲೇಶ್ವರಂ ಅಭಿವೃದ್ಧಿಯ ಆಧಾರಸ್ತಂಭಗಳಾಗಿ ಮಾಡಿಕೊಳ್ಳಲಾಗಿದೆ. ಇದು ನಗರದ ಉಳಿದ ಭಾಗಗಳಿಗೂ ಮಾದರಿಯಾಗಲಿದೆ’ ಎಂದರು.

‘ಟೈಪ್-1 ಮಧುಮೇಹದಿಂದ ಬಳಲುತ್ತಿರುವ ಚಿಕ್ಕ ವಯಸ್ಸಿನ ಮಕ್ಕಳ ಚಿಕಿತ್ಸೆಗೆ ನೆರವಾಗಲು ‘ಪ್ರಾಜೆಕ್ಟ್ ಸೂರ್ಯ’ ಉಪಕ್ರಮದ ಮೂಲಕ ಸಹಾಯಧನ ಮತ್ತು ಇನ್ಸುಲಿನ್ ನೀಡುವುದು ವಾಕಥಾನ್‌ನ ಭಾಗವಾಗಿದೆ. ಈ ಮೂಲಕ ಸರ್ಕಾರವನ್ನು ಜನರ ಮನೆ ಬಾಗಿಲಿಗೇ ಕೊಂಡೊಯ್ಯುವ ಪ್ರಯತ್ನ ನಡೆಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

ಶನಿವಾರ ರಾತ್ರಿ 11 ಗಂಟೆಗೆ ಸರಿಯಾಗಿ ಮಲ್ಲೇಶ್ವರಂ ಆಟದ ಮೈದಾನದಿಂದ ಆರಂಭವಾದ ವಾಕಥಾನ್, ಬಳಿಕ ರಾಜಮಹಲ್ ಗುಟ್ಟಹಳ್ಳಿಯ ಯುಪಿಎಚ್‌ಸಿ, ಗುಟ್ಟಹಳ್ಳಿ ಸ್ಕೈವಾಕ್, ಸ್ಯಾಂಕಿ ಕೆರೆ, 13ನೇ ಅಡ್ಡರಸ್ತೆಯ ಸರಕಾರಿ ಕಾಲೇಜು ಮೂಲಕ ಸಾಗಿ ಚಂದ್ರಶೇಖರ ಆಜಾದ್ ಕ್ರೀಡಾಂಗಣದಲ್ಲಿ ಸಂಪನ್ನಗೊಂಡಿತು.

ರಾತ್ರಿಯ ಚುಮುಚುಮು ಚಳಿಯನ್ನೂ ಲೆಕ್ಕಿಸದೆ ವಾಕಥಾನ್‌ನಲ್ಲಿ ಹೆಜ್ಜೆ ಹಾಕಿದವರು, ವಾಜಪೇಯಿಯವರ ನೆನಪಿನಲ್ಲಿ ಘೋಷಣೆಗಳನ್ನು ಕೂಗಿದರು.

ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಅಂಗವಾಗಿ ‘ಸುಶಾಸನ ದಿನ ಮತ್ತು ಮಿಡ್‌ನೈಟ್ ವಾಕಥಾನ್’ ಮಲ್ಲೇಶ್ವರದಲ್ಲಿ ನಡೆಯಿತು.

ಚಿತ್ರಾವಳಿ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ವಸತಿ ಸಚಿವ ವಿ.ಸೋಮಣ್ಣ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಇತ್ತೀಚೆಗೆ ಪರಿಶೀಲಿಸಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ತು ಘಟಕದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಶಾಸಕ ರಿಜ್ವಾನ್ ಅರ್ಷದ್ ಉದ್ಘಾಟಿಸಿದರು. ಕಸಾಪ ನಗರ ಘಟಕದ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಶಿವಾಜಿನಗರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಎಂ. ನಾಗೇಶ್ ಶಿವಾನಂದ ಶೆಟ್ಟಿ, ಎಸ್. ಸಂಪತ್ ಕುಮಾರ್, ಡಾ. ಮಾಗಡಿ ಗಿರೀಶ್, ಇಂದಿರಾ ಶರಣ ಜಮ್ಮಲದಿನ್ನಿ, ವಿಜಯಲಕ್ಷ್ಮಿ ಸತ್ಯಮೂರ್ತಿ, ವರ್ಧಮಾನ ಕಳಸೂರು ಇದ್ದರು.

ಮಲ್ಲತ್ತಹಳ್ಳಿಯಲ್ಲಿರುವ ಕನ್ಯಾಕುಮಾರಿ ಶಾಲೆಯ ವಾರ್ಷಿಕೋತ್ಸವ ಸಮಾರಂಭವನ್ನು ಸಂಸದ ಡಿ.ಕೆ. ಸುರೇಶ ಸೋಮವಾರ ಉದ್ಘಾಟನೆ ಮಾಡಿ 10ನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿದರು. ಕುಸುಮಾ ಹನುಮಂತರಾಯಪ್ಪ, ಜೆಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಜಯರಾಮ ಶೆಟ್ಟಿ, ಕನ್ಯಾಕುಮಾರಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಎಚ್. ತುಕಾರಾಂ ಮತ್ತು ಸುವರ್ಣ ತುಕಾರಾಂ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Public are hereby informed that our client, **Smt. Malavika Ubhayaker Bijur,** is intending to purchase property bearing No. 15/7, Palace Road, Bangalore measuring approximately 3759 Sq. ft. along with all easementary and other rights over the property from **M/s. Coffee Day Global Ltd.** (previously **M/s. Amalgamated Bean Coffee Trading Company Ltd.**) more fully described in the schedule hereto.

Any person/entity or company, bank(s), financial institution(s), firm, association of persons or body of individuals, whether incorporated or not, having any form of objection, claim, right, interest, charge or interest over the schedule property is hereby informed to contact the undersigned along with all documentation and evidence ***within 15 days*** of the publication of this notice, failing which it shall be deemed that all claims have been relinquished/waived off and the title shall be deemed to be clear, marketable and free from any encumbrances of any nature whatsoever.

SCHEDULE PROPERTY

All that piece and parcel, including outhouses and other structures thereon, of **land bearing No. 15/7, Palace Road, Bangalore measuring approximately 3759 Sq. ft.** along with all 12 feet wide easementary access and bounded on the:
North By: Property bearing No. 15, Palace Road,
East By: No. 2, Ali Asker Road, BWSSB Reservoir,
South By: No. 19, Brigade Palace Apartments,
West By: Property bearing No. 16/1, Palace Road.

Sd/-
HOLLA & HOLLA, *Advocates*
Level 4, Prestige Nebula,
No. 8, Cubbon Road,
Bangalore- 560 001.
Place: Bangalore Date: 28.12.2022

BUSINESS

Business to Business

Business

CL-9 LICENSE AVAILABLE FOR LEASE (BAR) (BBMP LIMIT). 9901716888 email: rmsgroup7774@gmail.com

Financial Services

LOANS- BANK/PRIVATE Finance All Type of Loans Any Property (Any Where) Low Interest Rs.20L-To 20CR Contact: 8904047577

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

REQUIRED, TEAMLEADER, Telecaller & Field_Executive For Bank Loan collection. Direct recruitment to company. 9620206756, 9620200756.

REAL ESTATE SELLING

Farm House/ Land/ Resorts

Kanakapura Road

KANAKAPURA TOWN 1 Acre and 2 Acre with Water & Electricity Suitable for any Purpose Call Ravikumar: 9945928994.

PERSONAL

Change of Name

CHANGE OF NAME
I, **SALLY ANNAMMA** spouse of **706649-S SGT BENNY KUMAR MTD** resident of #109, Sonu Vihar, Poovanna Block, Manorayana Palya, R.T. Nagar Post, Bengaluru, Karnataka 560032 have changed my Name from **SALLY ANNAMMA** to **ANNAMMA SALLY** vide affidavit dated 26/12/2022 before VI Addl Chief Metropolitan Magistrate, Bengaluru.

JC669673X, SUB/MAJ, Rajesh Kumar Mohanta 2ATC Daughter name record's RITIKA MOHANTA to RITIKA MAHANTA notary B.M. Chandrashekar.

I, SATYAVATHI W/o. Govindarao M Residing at No.155,Shree Haripura, Kurubaravittalapura, Shimoga, Sydarakallahalli, Karnataka-577243 have changed my name to SATYAVATHI MALLA Vide affidavit dated 30/11/2022 before Notary: Chandrakala, Bangalore

CHANGE OF NAME
I, **SHILPA KISHORE VISWANATHAN,** Residing at No. 208, 2nd Floor, 10th B Cross, 29th Main, JP Nagar 1st Phase, Bengaluru- 560078, have changed my name to **SHILPA. V,** vide affidavit dated 28.12.2022, before notary M. Narendra, Bengaluru. Henceforth I shall be called **SHILPA. V** only.

I, AHTESHAM PATHAN (Old name) R/o H.No.4204, khadakgalli, Belgaum. Have changed my name as AHTESHAM S PATHAN (New name) vide affidavit sworn before Notary 27-12-2022 N.S.Ashok Kumar Notary Gowribidanur- 561208.

I, SHAIK ZUBER R/o PrashanthNagar, Gauribidanur. Have Changed My Name to SHAIK ZUBEER vide Affidavit Dated 23.11.2022 Before Notary H.M. Adi NarayanaGowda, Gauribidanur.

Lost

LOST
We, **Anand Subramaniam & Yamini Bhaskaran,** have lost our property document, sale deed no. KRI-1-35259-2006-07, CD No. KRID293 Dated on 24-03-2007, Book no 1, Address : Flat No - S-214, Nandi Sunrise Apt, Sy No: 29/1, off outer ring road, Doddanekkundi, Marathalli post Bangalore- 560037, **while shifting the house. Finders please contact: 9980921885**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ನಿರ್ಬಂಧ: ಕವಿಗಳಿಂದ ಖಂಡನೆ

ಕವಿತೆ ವಾಚಿಸಬೇಕು, ಹಾಡುವಂತಿಲ್ಲ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಏಲಕ್ಕಿ ಕಂಪಿನ ನಾಡಿನಲ್ಲಿ ಜ.6ರಿಂದ ಜ.8ರವರೆಗೆ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ 'ಕವಿತೆಗಳನ್ನು ವಾಚಿಸಬೇಕೇ ಹೊರತು ಹಾಡುವಂತಿಲ್ಲ' ಎಂಬ ಕಸಾಪ ನಿಯಮಕ್ಕೆ ಹಲವು ಕವಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಕವಿಗೋಷ್ಠಿಗೆ ಸಂಬಂಧಿಸಿದಂತೆ, '3 ನಿಮಿಷಗಳಲ್ಲಿ ಕವಿತೆ ವಾಚನ ಮಾಡಬೇಕು, ವಾದ್ಯಗಳನ್ನು ಬಳಸುವಂತಿಲ್ಲ ಹಾಗೂ ಕವಿತೆ ವಾಚಿಸಬೇಕೇ ಹೊರತು ಹಾಡುವಂತಿಲ್ಲ' ಎಂಬ ನಿಯಮ ರೂಪಿಸಿದೆ.

ಗೋಷ್ಠಿಗೆ ಬರುವುದಿಲ್ಲ: 'ಯಾವುದೇ ವಾದ್ಯ ಬಳಸದೆ ಕವಿತೆಯನ್ನು ನಾನು ಹಾಡ ಬಯಸುತ್ತೇನೆ. ಬಹುತೇಕ ನನ್ನ ಕವಿತೆಗಳು ಹಾಡುಗಬ್ಬಗಳೇ ಆಗಿದ್ದು, ಲಯದಿಂದ ಕೂಡಿವೆ. ಕೇವಲ ವಾಚನಕ್ಕೆ ಸೀಮಿತಗೊಳಿಸಿ, ಕವಿತೆ ಹಾಡುವ ನನ್ನ ಸ್ವಾತಂತ್ರ್ಯವನ್ನು ಮಿತಿಗೊಳಿಸಲಾಗಿದೆ. ಹೀಗಾಗಿ ನಾನು ಗೋಷ್ಠಿಗೆ ಬರುವುದಿಲ್ಲ' ಎಂದು ರಾಯಚೂರು ಮೂಲದ ಕವಿ ಡಾ.ರಮೇಶ್ ಅರೋಲಿ ಕಸಾಪ ಪದಾಧಿಕಾರಿಗಳಿಗೆ ತಿಳಿಸಿದ್ದಾರೆ.

ಸಂತ ಶಿಶುನಾಳ ಷರೀಫ, ದ.ರಾ. ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಕೆ.ಎಸ್.ನಿಸಾರ್ ಅಹಮದ್, ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟ, ಡಾ.ಸಿದ್ಧಲಿಂಗಯ್ಯ ಮುಂತಾದವರ ಕಾವ್ಯಗಳು ಭಾವಗೀತೆ ಅಥವಾ ಹಾಡುಗಳ ಮೂಲಕವೇ ಕನ್ನಡಿಗರ ಮನ ಸೂರೆಗೊಂಡಿವೆ. ಹೀಗಾಗಿ ಕವಿತೆಯನ್ನು ಹಾಡಬೇಕೋ, ವಾಚಿಸಬೇಕೋ ಎಂಬುದು ಕವಿಯ ತೀರ್ಮಾನವಾಗಿರಬೇಕು ಎನ್ನುತ್ತಾರೆ ಕವಿ ವೀರಣ್ಣ ಮಡಿವಾಳರ ಹಾಗೂ ಸಾಹಿತಿ ಟಿ.ಎಸ್.ಗೊರವರ.

> ಒಂದೇ ಸಾಲನ್ನು ಹತ್ತು ಬಾರಿ ಹಾಡುವುದು, ಆಲಾಪಕ್ಕೆ 10 ನಿಮಿಷ ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಈ ಅನುಭವದ ಆಧಾರದ ಮೇಲೆ ನಿಯಮ ರೂಪಿಸಿದೆ.
> **ಮಹೇಶ ಜೋಶಿ**, ಕಸಾಪ ಅಧ್ಯಕ್ಷ

ಧರ್ಮ ದ್ವೇಷದ ಆರೋಪ: ಈ ಬಾರಿಯ ಸಾಹಿತ್ಯ ಸಮ್ಮೇಳನಕ್ಕೆ ಧರ್ಮ ದ್ವೇಷದ ಆರೋಪವೂ ಕೇಳಿ ಬಂದಿದೆ. 'ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳ 83 ಸಾಧಕರಿಗೆ ಸನ್ಮಾನ ಮಾಡಲಾಗುತ್ತಿದ್ದು, ಅವರಲ್ಲಿ ಒಬ್ಬ ಮುಸ್ಲಿಂ ಸಾಧಕನಿಗೂ ಸನ್ಮಾನ ಇಲ್ಲ. ಒಟ್ಟು 9 ವಿಚಾರ ಗೋಷ್ಠಿಯಲ್ಲಿ ಒಬ್ಬ ಮುಸ್ಲಿಂ ಲೇಖಕನಿಗೂ ಅವಕಾಶ ಇಲ್ಲ. ಕವಿಗೋಷ್ಠಿಯ 25 ಕವಿಗಳಲ್ಲಿ ಕನ್ನಡದಲ್ಲಿ ಬರೆಯುವ ಒಬ್ಬ ಮುಸ್ಲಿಂ ಕವಿಗೂ ಪ್ರಾತಿನಿಧ್ಯ ನೀಡಿಲ್ಲ. ಕರ್ನಾಟಕದ ಭಾಷಾ ವೈವಿಧ್ಯ ಗೋಷ್ಠಿಯಲ್ಲಿ ರಾಜ್ಯದಲ್ಲಿ 14 ಲಕ್ಷ ಜನ ಮಾತನಾಡುವ ಬ್ಯಾರಿ ಭಾಷೆಗೆ ಅವಕಾಶ ಇಲ್ಲ. ಸಮ್ಮೇಳನದಲ್ಲಿ ಧರ್ಮ ದ್ವೇಷ ಎದ್ದು ಕಾಣುತ್ತಿದೆ' ಎಂದು ಆರೋಪಿಸಿರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಶೇ 50ರಷ್ಟು ಮಾತ್ರ ನೋಂದಣಿ

ಹಾವೇರಿ: ಜ. 6 ರಿಂದ 8ರವರೆಗೆ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡ ಸಾಹಿತ್ಯ ಪರಿಷತ್ 20 ಸಾವಿರ ಪ್ರತಿನಿಧಿಗಳ ನೋಂದಣಿಯ ಗುರಿ ಹೊಂದಿತ್ತು. ಡಿ.25ಕ್ಕೆ ನೋಂದಣಿ ದಿನಾಂಕ ಮುಗಿದಿದ್ದು, ಶೇ 50ರಷ್ಟು ಮಾತ್ರ ನೋಂದಣಿಯಾಗಿದೆ.

ಪರಿಷತ್ ಮೊದಲ ಬಾರಿಗೆ ಆನ್‌ಲೈನ್ ನೋಂದಣಿ ಆರಂಭಿಸಿ, ಪ್ರತ್ಯೇಕ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿತ್ತು. ಆನ್‌ಲೈನ್ ನೋಂದಣಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾದ ಪರಿಣಾಮ, ಕಡೆ ಕ್ಷಣದಲ್ಲಿ ಎಚ್ಚೆತ್ತುಕೊಂಡ ಕಸಾಪ ಒಂದು ವಾರ ಆಫ್‌ಲೈನ್ ನೋಂದಣಿಗೂ ಅವಕಾಶ ಕಲ್ಪಿಸಿತು.

ಆನ್‌ಲೈನ್‌ನಲ್ಲಿ 5,169 ಮಂದಿ ಮತ್ತು ಆಫ್‌ಲೈನ್‌ನಲ್ಲಿ 5 ಸಾವಿರ ಮಂದಿ ಸೇರಿದಂತೆ ಒಟ್ಟು 10,169 ಮಂದಿ ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ.

ಆಫ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡವರ ಇ-ಮೇಲ್ ಹಾಗೂ ಮೊಬೈಲ್ ಸಂಖ್ಯೆಗೆ ಕ್ಯೂಆರ್. ಕೋಡ್ ಕಳುಹಿಸಲಾಗುತ್ತಿದೆ. ಕ್ಯೂಆರ್. ಕೋಡ್ ಅನ್ನು ಸ್ಕ್ಯಾನ್ ಮಾಡಿದ ನಂತರವೇ ಸಮ್ಮೇಳನದಲ್ಲಿ ವಸತಿ ಮತ್ತು ಕಿಟ್ ಒದಗಿಸಲಾಗುವುದು ಎಂದು ಸೂಚನೆ ನೀಡಲಾಗಿದೆ. ಆದರೆ, ನೋಂದಣಿ ಮಾಡಿಕೊಂಡ ಬಹುತೇಕರಿಗೆ ಇದುವರೆಗೆ ಕ್ಯೂ. ಆರ್. ಕೋಡ್ ಬಂದಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

'ಧರ್ಮದ ಸಮ್ಮೇಳನ ಮಾಡುತ್ತಿಲ್ಲ'

ಸಮ್ಮೇಳನದ ಆಮಂತ್ರಣ ಪತ್ರಿಕೆಯ ಮುಖಪುಟದಲ್ಲಿ ಮಿರ್ಜಾ ಇಸ್ಮಾಯಿಲ್ ಭಾವಚಿತ್ರ, ಪ್ರಧಾನ ವೇದಿಕೆಗೆ ಶಿಶುನಾಳ ಷರೀಫರ ಹೆಸರನ್ನು ಇಡಲಾಗಿದೆ. ನಾವು ಯಾವುದೇ ಧರ್ಮ ದ್ವೇಷ ಮಾಡುತ್ತಿಲ್ಲ. ನಾವು ಜಾತಿ/ ಧರ್ಮದ ಸಮ್ಮೇಳನವನ್ನೂ ಮಾಡುತ್ತಿಲ್ಲ. 'ಕನ್ನಡಿಗರ ಸಮ್ಮೇಳನ' ಮಾಡುತ್ತಿದ್ದೇವೆ. ಕನ್ನಡವೊಂದೇ ನಮ್ಮ ಮಾನದಂಡ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಅರಣ್ಯ ರಕ್ಷಣೆಗೆ ಗ್ರಾಮಸ್ಥರ ಕಾವಲು!

ಒಂದನೇ ಪುಟದಿಂದ...

'ಭೂ ಕಬಳಿಕೆದಾರರಿಂದಾಗಿ ಸುಮಾರು 60 ಎಕರೆ ವ್ಯಾಪ್ತಿಯಷ್ಟು ಅರಣ್ಯ ನಾಶವಾಗಿದೆ. ಆ ಸ್ಥಳದಲ್ಲಿ ಮತ್ತೆ ಕಾಡು ಬೆಳೆಸುವ ಶಪಥ ಮಾಡಿದ್ದೇವೆ' ಎಂದು ಗ್ರಾಮ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ರಮೇಶ ಹೇಳಿದರು.

ಕ್ಯಾಸನೂರು ಅರಣ್ಯ ಕಾಯಿಲೆ (ಮಂಗನ ಕಾಯಿಲೆ) 60 ವರ್ಷಗಳ ಹಿಂದೆ ಇದೇ ಅರಣ್ಯ ಪ್ರದೇಶದಲ್ಲಿ ಶುರುವಾಗಿತ್ತು. ವರದಾ ಹಾಗೂ ಅದರ ಉಪನದಿಗಳು ಈ ಭಾಗದಲ್ಲಿ ಹರಿಯುತ್ತವೆ. ಬೀಟೆ, ನಂದಿ, ಹೊನ್ನೆ, ದೇವದಾರ, ತಾರೆ, ಬಿಲಕಂಬಿ, ಶ್ರೀಗಂಧ, ನೇರಳೆ, ಮಾವು, ಬೈನೆ, ಮತ್ತಿ, ಕರವಲಿ, ಚ್ಯುನಗೇರಿ, ಸಂಪಿಗೆ, ಕಾರೆ, ಹೊಳಗೇರಿ, ನೆಲ್ಲಿ, ಕಣಗಲು ಸೇರಿದಂತೆ ವಿನಾಶದ ಅಂಚಿನಲ್ಲಿರುವ ವಿವಿಧ ಪ್ರಭೇದಗಳು ಇಲ್ಲಿ ಕಾಣಸಿಗುತ್ತವೆ ಎಂದು ಸಹ್ಯಾದ್ರಿ ಪಾರಂಪರಿಕ ಪ್ರಾಧಿಕಾರದ ಸದಸ್ಯ ಶ್ರೀಪಾದ ಬಿಚ್ಚುಗತ್ತಿ ತಿಳಿಸಿದ್ದಾರೆ.

ಸೊರಬ ತಾಲ್ಲೂಕಿನ ಹಲಸಿನಕೊಪ್ಪದ ಬಳಿ ದುಷ್ಕರ್ಮಿಗಳು ಕಾಡಿನಲ್ಲಿ ಬೃಹತ್ ಮರಕ್ಕೆ ರಂಧ್ರ ಕೊರೆದು ವಿಷವಿಕ್ಕಿರುವುದು

ಜೇನು ಕಾನು ಘೋಷಣೆ

ಅರಣ್ಯ ಇಲಾಖೆ ಸಹಯೋಗದಲ್ಲಿ ಹಲಸಿನಕೊಪ್ಪ, ಬರಿಗೆ, ಕ್ಯಾಸನೂರು ಅರಣ್ಯ ಪ್ರದೇಶದ ಸುತ್ತ 2011-12ರಲ್ಲಿ ಕಂದಕ ನಿರ್ಮಿಸಿ ಕಾಡು ರಕ್ಷಣಾ ಯೋಜನೆಯನ್ನು ಪಶ್ಚಿಮ ಘಟ್ಟ ಕಾರ್ಯಪಡೆ ಜಾರಿ ಮಾಡಿದೆ. ಇದರಿಂದ ಈ ಭಾಗದ ಕಾಡಿನಲ್ಲಿ ಜೇನು ಹೆಚ್ಚಿದೆ. ಇದೇ ಕಾರಣಕ್ಕೆ 2021ರಲ್ಲಿ ಸೊರಬ ತಾಲ್ಲೂಕು ಪಂಚಾಯಿತಿಯ ಜೀವ ವೈವಿಧ್ಯ ಸಮಿತಿ ಹಲಸಿನಕೊಪ್ಪ ಸುತ್ತಲಿನ ಅರಣ್ಯ ಪ್ರದೇಶವನ್ನು 'ಜೇನು- ಕಾನು' ಎಂದು ಘೋಷಿಸಿದ್ದಾಗಿ ಗ್ರಾಮದ ಮುಖಂಡ ರಾಜಾರಾಮ ಕೆರೆಕೊಪ್ಪ ವಿವರಿಸಿದರು.

'ಪ್ರಶ್ನೆ ಮಾಡಿದರೆ ಕೊಲ್ಲುವ ಸ್ಥಿತಿ'

ತುಮಕೂರು: 'ದೇಶದಲ್ಲಿ ಪ್ರಶ್ನೆ, ವಿಮರ್ಶೆ, ಟೀಕೆ ಮಾಡುವವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗುತ್ತಿದೆ. ಇಲ್ಲವೇ ಎನ್‌ಕೌಂಟರ್‌ನಲ್ಲಿ ಸಾಯಿಸುವ ಸನ್ನಿವೇಶ ಸೃಷ್ಟಿಯಾಗಿದೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆತಂಕ ವ್ಯಕ್ತಪಡಿಸಿದರು.

ನಗರ ಹೊರವಲಯದ ಅಗಳಕೋಟೆಯಲ್ಲಿ ಬುಧವಾರ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವೈಜ್ಞಾನಿಕ ಸಮ್ಮೇಳನದಲ್ಲಿ ಮಾತನಾಡಿದರು.

'ಪೆಗಾಸಸ್ ಎಂಬ ಕುತಂತ್ರಾಂಶ ಬಳಸಿ, ಗೋಪ್ಯವಾಗಿ ರಕ್ಷಿಸಿಕೊಂಡು ಬಂದು ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿದ್ದಾರೆ' ಎಂದರು.

ಕೆಆರ್‌ಎಸ್ ಬೃಂದಾವನದಲ್ಲಿ ಆತಂಕ ಮೂಡಿಸಿದ್ದ ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನದಲ್ಲಿ ಹಲವು ಬಾರಿ ಕಾಣಿಸಿಕೊಂಡು ಆತಂಕ ಮೂಡಿಸಿದ್ದ ಚಿರತೆ ಬುಧವಾರ ಮುಂಜಾನೆ ಸೆರೆ ಸಿಕ್ಕಿದೆ.

ಬೃಂದಾವನದ ಉತ್ತರ ಭಾಗದಲ್ಲಿ ಇರಿಸಿದ್ದ ಬೋನಿಗೆ ಸುಮಾರು 5 ವರ್ಷ ಪ್ರಾಯದ ಹೆಣ್ಣು ಚಿರತೆ ಸೆರೆ ಸಿಕ್ಕಿದೆ. ಬೃಂದಾವನದಲ್ಲಿ ಅ.21ರಿಂದ ನಾಲ್ಕು ಬಾರಿ ಕಾಣಿಸಿಕೊಂಡು, ಬೀದಿ ನಾಯಿಯೊಂದರ ಮೇಲೂ ದಾಳಿ ಮಾಡಿತ್ತು. ಅದೇ ಕಾರಣಕ್ಕೆ ನ.3ರಿಂದ 26 ದಿನ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿತ್ತು.

ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನದಲ್ಲಿ ಬುಧವಾರ ಚಿರತೆ ಬೋನಿಗೆ ಬಿದ್ದಿದೆ

ಸಾಧ್ವಿ ಪ್ರಜ್ಞಾ ಸಿಂಗ್ ವಿರುದ್ಧ ಕಾಂಗ್ರೆಸ್ ದೂರು

ಪ್ರಜ್ಞಾಸಿಂಗ್

ಶಿವಮೊಗ್ಗ: ದ್ವೇಷ ಭಾಷಣದ ಹಿನ್ನೆಲೆಯಲ್ಲಿ ಭೋಪಾಲ್‌ನ ಬಿಜೆಪಿ ಸಂಸದೆ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ವಿರುದ್ಧ ಎಐಸಿಸಿ ಮುಖಂಡ ತೆಹಸೀನ್ ಪೂನಾವಾಲಾ ಪರವಾಗಿ ಜಿಲ್ಲಾ ಕಾಂಗ್ರೆಸ್‌ನಿಂದ ಬುಧವಾರ ಸಂಜೆ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಹಿಂದೂ ಜಾಗರಣ ವೇದಿಕೆಯು ಶಿವಮೊಗ್ಗದಲ್ಲಿ ಕಳೆದ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಧ್ವಿ ಪ್ರಜ್ಞಾ ಸಿಂಗ್ ಭಾಷಣ ಮಾಡಿದ್ದರು.

ಮಾಧ್ಯಮಗಳ ವರದಿ ಆಧರಿಸಿ ತೆಹಸೀನ್ ಪೂನಾವಾಲಾ ಅವರು ಶಿವಮೊಗ್ಗ ಎಸ್‌ಪಿ ಜಿ.ಕೆ. ಮಿಥುನ್ ಕುಮಾರ್ ಅವರಿಗೆ ಟ್ವಿಟರ್ ಮೂಲಕ ದೂರು ನೀಡಿದ್ದರು. ದ್ವೇಷ ಭಾಷಣದ ಕಾರಣ ಸಾಧ್ವಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮನವಿ ಮಾಡಿದ್ದರು.

ಟ್ವಿಟರ್ ಮೂಲಕ ದೂರು ನೀಡಿದಲ್ಲಿ ನಿಯಮಾವಳಿ ಅನ್ವಯ ಪರಿಗಣಿಸಲು ಸಾಧ್ಯವಿಲ್ಲ. ಖುದ್ದಾಗಿ ಬಂದು ದೂರು ದಾಖಲಿಸಬೇಕು ಎಂದು ಪೂನಾವಾಲಾ ಅವರಿಗೆ ತಿಳಿಸಲಾಗಿದೆ ಎಂದು ಎಸ್‌ಪಿ ಪ್ರತಿಕ್ರಿಯಿಸಿದ್ದರು.

'ಪೂನಾವಾಲಾ ಶಿವಮೊಗ್ಗಕ್ಕೆ ಬರಲು ಸಾಧ್ಯವಾಗಿಲ್ಲ. ಅವರ ಪರವಾಗಿ ನಾವೇ ದೂರು ದಾಖಲಿಸಿದ್ದೇವೆ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್. ಸುಂದರೇಶ್ ತಿಳಿಸಿದರು.

ಈ ಮಧ್ಯೆ ಟಿಎಂಸಿ ಸಂಸದ ಸಾಕೇತ್ ಗೋಖಲೆ ಅವರೂ ಇ-ಮೇಲ್ ಮೂಲಕ ಸಾಧ್ವಿ ಪ್ರಜ್ಞಾ ಸಿಂಗ್ ವಿರುದ್ಧ ಮಿಥುನ್ ಕುಮಾರ್‌ಗೆ ದೂರು ಸಲ್ಲಿಸಿದ್ದಾರೆ.

ಮೂಡಿಗೆರೆ: ಕಾಂಗ್ರೆಸ್ ಸಭೆಯಲ್ಲಿ ಗದ್ದಲ

ಚಿಕ್ಕಮಗಳೂರು: ಮೂಡಿಗೆರೆ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಗದ್ದಲ ನಡೆದಿದೆ. ನಯನಾ ಮೋಟಮ್ಮ ವಿರುದ್ಧ ಕೆಲವರು ಅಸಮಾಧಾನ ವ್ಯಕ್ತಪಡಿಸಿ, ಟಿಕೆಟ್ ನೀಡದಂತೆ ತಾಕೀತು ಮಾಡಿದ್ದಾರೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಗಫೂರ್, ಜಿಲ್ಲಾ ಘಟಕದ ಅಧ್ಯಕ್ಷ ಡಾ.ಕೆ.ಪಿ.ಅಂಶುಮಂತ್, ಪ್ರಧಾನ ಕಾರ್ಯದರ್ಶಿ ಎಂ.ಸಿ. ಶಿವಾನಂದ ಸ್ವಾಮಿ ಸಭೆಯಲ್ಲಿ ಇದ್ದರು. ಪಕ್ಷದ ಎಂ.ಎಲ್. ಅಭಿಜಿತ್, ಅಶೋಕ್ ಆಲ್ದೂರು ಇತರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ವಿಧಾನಸಭೆ ಚುನಾವಣೆಗೆ ಮೂಡಿಗೆರೆ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಕುರಿತು ಪಕ್ಷದ ಅಭಿಪ್ರಾಯ ಸಂಗ್ರಹ ಸಭೆ ನಡೆಯಿತು. ನಯನಾ ಮೋಟಮ್ಮ ವಿರುದ್ಧವಾಗಿರುವ ಮುಖಂಡರ ಹೆಸರುಗಳನ್ನು ಪಟ್ಟಿಯಿಂದ ಕೈಬಿಟ್ಟಿದ್ದರು. ನಯನಾ ಅವರಿಗೆ ಟಿಕೆಟ್ ನೀಡಬಾರದು ಎಂದು ಪಟ್ಟು ಹಿಡಿದಿದ್ದೇವೆ' ಎಂದು ಅಭಿಜಿತ್ 'ಪ್ರಜಾವಾಣಿ'ಗೆ ತಿಳಿಸಿದರು. ಮೂಡಿಗೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ನಯನಾ ಮೋಟಮ್ಮ, ಎನ್.ಆರ್. ನಾಗರತ್ನ, ಹೂವಪ್ಪ, ಪ್ರಭಾಕರ್ ಬಿನ್ನಾಡಿ, ಕೆ.ಎಂ.ಶ್ರೀರಂಗಯ್ಯ, ಪವನ್‌ಕಿಶೋರ್ ಅರ್ಜಿ ಸಲ್ಲಿಸಿದ್ದಾರೆ.

TUNGABHADRA BOARD: TB DAM

e-Procurement Long Term Tender Notice

IFB Nos.102/2022-23 Dt.13.12.2022 (2nd Call)

Tender for the work of "Permanent restoration work to Hagari Aqueduct, Construction of Piles for damaged Piers for Pier No. 9, 10, 11, 12, 13, 14, 15 & 16 of Hagari Aqueduct at Km 121.000 of RBLLC" is re-invited in respect of LLC Division, Ballari through `e-Procurement'.

Bid Document downloading Start Date & Time:	29.12.2022 at 11:00 AM
Bid Document downloading End Date & Time :	12.01.2023 at 3:00 PM
Bid Submission End Date & Time :	12.01.2023 at 5:30 PM
Date of opening of PQ Stage:	12.01.2023 at 6:00 PM
Date of opening of Commercial Stage*:	17.01.2023 at 11:00 AM
Date of opening of TQ Stage:	17.01.2023 at 3:00 PM

Further details can be seen @ https://tender.apeprocurement.gov.in
* Commencement of Reverse Tendering

Ph: 08394 – 259114
Fax 08394 - 259167

Sd/- Superintending Engineer
I.B, TB Board, TB Dam

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಹಾವೇರಿ

ಕ್ರ.ಸಂ/ಪಂರಾಇಂ/ವಿ.ಹಾ/ಪಿ.ಬಿ–2/ಟೆಂಡರ್/2022–23/5430 ದಿನಾಂಕ:28–12–2022

ಟೆಂಡರ ಪ್ರಕಟಣೆ 1 & 2ನೇ ಕರೆ (E-GOK ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

5054 ವಿಶೇಷ ಅಭಿವೃದ್ಧಿ ಅನುದಾನ ಲೆಕ್ಕ ಶೀರ್ಷಿಕೆಯಡಿ ಮಂಜೂರುಗೊಂಡ ಹಾವೇರಿ ತಾಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿದೆ.

(1) ಉಕ್ಕುಂದ ಗ್ರಾಮದ ಫಕ್ಕೀರಪ್ಪಕಳಸನಗೌಡ್ರು ಮನೆಯಿಂದ ಸ್ಮಶಾನ ರಸ್ತೆ (Call-2) **(INDENT-97351)**, (2) ಜೋಯಿಸರಹಳ್ಳಿ–ಕುಸಗೂರು ರಸ್ತೆ (Call-2) **(INDENT- 97361)**, (3) ದುಮ್ಮಿಹಾಳ ತಿಳುವಳ್ಳಿ ರಸ್ತೆ (Call-2) **(INDENT- 96546)**, (4) ಸುಣಕಲ್ ಬಿದರಿ–ಬತ್ತಿಕೊಪ್ಪ ರಸ್ತೆ **(INDENT 98524)**

1) ಟೆಂಡರ್ ಫಾರಂಗಳನ್ನು ಇ–ಪ್ರಾಕ್ಯೂರ್ ಮೆಂಟ್ ಮುಖಾಂತರ ಪಡೆದುಕೊಳ್ಳಬಹುದಾದ ದಿನಾಂಕ : **28–12–2022.**

2) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06–01–2023** ರ 16:00:00ಗಂಟೆಯವರೆಗೆ.

3) ಇ–ಪ್ರಾಕೂರ್ ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ(ಸಾಧ್ಯವಾದ್ದದಲ್ಲಿ): **07–01–2023,** 17:00:00 ಗಂಟೆಗೆ (ಕ್ರ.ಸಂ. 1 ಕ್ಕೆ)

4) ಇ–ಪ್ರಾಕೂರ್ ಮೆಂಟ್ ಆರ್ಥಿಕ ಬಿಡ್ ತೆರೆಯುವ ದಿನಾಂಕ(ಸಾಧ್ಯವಾದದಲ್ಲಿ): **11–01–2023,** 11:00:00 ಗಂಟೆಗೆ(ಕ್ರ.ಸಂ. 2 ರಿಂದ 4)

ಟೆಂಡರ್ ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-Gok ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ **www.eproc.karnatak.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಯಲ್ಲಿ ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್,
ಪಂ.ರಾ.ಇಂ.ವಿಭಾಗ, ಹಾವೇರಿ.

ವಾ.ಸಾ.ಇ/ಹಾವೇರಿ/455/2022–23/ದೇಶಪಾಂಡೆಪಬ್ಲಿಸಿಟಿ

TNPL TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Ph.: 04324 - 277001 (10 Lines). E-Mail: purchase.recycle@tnpl.co.in

NOTICE INVITING TENDER

Tender No.	Material Description	Due date
222313 005900	Procurement of 1000 MT ± 5% Office Waste Paper (White Records) in Bale form from Karnataka for TNPL Unit - I at Kagithapuram	09.01.2023

Corrigendum if any will be issued in TNPL & NIC Websites only. Detailed Terms & conditions, Tender fee, EMD etc., are available in tender document at our websites: www.tnpl.com / www.tenders.tn.gov.in / https://tntenders.gov.in/nicgep/app

DIPR/5767/Tender/2022 *TNPL - Maker of bagasse based eco-friendly Paper*

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಕರ್ನಾಟಕ ಸರ್ಕಾರ (ಸಮಾಜ ಕಲ್ಯಾಣ ಇಲಾಖೆ)
ಜಂಟಿ ನಿರ್ದೇಶಕರ ಕಾರ್ಯಾಲಯ, ಧಾರವಾಡ
ಕಛೇರಿ ದೂರವಾಣಿ ಸಂಖ್ಯೆ : 0836–2447201 ಫ್ಯಾಕ್ಸ ಸಂಖ್ಯೆ : 0836–2435475
E-Mail : dswo.dharwad@gmail.com
ಸಂ:ಜಂನಿ:ಸಕಇ:ಎಸ್–1:ಎಸ್.ಸಿ.ಎಸ್.ಪಿ–ಟಿ.ಎಸ್.ಪಿ:ಸಿ.ಆರ್–02:2022–23
ದಿನಾಂಕ : 27.12.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ವಿಷಯ : ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗುವ ಅನುದಾನದಿಂದ ಕೈಗೊಳ್ಳಲಾಗುತ್ತಿರುವ ಭವನಗಳ ನಿರ್ಮಾಣ ಕಾಮಗಾರಿ ಮತ್ತು ಪರಿಶಿಷ್ಟ ಜಾತಿ ಕಾಲೋನಿಗಳ ಅಭಿವೃದ್ಧಿ ಕಾಮಗಾರಿಗಳ (ಸಿ.ಸಿ.ರಸ್ತೆ) ಬಾಕ್ಸ್ ಚರಂಡಿ, ಕುಡಿಯುವ ನೀರಿನ ಸೌಕರ್ಯ, ವಿದ್ಯಾರ್ಥಿ ನಿಲಯ/ ವಸತಿ ನಿಲಯಗಳ ದುರಸ್ತಿ ಕಾಮಗಾರಿಗಳ ತಪಾಸಣೆಗಾಗಿ 3ನೇ ತಂಡವನ್ನು ನಿಗದಿಗೊಳಿಸಲು ಇ-ಟೆಂಡರ್ ಅಹ್ವಾನಿಸುವ ಕುರಿತು.

ಉಲ್ಲೇಖ : ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರ ಕಡತ ಟಿಪ್ಪಣಿ ಅನುಮೋದನೆ ದಿ : 16.11.2022.

ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಕೈಗೊಳ್ಳಲಾಗುತ್ತಿರುವ ಭವನಗಳ ನಿರ್ಮಾಣ ಕಾಮಗಾರಿ ಮತ್ತು ಪರಿಶಿಷ್ಟ ಜಾತಿ ಕಾಲೋನಿಗಳ ಅಭಿವೃದ್ಧಿ ಕಾಮಗಾರಿ (ಸಿ.ಸಿ.ರಸ್ತೆ) ಬಾಕ್ಸ್ ಚರಂಡಿ, ಕುಡಿಯುವ ನೀರಿನ ಸೌಕರ್ಯ, ವಿದ್ಯಾರ್ಥಿ ನಿಲಯ/ವಸತಿ ನಿಲಯಗಳ ದುರಸ್ತಿ ಕಾಮಗಾರಿಗಳ ತಪಾಸಣೆಗಾಗಿ 3ನೇ ತಂಡವನ್ನು ನಿಗದಿಗೊಳಿಸಲು ಇ-ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಅಲ್ಪಾವಧಿ ಇ-ಟೆಂಡರ್ ಅಹ್ವಾನಿಸಲಾಗಿದೆ.

:: ಇ-ಟೆಂಡರ್ ಘಟನಾವಳಿಗಳು ::

(1) ಇ-ಟೆಂಡರ್ ಪ್ರಕಟಣೆ ದಿನಾಂಕ : 29–12–2022 (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. **4,95,00,000/–** (ನಾಲ್ಕು ಕೋಟಿ ತೊಂಭತ್ತೈದು ಲಕ್ಷಗಳು ಮಾತ್ರ) (3) ಇ.ಎಂ.ಡಿ ಮೊತ್ತ : As per G.O No/FD/675/Ex12/2020 Bangalore Dated:22-12-2020 EMD exemption is extended up to 31-12-2021. But the bidder has to file a declaration. (4) ಇ-ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : **29–12–2022** ಮಧ್ಯಾಹ್ನ 3.00 ಗಂಟೆಯಿಂದ (5) ಪ್ರಿ.ಬಿಡ್ ಮೀಟಿಂಗ್ ದಿನಾಂಕ : **09.01.2023** ಮಧ್ಯಾಹ್ನ 3.00 ಗಂಟೆಯಿಂದ (6) ಇ-ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **18–01–2023** ಸಾಯಂಕಾಲ 5.00 ಗಂಟೆವರೆಗೆ (7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **21–01–2023** ಮಧ್ಯಾಹ್ನ 4.00 ಗಂಟೆಗೆ (8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **24–01–2023** ಮಧ್ಯಾಹ್ನ 3.00 ಗಂಟೆಗೆ (9) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ. ಮೊ.ಸಂ: **9480843032, / 9902475108** ದೂರವಾಣಿ ಸಂಖ್ಯೆ: **0836–2447201**

ಸಹಿ/– ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಧಾರವಾಡ

ವಾಸಾಸಂಇ/ಧಾ/ಎಂಸಿಎ/910/2022–23

ಕರ್ನಾಟಕ ಲೋಕ ಸೇವಾ ಆಯೋಗ
''ಉದ್ಯೋಗ ಸೌಧ'' ಬೆಂಗಳೂರು - 560 001

ಸಂಖ್ಯೆ: ಪಿಎಸ್‌ಸಿ 693 ಆರ್‌ಟಿಬಿ(2)/2022–23/3345 ದಿನಾಂಕ: 28.12.2022

ಪ್ರಕಟಣೆ

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 25.12.2022ರಂದು ನಡೆಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಕಿರಿಯ ಅಭಿಯಂತರರು 89+47 (ಹೈಕ) ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್ ಸೈಟ್ **http://kpsc.kar.nic.in** ನಲ್ಲಿ ದಿನಾಂಕ: **26.12.2022** ರಂದು ಪ್ರಕಟಿಸಲಾಗಿದೆ.

ಸದರಿ ಕೀ–ಉತ್ತರಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಶುಲ್ಕದೊಂದಿಗೆ ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001 ಇವರಿಗೆ ದಿನಾಂಕ: **02.01.2023ರ ಸಂಜೆ 5.30 ರೊಳಗಾಗಿ** ತಲುಪುವಂತೆ ಈ ವಿಳಾಸಕ್ಕೆ ಮಾತ್ರ ಕಳುಹಿಸಿಕೊಡಬೇಕು. ಆಕ್ಷೇಪಣೆಗಳ ವಿವರಗಳನ್ನು ಕಡ್ಡಾಯವಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.

ಮುಂದುವರೆದು, ಆಯೋಗದ ಅಂತರ್ಜಾಲತಾಣ **http://kpsc.kar.nic.in** ನಲ್ಲಿ **Homepage→Keyanswers→Post Name→Instructions to Submit objection (through e-mail ID)** ಅನ್ನು **Click** ಮಾಡಿ **E-mail** ಮುಖಾಂತರವೂ ಸಹ ಆಕ್ಷೇಪಣೆಗಳನ್ನು ಸಲ್ಲಿಸಬಹುದು, **E-mail** ಮುಖಾಂತರ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್‌ನಲ್ಲಿರುವ **QR Code** ಅನ್ನು ಸ್ಕ್ಯಾನ್ ಮಾಡಿ ನಿಗದಿತ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸುವುದು.

ನಿಗದಿತ ಶುಲ್ಕವನ್ನು ಪಾವತಿಸದ ಹಾಗೂ ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಆಕ್ಷೇಪಣೆಗಳು ಅಂಚೆಯ ಮೂಲಕ ಆಯೋಗಕ್ಕೆ ತಲುಪಲು ವಿಳಂಬವಾದಲ್ಲಿ ಹಾಗೂ **E-mail** ಮುಖಾಂತರ ಸಲ್ಲಿಸಲ್ಪಡುವ ಆಕ್ಷೇಪಣೆಗಳು ಯಾವುದೇ ತಾಂತ್ರಿಕ ದೋಷದಿಂದಾಗಿ ರವಾನಿಸಲು/ಸ್ವೀಕರಿಸಲು ವಿಫಲವಾದಲ್ಲಿ ಆಯೋಗವು ಜವಾಬ್ದಾರಿಯಾಗಿರುವುದಿಲ್ಲ.

ಸಹಿ/–(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.

ಸಂ: ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐಎಫ್‌ಟಿ–36/2022–23/ ದಿನಾಂಕ: 23.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ **ಕೆ.ಡಬ್ಲ್ಯೂ–4** ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: (1) ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಕಂದಿಕೆರೆ ಹಾಗೂ ಉಡುವಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 168.36 ಲಕ್ಷ, **ಮುಂಗಡ ಠೇವಣಿ ಮೊತ್ತ:** ರೂ. 2,53,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. (2) ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹೇಮದಾಳ ಹಾಗೂ ಎಂ.ಡಿ. ಕೋಟೆ ಕೆರೆ ಅಭಿವೃದ್ಧಿ ಕಾಮಗಾರಿ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 168.37 ಲಕ್ಷ, **ಮುಂಗಡ ಠೇವಣಿ ಮೊತ್ತ:** ರೂ. 2,53,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು. (3) ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಕೂನಿಕೆರೆ ಹಾಗೂ ಭರಂಪುರ ಕೆರೆ ಅಭಿವೃದ್ಧಿ ಕಾಮಗಾರಿ. **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 168.22 ಲಕ್ಷ, **ಮುಂಗಡ ಠೇವಣಿ ಮೊತ್ತ:** ರೂ. 2,53,000/–. **ಕಾಲಾವಧಿ (ಮಳೆಗಾಲ ಸೇರಿ):** 06 ತಿಂಗಳು.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 28.12.2022ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10.01.2023 ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 11.01.2023ರ ಸಾಯಂಕಾಲ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.01.2023 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.01.2023 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227ರಿಂದ ಪಡೆಯಬಹುದು.

RO No. 808: DIPR/CTA/MCA/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆ: ಕಲಬುರಗಿ

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1&2/2022–23/3361 ದಿನಾಂಕ: 27–12–2022

:: ತಿದ್ದುಪಡಿ ಪ್ರಕಟಣೆ ::

ಉಲ್ಲೇಖ : 1) ಈ ಕಚೇರಿ ಟೆಂಡರ್ ಪ್ರಕಟಣೆ ಸಂ: 3120, ದಿನಾಂಕ : 12–12–2022
2) ಈ ಕಚೇರಿ ಟೆಂಡರ್ ಪ್ರಕಟಣೆ ಸಂ: 3177, ದಿನಾಂಕ : 14–12–2022

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸದರಿ ಟೆಂಡರ್ ಪ್ರಕಟಣೆಯಲ್ಲಿ ಕರೆಯಲಾದ ಸೇಡಂ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಮಗಾರಿ ಇಂಡೆಂಟ್ ಸಂ. 160766, 158591, 157157, 162531, 162532 ಮತ್ತು 162477. ಚಿತ್ತಾಪೂರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಮಗಾರಿ ಇಂಡೆಂಟ್ ಸಂ 162350, 162105, 162104, 162082, 162081, 162368 ಮತ್ತು 161342. ಹಾಗೂ ಚಿಂಚೋಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಾಮಗಾರಿ ವರ್ಕ ಇಂಡೆಂಟ್ ಸಂಖ್ಯೆ : 162264, 162265, 162266, 162267, 162268, 162601 ಮತ್ತು 160489 ಗಳನ್ನು ಇ–ಪೋರ್ಟಲ್ ತಾಂತ್ರಿಕ ಕಾರಣದಿಂದಾಗಿ ಮುಂದೂಡಲಾದ ದಿನಾಂಕಗಳು ಈ ಕೆಳಗಿನಂತಿವೆ.

1) ಪೂರ್ವಭಾವಿ ಸಭೆ ದಿನಾಂಕ: **08–01–2023 (11.00 ಗಂಟೆಯವರೆಗೆ)**, 2) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **10–01–2023 (17.30 ಗಂಟೆಯವರೆಗೆ)**, 3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **11–01–2023 (16.00 ಗಂಟೆಯವರೆಗೆ)**, 4) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–01–2023 (16.30 ಗಂಟೆಯವರೆಗೆ)**, 5) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **13–01–2023 (11.30 ಗಂಟೆಯವರೆಗೆ)**

ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/1020/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

EE/RWSS/Dvn/SMG/JE/JJM/E-Proc/2022-23/2048 Date : 28.12.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ : (1) 49413 (2) 49525 (3) 49532 (4) 49535 (5) 49536 (6) 49416 (7) 49546 (8) 49551 (9) 50053 (10) 49583 (11) 49386 (12) 49417 (13) 49521 (14) 49522 (15) 49523 (16) 49520 (17) 50259 (18) 49374 (19) 49368 (20) 49545 (21) 49610 (22) 49632 (23) 49578.** ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.eproc.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **05.01.2023 ರ ಸಂಜೆ 5.30.** (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **07.01.2023 ರ ಬೆಳಿಗ್ಗೆ 11.30.** (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **07.01.2023 ರ ಬೆಳಿಗ್ಗೆ 11.30.** (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **09.01.2023 ರ ಬೆಳಿಗ್ಗೆ 11.30.** (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ 3 ತಿಂಗಳು (90 ದಿನಗಳು) ದ್ವಿ ಲಕೋಟೆ 6 ತಿಂಗಳು (180 ದಿನಗಳು).**

ಸಹಿ/– ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.185-12
ಝೇಂಕಾರ್/2022-23

ಪತ್ರಿಕಾ ಪ್ರಕಟಣೆ

ರಾಮನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಕನಕಪುರ ಮತ್ತು ರಾಮನಗರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಎಲೆಕ್ಟ್ರೀಕಲ್ ಮತ್ತು ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳಾದ 1) ಕಂಪ್ಯೂಟರ್‌ಗಳು 2) ಪ್ರಿಂಟರ್‌ಗಳು 3) ಗ್ರೈಂಡರ್‌ಗಳು 4) ವಾಟರ್ ಪ್ಯೂರಿಫೈಯರ್‌ಗಳ ಪೂರೈಕೆಗಾಗಿ E-Procurement ನಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಂಡೆಂಟ್ ನಂ:– DD/SWD/RA/ELC and ELR.T/CR-10/2022-23 ಇಚ್ಛೆಯುಳ್ಳ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1.	ಟೆಂಡರ್ ಸಂಖ್ಯೆ ಮತ್ತು ದಿನಾಂಕ:	ಉನಿ/ಸಕಇ/ರಾ/ಲೆಕ್ಕ/ಸಿಆರ್–10/ ಮೂ.ಸೌ.ಟೆಂ/2022–23 ದಿನಾಂಕ: 23/12/2022
2.	ಟೆಂಡರ್ ಪ್ರಕಟಣೆ ದಿನಾಂಕ:	23/12/2022
3.	ಟೆಂಡರ್‌ಗೆ ಇಟ್ಟ ಮೊತ್ತ	ಅಂದಾಜು ಮೊತ್ತ 60.95 ಲಕ್ಷ
4.	ಟೆಂಡರ್ ಫಾರಂ ಬೆಲೆ	As per E-Portal
5.	ಟೆಂಡರ್ ಫಾರಂ ಸಲ್ಲಿಸಲು E-Portal ಲಭ್ಯವಾಗುವ ದಿನಾಂಕ	ದಿನಾಂಕ:23/12/222
6.	ಮಾದರಿ ಸಾಮಗ್ರಿಗಳನ್ನು ಸಲ್ಲಿಸುವ ದಿನಾಂಕ (ಸ್ಯಾಂಪಲ್)	ದಿನಾಂಕ: 07/01/2023
7.	ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ	ದಿನಾಂಕ: 10/01/2023 ಸಂಜೆ 5.00 ಗಂಟೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ)
8.	ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ:	ದಿನಾಂಕ: 13/01/2023 ಬೆಳಿಗ್ಗೆ 11.00 ಗಂಟೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ)
9.	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ:	ದಿನಾಂಕ: 16/01/2023 ಬೆಳಿಗ್ಗೆ 11.00 (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.)
10.	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಒಟ್ಟು ಇ.ಎಂ.ಡಿ. ಮೊತ್ತ	ರೂ. 1.52 ಲಕ್ಷ
11.	ಒಟ್ಟು ಭದ್ರತಾ ಠೇವಣಿ ಮೊತ್ತ	ರೂ. 3.04 ಲಕ್ಷ
12.	ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:	Website: www.eproc.karnataka.gov.in ಉಪನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, 2ನೇ ಮಹಡಿ, ಬಿ.ಎಂ.ರಸ್ತೆ, ಜಿಲ್ಲಾ ಪಂಚಾಯತ್ ಭವನ, ರಾಮನಗರ ಜಿಲ್ಲೆ: E-mail: dswormgm12@gmail.com ಫೋನ್: (080)–27273003 ಮೊ: 9480843043

ವಿಶೇಷ ಸೂಚನೆ: ಈ ಕೆಳಕಂಡಂತೆ ಪ್ರತಿ ಸಾಮಗ್ರಿಗಳಿಗೂ ಇ.ಎಂ.ಡಿ. ಪಾವತಿಸಿ ಪ್ರತ್ಯೇಕವಾಗಿ ಸಾಮಾಗ್ರಿವಾರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಕ್ರ. ಸಂ.	ಸಾಮಗ್ರಿಗಳು	ಟೆಂಡರ್‌ನ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)
1.	ಕಂಪ್ಯೂಟರ್‌ಗಳು	42.00	1.05
2.	ಪ್ರಿಂಟರ್‌ಗಳು	8.70	0.21
3.	ಗ್ರೈಂಡರ್‌ಗಳು	4.75	0.12
4.	ವಾಟರ್ ಫಿಲ್ಟರ್‌ಗಳು	5.50	0.14
	ಒಟ್ಟು	**60.95**	**1.52**

1. ಇ–ಸಂಗ್ರಹಣಾ ವೇದಿಕೆಯ ಪದ್ಧತಿಯಲ್ಲಿ ಟೆಂಡರ್ ದಾಖಲೆಗಳನ್ನು ಮತ್ತು ಸರಬರಾಜು ಮಾಡಬೇಕಾದ ಪರಿಕರಗಳ ನಮೂನೆ ಹಾಗೂ ಅಳತೆಗೋಲುಗಳನ್ನು (Specifications) ಡೌನ್‌ಲೋಡ್ ಮಾಡಿಕೊಳ್ಳುವುದು.
2. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು www.eproc.karnataka.gov.in ನಲ್ಲಿ ವೀಕ್ಷಿಸಬಹುದಾಗಿರುತ್ತದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಉಪನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ,
ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.
ಡಾ. ಬಾಬು ಜಗಜೀವನರಾಂ ಭವನ, ಆದಿಪಂಪಾ ರಸ್ತೆ, ನಾರಾಯಣ ಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು–570012.
ದೂ.ಸಂ.:0821–2344661, email-dswomysore9@gmail.com
ಸಂಖ್ಯೆ:ಸಕಇ/ಜಂನಿಕಮೈತಸ/ಸಿಆರ್/2022–23 ದಿನಾಂಕ: 23.12.2022

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು/ಹೆಚ್.ಡಿ.ಕೋಟೆ ತಾಲ್ಲೂಕು/ಕೆ.ಆರ್.ನಗರ ತಾಲ್ಲೂಕು/ಮೈಸೂರು ತಾಲ್ಲೂಕು/ನಂಜನಗೂಡು ತಾಲ್ಲೂಕು/ಪಿರಿಯಾಪಟ್ಟಣ ತಾಲ್ಲೂಕು ಹಾಗೂ ತಿ.ನರಸೀಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ/ಆಶ್ರಮ ಶಾಲೆ, ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳಿಗೆ Group-A, Group-B Group-C & Group-D ಆಹಾರ ಸಾಮಗ್ರಿಗಳ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಅರ್ಹ ಸರಬರಾಜುದಾರರಿಂದ ಇ–ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ ಸಂ: ಜಂನಿ/ಸಕಇ/ಲೆಶಾ/ಸಿಆರ್–/2022–23, ದಿ: 23.12.2022 **2)** ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: **ಹುಣಸೂರು ತಾಲ್ಲೂಕು** ರೂ.112,75,000–00 ಲಕ್ಷಗಳು. **ಹೆಚ್.ಡಿ.ಕೋಟೆ ತಾಲ್ಲೂಕು** ರೂ.148,00,000–00 ಲಕ್ಷಗಳು. **ಮೈಸೂರು ತಾಲ್ಲೂಕು** ರೂ.803,46,000–00 ಲಕ್ಷಗಳು. **ಕೆ.ಆರ್.ನಗರ ತಾಲ್ಲೂಕು** ರೂ.78,00,000–00 ಲಕ್ಷಗಳು. **ನಂಜನಗೂಡು ತಾಲ್ಲೂಕು** ರೂ.151,00,000–00 ಲಕ್ಷಗಳು. **ಪಿರಿಯಾಪಟ್ಟಣ ತಾಲ್ಲೂಕು** ರೂ.63,52,000–00 ಲಕ್ಷಗಳು. **ತಿ.ನರಸೀಪುರ ತಾಲ್ಲೂಕು** ರೂ. 122,92,000–00 ಲಕ್ಷಗಳು. **3)** ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿ: 5.01.2023 **4)** ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿ: 23.01.2023, 5.00 ಗಂಟೆಗೆ. **5)** ಟೆಂಡರ್‌ನ ಪ್ರಿ ಬಿಡ್ ಸಭೆಯ ದಿ: 4.01.2023, 11.00 ಗಂಟೆಗೆ. **6)** ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿ: 27.01.2023 ಬೆಳಿಗ್ಗೆ 11.00 ಗಂಟೆಗೆ. ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು **7)** ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿ: 03.02.2023, 11.00 ಗಂಟೆಗೆ. ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು **8)** ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ

ಕ್ರ.ಸಂ	ತಾಲ್ಲೂಕು	ಇಎಂಡಿ ಮೊತ್ತ
1	ಹುಣಸೂರು	1,69,000/–
2	ಹೆಚ್.ಡಿ.ಕೋಟೆ	2,22,000/–
3	ಮೈಸೂರು	12,05,000/–
4	ಕೆ.ಆರ್.ನಗರ	1,56,000/–
5	ನಂಜನಗೂಡು	2,26,000/–
6	ಪಿರಿಯಾಪಟ್ಟಣ	1,27,000/–
7	ತಿ.ನರಸೀಪುರ	1,84,000/–

9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ಜಂಟಿನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು. ಇ.ಮೇಲ್: dswomysore9@gmail.com ದೂ.ಸಂ.: 0821–2344661

ಸಹಿ/– ಜಂಟಿನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ
DIPR/DDMYS/MCA/817/2022-23

ಚೀನಾ ಸೇರಿ 6 ದೇಶಗಳಿಂದ ಬರಲು ನೆಗೆಟಿವ್ ವರದಿ ಕಡ್ಡಾಯ • ಮುಂದಿನ 40 ದಿನಗಳು ಅತ್ಯಂತ ನಿರ್ಣಾಯಕ

ಕೋವಿಡ್: 'ಏರ್ ಸುವಿಧಾ' ಮತ್ತೆ ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಜತೆಗೆ ಇತರ ಐದು ದೇಶಗಳಿಂದ ಬರುವ ಪ್ರಯಾಣಿಕರಿಗೆ ಕಡ್ಡಾಯವಾಗಿ ಆರ್‌ಟಿ–ಪಿಸಿಆರ್‌ನ ನೆಗೆಟಿವ್ ವರದಿ ಸಲ್ಲಿಸುವ 'ಏರ್ ಸುವಿಧಾ' ಪೋರ್ಟಲ್ ಮರು ಜಾರಿಗೊಳಿಸಲು ಕೇಂದ್ರ ಸರ್ಕಾರ ಯೋಜಿಸಿದೆ.

ಕಳೆದ ಎರಡು ದಿನಗಳಲ್ಲಿ ವಿಮಾನ ನಿಲ್ದಾಣಗಳಲ್ಲಿ ಆಯ್ದ ಆರು ಸಾವಿರ ಅಂತರರಾಷ್ಟ್ರೀಯ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಲಾಗಿದ್ದು, ಇದರಲ್ಲಿ 39 ಪ್ರಯಾಣಿಕರಲ್ಲಿ ಕೋವಿಡ್ ಸೋಂಕು ದೃಢಪಟ್ಟ ನಂತರ ಕೇಂದ್ರ ಸರ್ಕಾರ, 2020ರಲ್ಲಿ ಪರಿಚಯಿಸಿದ್ದ 'ಏರ್ ಸುವಿಧಾ' ಪೋರ್ಟಲ್ ಮರು ಆರಂಭಿಸಲು ಯೋಜಿಸಿದೆ.ಇದು ಬಹುಶಃ ಮುಂದಿನ ವಾರದಿಂದ ಜಾರಿಯಾಗುವ ಸಾಧ್ಯತೆ ಇದೆ ಎಂದು ಅಧಿಕೃತ ಮೂಲಗಳು ಬುಧವಾರ ಹೇಳಿವೆ.

'ಚೀನಾ, ಜಪಾನ್, ದಕ್ಷಿಣ ಕೊರಿಯಾ, ಹಾಂಗ್‌ಕಾಂಗ್, ಥಾಯ್ಲೆಂಡ್ ಮತ್ತು ಸಿಂಗಪುರದಿಂದ ಬರುವ ಪ್ರಯಾಣಿಕರು 'ಏರ್ ಸುವಿಧಾ' ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಆರ್‌ಟಿ–ಪಿಸಿಆರ್‌ನ ನೆಗೆಟಿವ್ ವರದಿ ಸಲ್ಲಿಸಬೇಕಾಗಲಿದೆ. ಶೇ 2ರಷ್ಟು ಆಯ್ದ ಅಂತರರಾಷ್ಟ್ರೀಯ ಪ್ರಯಾಣಿಕರ ಕೋವಿಡ್ ಪರೀಕ್ಷೆ ಮುಂದುವರಿಯಲಿದೆ. ವಿಮಾನ ನಿಲ್ದಾಣಗಳಲ್ಲಿ ಪರೀಕ್ಷೆ ಮತ್ತು ತಪಾಸಣೆ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಗುರುವಾರ ದೆಹಲಿ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ, ಇದನ್ನು ಪರಿಶೀಲಿಸಲಿದ್ದಾರೆ' ಎಂದು ಆರೋಗ್ಯ ಸಚಿವಾಲಯದ ಮೂಲಗಳು ಹೇಳಿವೆ.

ದೇಶದಲ್ಲಿ ಕೋವಿಡ್ ಪ್ರಕರಣಗಳು ಜನವರಿಯಲ್ಲಿ ಉಲ್ಬಣಿಸುವ ಸಾಧ್ಯತೆ ಇದೆ. ಮುಂದಿನ ಕೆಲವು ವಾರಗಳಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏರಿಕೆಯಾಗುವ ಅಂದಾಜಿದೆ. ಚೀನಾದಲ್ಲಿ ಓಮೈಕ್ರಾನ್ ಉಪತಳಿ ಬಿಎಫ್.7 ಸೋಂಕು ಉಂಟು ಮಾಡಿರುವ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಇದು ಭಾರತದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದೆಂದು ತೀರ್ಮಾನಿಸಲು ಮುಂದಿನ 40 ದಿನಗಳು ಅತ್ಯಂತ ನಿರ್ಣಾಯಕ. ಬಿಎಫ್.7 ತಳಿಯ ಮೊದಲ ಅಲೆ ಕಾಣಿಸಿದರೂ ಆಸ್ಪತ್ರೆಗೆ ದಾಖಲಾಗುವವರು ಮತ್ತು ಸಾವಿನ ಸಂಖ್ಯೆ ತುಂಬಾ ಕಡಿಮೆ ಇರಲಿದೆ ಎಂದು ಮೂಲಗಳು ತಿಳಿಸಿವೆ.

'ಈ ಮೊದಲು ಕೋವಿಡ್ ಸೋಂಕು ಪೂರ್ವ ಏಷ್ಯಾದಲ್ಲಿ ಬಾಧಿಸಿದ 30ರಿಂದ 35 ದಿನಗಳ ನಂತರ ಭಾರತಕ್ಕೆ ತಟ್ಟಿತು. ಬಿಎಫ್ .7 ಉಪ ತಳಿಯು ಅತೀ ವೇಗವಾಗಿ ಹರಡುವ ಸೋಂಕು ಆಗಿದ್ದು, ಒಬ್ಬ ಸೋಂಕಿತ ವ್ಯಕ್ತಿಯಿಂದ ಕನಿಷ್ಠ 16 ವ್ಯಕ್ತಿಗಳಿಗೆ ಸೋಂಕು ತಗುಲುವ ಅಂದಾಜಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

4ನೇ ಡೋಸ್ ಅಗತ್ಯವಿಲ್ಲ: ತಜ್ಞರ ಸಲಹೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಬಹುತೇಕ ಜನರು ಇನ್ನೂ ಬೂಸ್ಟರ್ ಡೋಸ್ ಲಸಿಕೆ ಪಡೆದಿಲ್ಲ. ಅಲ್ಲದೇ ಎರಡನೇ ಡೋಸ್ ಲಸಿಕೆ ಎಷ್ಟೊಂದು ಬಳಕೆಯಾಗಿದೆ ಎನ್ನುವ ದತ್ತಾಂಶವೂ ಲಭ್ಯವಿಲ್ಲ. ಈ ಸಮಯದಲ್ಲಿ ಕೋವಿಡ್ ತಡೆಯಲು ನಾಲ್ಕನೇ ಡೋಸ್ ಲಸಿಕೆ ಅನಗತ್ಯ. ಆದರೆ, ಹೆಚ್ಚಿನ ಕಣ್ಗಾವಲು ವಹಿಸುವ ಅಗತ್ಯವಿದೆ' ಎಂದು ತಜ್ಞರು ಸಲಹೆ ನೀಡಿದ್ದಾರೆ.

'ದೇಶವು ಮೂರು ವರ್ಷಗಳಿಂದ ಪಾಲಿಸಿರುವ ಕೋವಿಡ್ ಶೂನ್ಯಕ್ಕಿಳಿಸುವ ನೀತಿಗಳಿಂದಾಗಿ ಸದ್ಯ ಚೀನಾದಲ್ಲಿ ಉದ್ಭವಿಸಿರುವಂತಹ ಪರಿಸ್ಥಿತಿ ಭಾರತದಲ್ಲೂ ಕಾಣಿಸಲಿದೆ ಎನ್ನುವ ತೀರ್ಮಾನಕ್ಕೆ ಬರಲು ಯಾವುದೇ ಕಾರಣಗಳು ಕಾಣಿಸುತ್ತಿಲ್ಲ' ಎಂದು ಪುಣೆಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (ಐಐಎಸ್‌ಇಆರ್) ಸಹಾಯಕ ಪ್ರಾಧ್ಯಾಪಕ ಸತ್ಯಜಿತ್ ರಾಥ್ ಹೇಳಿದ್ದಾರೆ.

'ಓಮೈಕ್ರಾನ್ ತಳಿ ಬಂದು ಹೋಗಿದೆ. ಈ ತಳಿಯ ಸೋಂಕಿಗೆ ದೇಶದಲ್ಲಿ ಲಸಿಕೆಯೂ ಲಭ್ಯವಿದೆ. ಈಗಾಗಲೇ ಜನರಲ್ಲಿ ಇದನ್ನು ಎದುರಿಸಬಲ್ಲ ರೋಗನಿರೋಧಕ ಶಕ್ತಿಯೂ ಬಂದಿದೆ. ಆದರೆ, ಇದಕ್ಕಿಂತ ಬೇರೆ ರೂಪಾಂತರಿ ಸೋಂಕು ಬಂದರೆ ಸದ್ಯ ದೇಶದಲ್ಲಿ ಲಭ್ಯವಿರುವ ಯಾವುದೇ ಲಸಿಕೆಗಳು ರಕ್ಷಣೆ ಕೊಡಲಾರವು' ಎಂದು ಐಐಎಸ್‌ಇಆರ್ ರೋಗನಿರೋಧಕ ವಿಜ್ಞಾನ ತಜ್ಞೆ ವಿನೀತಾ ಬಲ್ ಹೇಳಿದ್ದಾರೆ.

ದೇಶದಲ್ಲಿ ಬುಧವಾರ ಕೋವಿಡ್ ಸೋಂಕಿನ 188 ಹೊಸ ಪ್ರಕರಣಗಳು ವರದಿಯಾಗಿವೆ. ಸೋಂಕಿನ ಏರಿಕೆಯ ದೈನಂದಿನ ಪ್ರಮಾಣ ಶೇ 0.14 ಮತ್ತು ವಾರದಲ್ಲಿ ದೃಢಪಡುವ ಪ್ರಕರಣಗಳ ದರ ಶೇ 0.18 ಇದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಅಮೆರಿಕ, ಬ್ರಿಟನ್ ಸೇರಿ ಹಲವು ದೇಶಗಳು ಕೋವಿಡ್ ವಿರುದ್ಧ ಜನರಿಗೆ ಸಂಪೂರ್ಣ ಲಸಿಕೆ ನೀಡಿದ ನಂತರ ಮೂರನೇ ಮತ್ತು ನಾಲ್ಕನೇ ಡೋಸ್ ಲಸಿಕೆ ನೀಡಲಾರಂಭಿಸಿವೆ. ಆದರೆ, ಭಾರತದಲ್ಲಿ ಅನೇಕ ಜನರು ಇಂದಿಗೂ ಪೂರ್ಣ ಪ್ರಮಾಣದ ಲಸಿಕೆ ಡೋಸ್ ತೆಗೆದುಕೊಂಡಿಲ್ಲ.

2 ಕೋಟಿ ಲಸಿಕೆ ನೀಡಲು ಮುಂದಾದ ಸೀರಂ

ನವದೆಹಲಿ (ಪಿಟಿಐ): ಜಗತ್ತಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಎರಡು ಕೋಟಿ ಕೋವಿಶೀಲ್ಡ್ ಲಸಿಕೆಯನ್ನು ಕೇಂದ್ರ ಸರ್ಕಾರಕ್ಕೆ ಉಚಿತವಾಗಿ ನೀಡಲು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮುಂದಾಗಿದೆ ಎಂದು ಸರ್ಕಾರಿ ಮೂಲಗಳು ಬುಧವಾರ ತಿಳಿಸಿವೆ.

₹410 ಕೋಟಿ ಮೌಲ್ಯದ ಎರಡು ಕೋಟಿ ಲಸಿಕೆ ನೀಡುವ ಸಂಬಂಧ ಸೀರಂನ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿದ್ದಾರೆ. ಯಾವ ರೀತಿಯಲ್ಲಿ ಲಸಿಕೆಯನ್ನು ತಲುಪಿಸಬೇಕು ಎಂದೂ ಸಿಂಗ್ ಅವರು ಸರ್ಕಾರವನ್ನು ಕೇಳಿದ್ದಾರೆ ಎನ್ನಲಾಗಿದೆ.

ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಕ್ಕಾಗಿ ಸೀರಂ ಕಂಪನಿಯು ಕೇಂದ್ರ ಸರ್ಕಾರಕ್ಕೆ ಇಲ್ಲಿಯವರೆಗೂ 170 ಕೋಟಿಗೂ ಹೆಚ್ಚಿನ ಪ್ರಮಾಣದ ಲಸಿಕೆಯನ್ನು ನೀಡಿದೆ.

ಸುದ್ದಿ 2 ನಿಮಿಷ

ಮಾಜಿ ಸಚಿವ ಅನಿಲ್ ದೇಶಮುಖ್‌ಗೆ ಜಾಮೀನು: ಜೈಲಿನಿಂದ ಬಿಡುಗಡೆ

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿದ್ದ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರನ್ನು ಜಾಮೀನಿನ ಮೇಲೆ ಬುಧವಾರ ಸಂಜೆ ಇಲ್ಲಿನ ಆರ್ಥರ್ ರೋಡ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಅಜಿತ್ ಪವಾರ್ ಸೇರಿದಂತೆ ಎನ್‌ಸಿಪಿಯ ಹಿರಿಯ ನಾಯಕರು ಅವರನ್ನು ಜೈಲಿನ ಹೊರಗೆ ಬರಮಾಡಿಕೊಂಡರು.

ನಂತರ ಪ್ರತಿಕ್ರಿಯಿಸಿದ ದೇಶಮುಖ್, 'ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ... ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿತ್ತು ಎನ್ನುವುದು ಹೈಕೋರ್ಟ್ ಗಮನಕ್ಕೆ ಬಂದಿದೆ' ಎಂದರು.

2021ರ ನವೆಂಬರ್‌ನಿಂದ ದೇಶಮುಖ್ ಜೈಲಿನಲ್ಲಿದ್ದರು.

ಮಹಾರಾಷ್ಟ್ರ: ಲೋಕಾಯುಕ್ತ ಮಸೂದೆ ಅಂಗೀಕಾರ

ನಾಗ್ಪುರ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯು ಲೋಕಾಯುಕ್ತ ಮಸೂದೆ 2022 ಅನ್ನು ಬುಧವಾರ ಅಂಗೀಕರಿಸಿತು. ಈ ಮಸೂದೆಯ ಮೂಲಕ ಮುಖ್ಯಮಂತ್ರಿ ಹಾಗೂ ಸಂಪುಟ ಸಚಿವರನ್ನು ಭ್ರಷ್ಟಾಚಾರ ತಡೆ ಒಂಬುಡ್ಸ್‌ಮನ್ ವ್ಯಾಪ್ತಿಯೊಳಗೆ ತರಲಾಗಿದೆ.

ಶಿಕ್ಷಕ ಪ್ರವೇಶ ಪರೀಕ್ಷೆ ಹಗರಣ ಸಂಬಂಧ ವಿರೋಧ ಪಕ್ಷಗಳು ಸದನದಿಂದ ಹೊರನಡೆದಿದ್ದರಿಂದ ಚರ್ಚೆ ನಡೆಸದೆಯೇ ಮಸೂದೆಯನ್ನು ಅಂಗೀಕರಿಸಲಾಯಿತು. ಮುಖ್ಯಮಂತ್ರಿ ವಿರುದ್ಧ ಭ್ರಷ್ಟಾಚಾರ ಪ್ರಕರಣದ ತನಿಖೆ ನಡೆಸಬೇಕು ಎಂದಾದರೆ, ಅಧಿವೇಶನದಲ್ಲಿ ಮುಖ್ಯಮಂತ್ರಿ ವಿರುದ್ಧ ಆರೋಪಗಳನ್ನು ಮಂಡಿಸಬೇಕಾಗುತ್ತದೆ. ಮೂರನೇ ಒಂದು ಭಾಗದಷ್ಟು ಶಾಸಕರು ಒಪ್ಪಿಗೆ ನೀಡಿದರೆ ಮಾತ್ರವೇ ಮುಖ್ಯಮಂತ್ರಿ ವಿರುದ್ಧ ತನಿಖೆ ನಡೆಸಬಹುದಾಗಿದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ.

'ಇದೊಂದು ಐತಿಹಾಸಿಕ ಮಸೂದೆಯಾಗಿದೆ. ಇಂಥ ಕಾನೂನು ತರುತ್ತಿರುವ ಮೊದಲ ರಾಜ್ಯ ನಮ್ಮದು' ಎಂದು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದರು.

ಮೋದಿ ತಾಯಿ ಆಸ್ಪತ್ರೆಗೆ ದಾಖಲು

ಹೀರಾಬೆನ್

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಹೀರಾಬೆನ್ (99) ಅವರು ಅನಾರೋಗ್ಯದಿಂದಾಗಿ ಇಲ್ಲಿನ ಯು.ಎನ್.ಮೆಹ್ತಾ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಆ್ಯಂಡ್ ರಿಸರ್ಚ್ ಸೆಂಟರ್ ಆಸ್ಪತ್ರೆಗೆ ಬುಧವಾರ ದಾಖಲಾಗಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ಆಡಳಿತ ತಿಳಿಸಿದೆ.

ವಿಷಯ ತಿಳಿದು ದೆಹಲಿಯಿಂದ ಅಹಮದಾಬಾದ್‌ಗೆ ಪ್ರಯಾಣ ಬೆಳೆಸಿದ್ದ ಮೋದಿ ಅವರು ಮಧ್ಯಾಹ್ನ ಆಸ್ಪತ್ರೆಗೆ ಭೇಟಿ ನೀಡಿದ್ದರು. ಸುಮಾರು ಒಂದೂವರೆ ಗಂಟೆ ಅಲ್ಲೇ ಇದ್ದರು. ಅಮ್ಮನ ಆರೋಗ್ಯದ ಕುರಿತು ವೈದ್ಯರಿಂದ ಮಾಹಿತಿ ಪಡೆದುಕೊಂಡರು.

'ಹೀರಾಬೆನ್ ಅವರ ಆರೋಗ್ಯ ಸ್ಥಿರವಾಗಿದೆ. ಇನ್ನೆರಡು ದಿನಗಳಲ್ಲಿ ಅವರು ಆಸ್ಪತ್ರೆಯಿಂದ ಬಿಡುಗಡೆಯಾಗುವ ನಿರೀಕ್ಷೆ ಇದೆ' ಎಂದು ಬಿಜೆಪಿ ಸಂಸದ ಜುಗಲ್‌ಜೀ ಠಾಕೂರ್ ಹೇಳಿದ್ದಾರೆ.

ಹೀರಾಬೆನ್ ಅವರು ಕಿರಿಯ ಮಗ ಪಂಕಜ್ ಮೋದಿ ಜೊತೆ ಗಾಂಧಿನಗರ ಬಳಿಯ ರಾಯ್‌ಸೆನ್ ಗ್ರಾಮದಲ್ಲಿ ನೆಲೆಸಿದ್ದಾರೆ.

ಅಹಮದಾಬಾದ್‌ಗೆ ಪ್ರಹ್ಲಾದ ಮೋದಿ ಕುಟುಂಬ

ಪ್ರಜಾವಾಣಿ ವಾರ್ತೆ

ಮೈಸೂರು: ಕಾರು ಅಪಘಾತದಲ್ಲಿ ಗಾಯಗೊಂಡು ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡ ಪ್ರಹ್ಲಾದ ಮೋದಿ ಹಾಗೂ ಕುಟುಂಬದ ಸದಸ್ಯರು ಬುಧವಾರ ಆಸ್ಪತ್ರೆಯಿಂದ ಬಿಡುಗಡೆಗೊಂಡು, ಅಹಮದಾಬಾದ್‌ಗೆ ಪ್ರಯಾಣ ಬೆಳೆಸಿದರು.

ಪ್ರಧಾನಿ ನರೇಂದ್ರ ಮೋದಿ ತಾಯಿ ಹೀರಾಬೆನ್ ಆರೋಗ್ಯದ ಏರುಪೇರಿನಿಂದ ಆಸ್ಪತ್ರೆಗೆ ದಾಖಲಾದ ಕಾರಣ ಅವರನ್ನು ನೋಡಲು, ವಿಶೇಷ ವಿಮಾನದ ಮೂಲಕ ಕಿರಿಯ ಸಹೋದರ ಪ್ರಹ್ಲಾದ್ ಕುಟಂಬವು ತೆರಳಿತು. ಅದಕ್ಕೂ ಮೊದಲು ತಾಯಿ ಹೀರಾಬೆನ್ ಗುಣಮುಖರಾಗಲೆಂದು ಪ್ರಹ್ಲಾದ ಮೋದಿ ಅವರ ಮಗಳು ಹಾಗೂ ಅಳಿಯ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

'ರಾಹುಲ್ ಭದ್ರತೆಯಲ್ಲಿ ಲೋಪ'

ಭಾರತ್ ಜೋಡೊ ಯಾತ್ರೆ: ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಕಾಂಗ್ರೆಸ್ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತ್ ಜೋಡೊ ಯಾತ್ರೆಯು ದೆಹಲಿಯಲ್ಲಿ ಸಾಗುವಾಗ ರಾಹುಲ್ ಗಾಂಧಿ ಅವರ ಭದ್ರತೆಯಲ್ಲಿ ಹಲವು ಬಾರಿ ಲೋಪವಾಗಿದೆ. ರಾಹುಲ್ ಅವರಿಗೆ ಭದ್ರತೆ ಒದಗಿಸುವಲ್ಲಿ ದೆಹಲಿ ಪೊಲೀಸರು ವಿಫಲವಾಗಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪತ್ರ ಬರೆದಿದ್ದಾರೆ. ಅಗತ್ಯ ಭದ್ರತೆಯನ್ನು ಒದಗಿಸಿ ಎಂದು ಶಾ ಅವರನ್ನು ವೇಣುಗೋಪಾಲ್ ಆಗ್ರಹಿಸಿದ್ದಾರೆ.

ದೆಹಲಿ ಪೊಲೀಸ್ ಇಲಾಖೆಯು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಬರುತ್ತದೆ. ಹೀಗಾಗಿ ಕಾಂಗ್ರೆಸ್, ಅಮಿತ್ ಶಾ ಅವರಿಗೆ ಪತ್ರ ಬರೆದಿದೆ. ಯಾತ್ರೆ ಸಾಗಿ ಹೋಗಲಿರುವ ಇತರ ರಾಜ್ಯಗಳಲ್ಲೂ ಭದ್ರತೆ ಖಚಿತಪಡಿಸುವಂತೆ ಕಾಂಗ್ರೆಸ್ ಆಗ್ರಹಿಸಿದೆ.

ರಾಹುಲ್ ಗಾಂಧಿ ಅವರಿಗೆ ಝಡ್‌ಪ್ಲಸ್ ಶ್ರೇಣಿಯ ಭದ್ರತೆ ಇದೆ. ದೇಶದುದ್ದಕ್ಕೂ ಸಾಗಿಬಂದಿರುವ ಭಾರತ್ ಜೋಡೊ ಯಾತ್ರೆಯ ವೇಳೆ ಅವರ ಸುತ್ತ ಭದ್ರತಾ ಸಿಬ್ಬಂದಿಯ ಪರಿಧಿ ಇರುತ್ತಿತ್ತು. ಪರಿಶೀಲನೆಯ ನಂತರವೇ ರಾಹುಲ್ ಅವರ ಬಳಿಗೆ ಸಾರ್ವಜನಿಕರನ್ನು ಬಿಡಲಾಗುತ್ತಿತ್ತು. ಆದರೆ, ದೆಹಲಿಯಲ್ಲಿ ರಾಹುಲ್ ಅವರ ಸುತ್ತ ಈ ರೀತಿಯ ಭದ್ರತಾ ಪರಿಧಿ ಇಲ್ಲದಿರುವ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಜನರು ರಾಹುಲ್ ಅವರ ಸುತ್ತ ಕಿಕ್ಕಿರಿದು ಸುತ್ತುವರಿದಿರುವ, ಜನರನ್ನು ನಿಯಂತ್ರಿಸಲು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಯಾತ್ರಾರ್ಥಿಗಳು ಹರಸಾಹಸ ಪಡುತ್ತಿರುವ ದೃಶ್ಯಗಳು ಈ ವಿಡಿಯೊದಲ್ಲಿ ಇವೆ.

ಈ ಬಗ್ಗೆ ವೇಣುಗೋಪಾಲ್ ಅವರು ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ. 'ಯಾತ್ರೆಯು ದೆಹಲಿಯನ್ನು ಪ್ರವೇಶಿಸಿದ ನಂತರ ಇಂತಹ ಸಮಸ್ಯೆ ತಲೆದೋರಿದೆ. ಡಿಸೆಂಬರ್ 24ರ ಯಾತ್ರೆಯ ವೇಳೆ ಹಲವು ಬಾರಿ ಭದ್ರತಾ ಲೋಪವಾಗಿದೆ. ದೆಹಲಿ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳದೆ ನಿಂತಿದ್ದರು. ರಾಹುಲ್ ಅವರಿಗೆ ಭದ್ರತೆ ನೀಡುವಲ್ಲಿ ಪೊಲೀಸರು ಸಂಪೂರ್ಣವಾಗಿ ವಿಫಲರಾಗಿದ್ದಾರೆ' ಎಂದು ಅವರು ತಮ್ಮ ಪತ್ರದಲ್ಲಿ ಆರೋಪಿಸಿದ್ದಾರೆ.

'ದೇಶದ ಏಕತೆಗಾಗಿ ಕಾಂಗ್ರೆಸ್ ಪಕ್ಷವು ಈಗಾಗಲೇ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಸೇರಿ ಇಬ್ಬರು ಪ್ರಧಾನಿಗಳನ್ನು ಕಳೆದುಕೊಂಡಿದೆ. 2013ರಲ್ಲಿ ಛತ್ತೀಸಗಡ ಕಾಂಗ್ರೆಸ್‌ನ ಎಲ್ಲಾ ನಾಯಕರೂ ನಕ್ಸಲರ ದಾಳಿಗೆ ಬಲಿಯಾಗಿದ್ದರು. ಭಾರತ್ ಜೋಡೊ ಯಾತ್ರೆಯು ಸೂಕ್ಷ್ಮ ರಾಜ್ಯಗಳಾದ ಹರಿಯಾಣ ಮತ್ತು ಪಂಜಾಬ್ ಅನ್ನು ಪ್ರವೇಶಿಸಲಿದೆ. ಅಲ್ಲಿ ರಾಹುಲ್ ಗಾಂಧಿ ಮತ್ತು ಇತರ ಯಾತ್ರಿಗಳಿಗೆ ಅಗತ್ಯ ಭದ್ರತೆ ಒದಗಿಸಿ' ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಯಾತ್ರಿಗಳಿಗೆ ಕಿರುಕುಳ: ವೇಣುಗೋಪಾಲ್

ಭಾರತ್ ಜೋಡೊ ಯಾತ್ರೆಯಲ್ಲಿ ಭಾಗಿಯಾದವರನ್ನು ಹರಿಯಾಣ ಗುಪ್ತಚರ ಇಲಾಖೆಯ ಕೆಲವು ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಯಾತ್ರಿಗಳಿಗೆ ಕಿರುಕುಳ ನೀಡುವ ಮೂಲಕ ಗಣ್ಯ ವ್ಯಕ್ತಿಗಳು ಯಾತ್ರೆಯಲ್ಲಿ ಭಾಗಿಯಾಗುವುದನ್ನು ತಡೆಯಲು ಹೀಗೆ ಮಾಡಲಾಗುತ್ತಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ. ಶಾ ಅವರಿಗೆ ವೇಣುಗೋಪಾಲ್ ಅವರು ಬರೆದಿರುವ ಪತ್ರದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ.

'ಹರಿಯಾಣದ ಸೊಹ್ನಾ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡಿ. 23ರಂದು ಭಾರತ್ ಜೋಡೊ ಯಾತ್ರಿಗಳು ತಂಗಿದ್ದರು. ಈ ವೇಳೆಯಾತ್ರಿಗಳಿದ್ದ ಕಂಟೇನರ್‌ಗಳಿಗೆ, ರಾಜ್ಯ ಗುಪ್ತಚರ ಇಲಾಖೆಯ ಹಲವು ಅಧಿಕಾರಿಗಳು ಅಕ್ರಮವಾಗಿ ನುಗ್ಗಿ ವಿಚಾರಣೆ ನಡೆಸಿದ್ದಾರೆ. ದೇಶದ ಪ್ರತಿ ಪ್ರಜೆಯೂ, ದೇಶದ ಎಲ್ಲಾ ಜಾಗದಲ್ಲಿ ಮುಕ್ತವಾಗಿ ಓಡಾಡಲು ಸಂವಿಧಾನದ 19ನೇ ವಿಧಿಯು ಅವಕಾಶ ನೀಡಿದೆ. ದೇಶದಲ್ಲಿ ಶಾಂತಿ ಮತ್ತು ಸಹಬಾಳ್ವೆ ಸಾರಲು ಈ ಪಾದಯಾತ್ರೆ ನಡೆಸಲಾಗುತ್ತಿದೆ. ಸರ್ಕಾರ ಇದರಲ್ಲಿ ರಾಜಕಾರಣ ಮಾಡಬಾರದು' ಎಂದು ಆಗ್ರಹಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಕೊಲ್ಹಾಪುರಿ ಕಾಲ್ಮರಿ ಕತಿ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪಿಜಿ–ಸಿಯುಇಟಿ ಪರೀಕ್ಷೆ ಜೂ. 1ರಿಂದ

ನವದೆಹಲಿ (ಪಿಟಿಐ): ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ (ಸಿಯುಇಟಿ–ಪಿಜಿ) ವೇಳಾಪಟ್ಟಿಯನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಬುಧವಾರ ಪ್ರಕಟಿಸಿದ್ದು, 2023ರ ಜೂನ್ 1ರಿಂದ 10ರವರೆಗೆ ಪರೀಕ್ಷೆಗಳು ನಡೆಯಲಿವೆ.

ಅರ್ಜಿ ಸಲ್ಲಿಸುವ ಪ್ರಕ್ರಿಯೆ 2023ರ ಮಾರ್ಚ್ ಮಧ್ಯದಲ್ಲಿ ಪ್ರಾರಂಭವಾಗಲಿದೆ. ಒಂದಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಸಿಯುಇಟಿ–ಪಿಜಿ ಅತ್ಯುತ್ತಮ ಅವಕಾಶ ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ಹೇಳಿದ್ದಾರೆ.

ಚಲಿಸುತ್ತಿದ್ದ ಕಾರಿನಲ್ಲೇ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ಲಖನೌ: ಉತ್ತರ ಪ್ರದೇಶದಲ್ಲಿ ಚಲಿಸುತ್ತಿದ್ದ ಕಾರಿನಲ್ಲೇ ಮಹಿಳೆಯೊಬ್ಬರ ಮೇಲೆ ಮೂವರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಪ್ರಯಾಗ್‌ರಾಜ್‌ನಲ್ಲಿ ಓದುತ್ತಿರುವ ಮಹಿಳೆಯು ಯಾವುದೋ ಕೆಲಸದ ನಿಮಿತ್ತ ನೊಯಿಡಾಗೆ ಹೋಗಿದ್ದರು. ಕೆಲಸ ಮುಗಿದ ಬಳಿಕ ನೊಯಿಡಾದ ಸೆಕ್ಟರ್ 37ರಿಂದ ಉತ್ತರ ಪ್ರದೇಶದ ಔರೈಯದಲ್ಲಿರುವ ತನ್ನ ಮನೆಗೆ ಮಂಗಳವಾರ ರಾತ್ರಿ ಕಾರೊಂದರಲ್ಲಿ ತೆರಳುತ್ತಿದ್ದಾಗ ಚಾಲಕ ಹಾಗೂ ಆತನ ಪರಿಚಿತರು ಯಮುನಾ ಎಕ್ಸ್‌ಪ್ರೆಸ್ ವೇನಲ್ಲಿ ಅತ್ಯಾಚಾರ ನಡೆಸಿದ್ದಾರೆ. ಸದ್ಯ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಅವರು ಹೇಳಿದರು.

'ಕಾರಿನಲ್ಲಿದ್ದ ಇತರೆ ಪ್ರಯಾಣಿಕರು ಆಗ್ರಾ ಬಳಿಯಿರುವ ಕುಬೇರ್‌ಪುರದಲ್ಲಿ ಇಳಿದುಕೊಂಡ ಬಳಿಕ, ಔರೈಯಗೆ ಸಮೀಪದಲ್ಲಿರುವ ಫಿರೋಜಾಬಾದ್‌ಗೆ ತನ್ನನ್ನು ಕರೆದೊಯ್ಯುವುದಾಗಿ ಚಾಲಕ ಹೇಳಿದ್ದರಿಂದ ಸಂತ್ರಸ್ತೆಯು ಕಾರಿನಲ್ಲೇ ಉಳಿದಿದುಕೊಂಡಿದ್ದರು. ಕುಬೇರ್‌ಪುರದಿಂದ ಸ್ವಲ್ಪ ದೂರ ಹೋದ ಬಳಿಕ ಚಾಲಕನಿಗೆ ಪರಿಚಿತರಿರುವ ಇಬ್ಬರು ವ್ಯಕ್ತಿಗಳಿಗೆ ಕಾರಿನಲ್ಲಿ ಹತ್ತಿಕೊಂಡಿದ್ದಾರೆ. ಬಳಿಕ ಈ ಘಟನೆ ನಡೆದಿರುವುದಾಗಿ ಸಂತ್ರಸ್ತೆಯು ದೂರಿನಲ್ಲಿ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಅತ್ಯಾಚಾರದ ಬಳಿಕ ಆರೋಪಿಗಳು ಸಂತ್ರಸ್ತೆಯನ್ನು ಆಗ್ರಾ ಬಳಿಯ ಎತ್ಮಾದಪುರದಲ್ಲಿ ಬಿಟ್ಟು ಹೋಗಿದ್ದರು. ಸಂತ್ರಸ್ತೆಯು ಅಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ದೂರು ಸ್ವೀಕರಿಸಿದ ಪೊಲೀಸರು ಚುರುಕಿನ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿದಿದ್ದಾರೆ.

ಕಾಂಗ್ರೆಸ್ ಪಕ್ಷದ 138ನೇ ಸಂಸ್ಥಾಪನಾ ದಿನ • ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಕಿಡಿ

ದೇಶದ ಮೂಲಚೈತನ್ಯಕ್ಕೆ ನಿರಂತರ ಪೆಟ್ಟು: ಖರ್ಗೆ

ಪ್ರಜಾವಾಣಿ ವಾರ್ತೆ

ದೆಹಲಿಯಲ್ಲಿ ಬುಧವಾರ ನಡೆದ ಕಾಂಗ್ರೆಸ್ ಪಕ್ಷದ 138ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಸೋನಿಯಾ ಗಾಂಧಿ, ಜೆ.ಪಿ. ಅಗರ್ವಾಲ್, ರಾಹುಲ್ ಗಾಂಧಿ, ಮಣಿಶಂಕರ್ ಅಯ್ಯರ್ ಅವರು ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ನವದೆಹಲಿ: ದೇಶದ ಮೂಲಚೈತನ್ಯದ ಮೇಲೆ ನಿರಂತರವಾದ ದಾಳಿ ನಡೆಯುತ್ತಿದ್ದು, ಸಮಾಜವನ್ನು ದ್ವೇಷದ ಮೂಲಕ ಒಡೆಯಲಾಗುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಆರೋಪಿಸಿದ್ದಾರೆ.

ಪಕ್ಷದ 138ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡವರು, ವಂಚಿತರು ಹಾಗೂ ತುಳಿತಕ್ಕೊಳಗಾದ ಸಮುದಾಯಗಳಿಗೆ ಇದ್ದ ಸವಾಲುಗಳನ್ನು ನಿವಾರಿಸಲು ಕಾಂಗ್ರೆಸ್ ಧೈರ್ಯ ತೋರಿದ್ದರಿಂದ ಸ್ವತಂತ್ರ ಭಾರತ ಮುನ್ನಡೆಯಿತು ಎಂದರು.

'ಭಾರತ ಸ್ವಾತಂತ್ರ್ಯ ಪಡೆದ ಸಮಯದಲ್ಲಿ ಹಲವು ದೇಶಗಳು ಸ್ವತಂತ್ರಗೊಂಡರೂ, ನಂತರದ ದಿನಗಳಲ್ಲಿ ಅವು ನಿರಂಕುಶಾಧಿಕಾರಕ್ಕೆ ಒಳಪಟ್ಟವು. ಆದರೆ, ಭಾರತವು ಯಶಸ್ವಿ ಹಾಗೂ ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಬೆಳೆಯಿತು. ಅಲ್ಲಿಂದ ಕೆಲವು ದಶಕಗಳ ಅವಧಿಯಲ್ಲಿ ಆರ್ಥಿಕ ಕ್ಷೇತ್ರ, ಕ್ಷಿಪಣಿ, ಪರಮಾಣು ಕ್ಷೇತ್ರಗಳಲ್ಲಿ ಸೂಪರ್‌ಪವರ್ ಆಗಿ ಬೆಳೆಯಿತು' ಎಂದು ಖರ್ಗೆ ನೆನಪಿಸಿಕೊಂಡರು.

'ಭಾರತವು ಕೃಷಿ, ಶಿಕ್ಷಣ, ವೈದ್ಯಕೀಯ, ಮಾಹಿತಿ ತಂತ್ರಜ್ಞಾನದಲ್ಲಿ ಮುಂದುವರಿದ ರಾಷ್ಟ್ರಗಳ ಸಾಲಿಗೆ ಸೇರಿತು. ಇವೆಲ್ಲ ತಂತಾನೇ ಆಗಿದ್ದಲ್ಲ, ಪ್ರಜಾಪ್ರಭುತ್ವದಲ್ಲಿ ಪಕ್ಷವು ನಂಬಿಕೆ ಇಟ್ಟಿದ್ದರಿಂದ ಸಾಧ್ಯವಾಯಿತು. ಸರ್ಕಾರದ ಕಾರ್ಯಕ್ರಮಗಳೇ ಪಕ್ಷದ ಜನಪರ ನಿಲುವನ್ನು ಹೇಳುತ್ತವೆ' ಎಂದು ಹೇಳಿದರು.

ಕಾಂಗ್ರೆಸ್ ಈಗಲೂ ಪ್ರಸ್ತುತ: ಎಂ.ಕೆ.ಸ್ಟಾಲಿನ್

ಚೆನ್ನೈ ವರದಿ: ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ತನ್ನ ಮಹತ್ವವನ್ನು ಕಳೆದುಕೊಂಡಿದೆ ಅಥವಾ ಅಪ್ರಸ್ತುತವಾಗಿದೆ ಎಂಬುದನ್ನು ನಾನು ಒಪ್ಪುವುದಿಲ್ಲ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಹೇಳಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಬೇಕಾದರೆ, ರಾಷ್ಟ್ರಮಟ್ಟದ ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಕಾಂಗ್ರೆಸ್ ಇರಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ 138ನೇ ಸಂಸ್ಥಾಪನಾ ದಿನದ ಸಮಯದಲ್ಲಿ ಸ್ಟಾಲಿನ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಕಾಂಗ್ರೆಸ್ ಪಕ್ಷವು ಪುನರುಜ್ಜೀವನಗೊಳ್ಳುವ ಪಥದಲ್ಲಿದೆ. ಭಾರತಕ್ಕೆ ಇದು ಈಗ ಅಗತ್ಯವಿತ್ತು. ಬಿಜೆಪಿಯ ಸಂಕುಚಿತ ರಾಜಕಾರಣಕ್ಕೆ ರಾಹುಲ್ ಗಾಂಧಿ ಅವರೇ ಮದ್ದು' ಎಂದು ಸ್ಟಾಲಿನ್ ಅಭಿಪ್ರಾಯಪಟ್ಟಿದ್ದಾರೆ. ರಾಹುಲ್ ಅವರನ್ನು ಸಹೋದರ ಎಂದು ಕರೆದಿರುವ ಸ್ಟಾಲಿನ್, ಬಿಜೆಪಿ ವಿರುದ್ಧ ಅವರು ನಡೆಸುತ್ತಿರುವ ಹೋರಾಟ ಕೇವಲ ಚುನಾವಣಾ ದೃಷ್ಟಿಯಿಂದ ಕೂಡಿಲ್ಲ. ಅದು ಸೈದ್ಧಾಂತಿಕ ರೂಪದ್ದು ಎಂದೂ ಹೇಳಿದ್ದಾರೆ.

'ಬಿಜೆಪಿ ವಾಷಿಂಗ್ ಮಷಿನ್‌ನಲ್ಲಿ ಶುಚಿಯಾಗುವ ಕಳಂಕಿತರು'

'ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ದೊಡ್ಡ ವಾಷಿಂಗ್ ಮಷಿನ್ ಖರೀದಿಸಿದ್ದಾರೆ. ಕಳಂಕಿತ ವ್ಯಕ್ತಿಗಳು ಅದರಲ್ಲಿ ಶುಚಿಯಾಗುತ್ತಾರೆ' ಎಂದು ಮಲ್ಲಿಕಾರ್ಜುನ ಖರ್ಗೆ ವ್ಯಂಗ್ಯ ಮಾಡಿದ್ದಾರೆ. 'ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಪಕ್ಷದ ಶಾಸಕರನ್ನು ಸೆಳೆದು, ಬಿಜೆಪಿ ಹಾಗೂ ಶಿಂದೆ ನೇತೃತ್ವದ ಶಿವಸೇನಾ ಸರ್ಕಾರ ರಚನೆ ಮಾಡಲಾಯಿತು. ಅಲ್ಲಿವರೆಗೂ ಕಳಂಕಿತರಾಗಿದ್ದವರು ಬಿಜೆಪಿ ಜೊತೆ ಕೈಜೋಡಿಸಿದ ಬಳಿಕ ಶುಭ್ರರೆನಿಸಿಕೊಂಡರು ಎಂದು ಖರ್ಗೆ ವಿವರಿಸಿದ್ದಾರೆ.

ಭರವಸೆ ನೀಡಿದ್ದ 18 ಕೋಟಿ ಉದ್ಯೋಗಗಳು ಎಲ್ಲಿ ಸೃಷ್ಟಿಯಾಗಿವೆ ಎಂದಿರುವ ಅವರು, 75 ಸಾವಿರ ಜನರಿಗೆ ನೇಮಕಾತಿ ಪತ್ರ ನೀಡಿದ ಮೋದಿ ಅವರ 'ಉದ್ಯೋಗ ಮೇಳ' ಕೇವಲ ಬೂಟಾಟಿಕೆ ಎಂದು ಲೇವಡಿ ಮಾಡಿದ್ದಾರೆ.

ಗಡಿ ವಿವಾದ: ಮಹಾರಾಷ್ಟ್ರ ಮುಖ್ಯಮಂತ್ರಿ ಶಿಂದೆ, ಉಪ ಮುಖ್ಯಮಂತ್ರಿ ಫಡಣವೀಸ್ ಹೇಳಿಕೆ

'ಮುಂಬೈ ಯಾರ ಅಪ್ಪನ ಸ್ವತ್ತಲ್ಲ; ಮಹಾರಾಷ್ಟ್ರಕ್ಕೆ ಸೇರಿದ್ದು'

ಪ್ರಜಾವಾಣಿ ವಾರ್ತೆ

ಮುಂಬೈ: 'ಮುಂಬೈ ಯಾರ ಅಪ್ಪನ ಸ್ವತ್ತೂ ಅಲ್ಲ; ಅದು ಮಹಾರಾಷ್ಟ್ರಕ್ಕೆ ಸೇರಿದ್ದು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಬುಧವಾರ ಹೇಳಿದ್ದಾರೆ.

ಮುಂಬೈಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸುವುದು ಸೂಕ್ತ ಎಂದು ಕರ್ನಾಟಕದ ಕೆಲ ರಾಜಕಾರಣಿಗಳು ಹೇಳಿಕೆ ನೀಡಿದ್ದರು. ಈ ಕುರಿತು ಮಹಾರಾಷ್ಟ್ರ ವಿಧಾನಸಭೆ ಅಧಿವೇಶನದಲ್ಲಿ ಪ್ರತಿಕ್ರಿಯೆ ನೀಡಿರುವ ಶಿಂದೆ, 'ಗಡಿ ಬಿಕ್ಕಟ್ಟು ಸುಮಾರು 66 ವರ್ಷಗಳಷ್ಟು ಹಳೆಯದು. ಶಿವಸೇನಾ ವರಿಷ್ಠರಾಗಿದ್ದ ಬಾಳಾಸಾಹೇಬ್ ಠಾಕ್ರೆ ಮತ್ತು ಆನಂದ್ ದಿಘೆ ಅವರ ಜೊತೆ ಕೆಲಸ ಮಾಡಿದ್ದೇನೆ. ಬಾಳಾಸಾಹೇಬ್ ಅವರ ಸೂಚನೆ ಮೇರೆಗೆ ನಾವು ಬೆಳಗಾವಿಗೆ ಹೋಗಿ ಪ್ರತಿಭಟನೆ ನಡೆಸಿದ್ದವು. ಆಗ ನಮ್ಮನ್ನು ಬಂಧಿಸಿ ಬಳ್ಳಾರಿ ಜೈಲಿನಲ್ಲಿ ಇರಿಸಲಾಗಿತ್ತು. ಪೊಲೀಸ್ ಪ್ರಕರಣಗಳಿಗೆಲ್ಲಾ ನಾವು ಹೆದರುವುದಿಲ್ಲ' ಎಂದಿದ್ದಾರೆ.

'66 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಹಲವು ವರ್ಷ ಆಡಳಿತ ನಡೆಸಿದೆ. ಎನ್‌ಸಿಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರವು 14 ವರ್ಷ ಅಧಿಕಾರದಲ್ಲಿತ್ತು. ಈ ಅವಧಿಯಲ್ಲಿ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ಕೇಂದ್ರದ ಜೊತೆ ಎಷ್ಟು ಬಾರಿ ಸಭೆ ನಡೆಸಿದ್ದಾರೆ. ನಾವು ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಈ ಸಮಸ್ಯೆ ಬಗೆಹರಿಸಬೇಕೆಂದರೆ ಹೇಗೆ' ಎಂದು ಪ್ರಶ್ನಿಸಿದ್ದಾರೆ.

ಮರಾಠಿ ಭಾಷಿಕರನ್ನು ಹೊಂದಿರುವ ಬೆಳಗಾವಿ, ಕಾರವಾರ, ನಿಪ್ಪಾಣಿ, ಬೀದರ್ ಮತ್ತು ಭಾಲ್ಕಿಯ 865 ಹಳ್ಳಿಗಳು ತನಗೆ ಸೇರಿದ್ದೆಂದು ಸರ್ಕಾರ ಪ್ರತಿಪಾದಿಸಿದ್ದು, ಈ ನಿಲುವಿಗೆ ಬದ್ಧವಾಗಿರಲಿದೆ ಎಂದು ಅವರು ಮತ್ತೊಮ್ಮೆ ಪುನರುಚ್ಚರಿಸಿದ್ದಾರೆ.

ಕಲಾಪದ ವೇಳೆ ಕರ್ನಾಟಕದ ರಾಜಕಾರಣಿಗಳ ಹೇಳಿಕೆಯನ್ನು ಪ್ರಸ್ತಾಪಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯ ಬಳಿಕವೂ ಕರ್ನಾಟಕದ ರಾಜಕಾರಣಿಗಳು ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಾರೆ. ಮುಖ್ಯಮಂತ್ರಿ ಶಿಂದೆ ಹಾಗೂ ಉಪ ಮುಖ್ಯಮಂತ್ರಿ ಫಡಣವೀಸ್ ಅವುಗಳತ್ತ ಗಮನ ಹರಿಸಬೇಕು' ಎಂದು ಒತ್ತಾಯಿಸಿದರು.

'ಕರ್ನಾಟಕದ ಮುಖ್ಯಮಂತ್ರಿ ಹಾಗೂ ಅಲ್ಲಿನ ಸಚಿವರು ತಮ್ಮ ಹೇಳಿಕೆಗಳ ಮೂಲಕ ಮಹಾರಾಷ್ಟ್ರದ ಘನತೆಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಆದರೆ ಮಹಾರಾಷ್ಟ್ರ ಸರ್ಕಾರ ಇದಕ್ಕೆ ದಿಟ್ಟ ಪ್ರತ್ಯುತ್ತರ ನೀಡುತ್ತಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಫಡಣವೀಸ್, 'ಮುಂಬೈ ತಮಗೆ ಸೇರಿದ್ದೆಂದು ಯಾರೇ ಹೇಳಿದರೂ ಅದನ್ನು ನಾವು ಸಹಿಸುವುದಿಲ್ಲ. ಈ ವಿಚಾರವಾಗಿ ಪ್ರತಿಭಟನೆ ವ್ಯಕ್ತಪಡಿಸಿ ಕರ್ನಾಟಕ ಸರ್ಕಾರಕ್ಕೆ ಪತ್ರ ರವಾನಿಸುತ್ತೇವೆ' ಎಂದಿದ್ದಾರೆ.

'ಕರ್ನಾಟಕದ ರಾಜಕಾರಣಿಗಳ ಹೇಳಿಕೆಗಳು ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆದಿದ್ದ ಸಭೆಯಲ್ಲಿ ಕೈಗೊಂಡಿದ್ದ ನಿಲುವುಗಳಿಗೆ ವಿರುದ್ಧವಾಗಿವೆ. ಅದನ್ನು ನಾವು ಖಂಡಿಸುತ್ತೇವೆ. ಅಮಿತ್ ಶಾ ಅವರಿಗೂ ಈ ಕುರಿತು ಮಾಹಿತಿ ನೀಡುತ್ತೇವೆ' ಎಂದಿದ್ದಾರೆ.

'ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಲಿ'

ನಾಗ್ಪುರ (ಪಿಟಿಐ): 'ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಣ ಗಡಿ ಬಿಕ್ಕಟ್ಟಿನ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು. ವಿವಾದಿತ ಪ್ರದೇಶಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಘೋಷಿಸಬೇಕು' ಎಂದು ಶಾಸಕ ಜಯಂತ್ ಪಾಟೀಲ್ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಬುಧವಾರ ಮಾತನಾಡಿದ ಅವರು, 'ಕೇಂದ್ರವು ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಿದೆ. ಅದೇ ರೀತಿ ಪ್ರಧಾನಿ ಮೋದಿ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿರುವ ವಿವಾದಿತ ಸ್ಥಳಗಳನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು. ಬಿಜೆಪಿ ನಾಯಕರು ಈ ಬೇಡಿಕೆಯನ್ನು ಕೇಂದ್ರದ ಎದುರು ಇಡಬೇಕು' ಎಂದು ಆಗ್ರಹಿಸಿದ್ದಾರೆ.

ನಾಲ್ವರು ಪಾಕ್ ಉಗ್ರರ ಹತ್ಯೆ

ಒಂದನೇ ಪುಟದಿಂದ...

ಜಮ್ಮುವಿನ ರಾಷ್ಟ್ರೀಯ ಹೆದ್ದಾರಿ– 44ರಲ್ಲಿ ಇಂತಹ ಘಟನೆ ನಡೆದಿರುವುದು ಇದೇ ಮೊದಲಲ್ಲ. 2020ರ ನವೆಂಬರ್ 19ರಂದು ಪಾಕಿಸ್ತಾನ ಮೂಲದ ಜೈಶ್-ಇ-ಮೊಹಮ್ಮದ್ (ಜೆಇಎಂ) ಸಂಘಟನೆಗೆ ಸೇರಿದ ನಾಲ್ವರು ಗಡಿಯಲ್ಲಿ ಒಳನುಸುಳಿ, ಜಮ್ಮು ನಗರದ ಹೊರವಲಯದ ಹೆದ್ದಾರಿಯಲ್ಲಿ ನಗರೋಟಾ ಬಳಿ ಭದ್ರತಾ ಪಡೆಗಳಿಂದ ಹತರಾಗಿದ್ದರು.

2020ರ ಜನವರಿ 31ರಂದು ಜೆಇಎಂನ ಮೂವರು ಪಾಕ್ ಉಗ್ರರು, ಶ್ರೀನಗರ ಕಡೆಗೆ ಟ್ರಕ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ನಗಾರೋಟಾ ಬಳಿ ಭದ್ರತಾ ಪಡೆಯೊಂದಿಗಿನ ಗುಂಡಿನ ಚಕಮಕಿಯಲ್ಲಿ ಸತ್ತಿದ್ದರು.

2016ರ ನವೆಂಬರ್‌ನಲ್ಲಿ ಪೊಲೀಸ್ ಸಮವಸ್ತ್ರದಲ್ಲಿ ನುಗ್ಗಿದ ಉಗ್ರರು ನಗಾರೋಟಾದ ಸೇನಾ ಕ್ಯಾಂಪ್ ಮೇಲೆ ಭೀಕರ ದಾಳಿ ನಡೆಸಿ, ಇಬ್ಬರು ಅಧಿಕಾರಿಗಳು ಸೇರಿ ಏಳು ಯೋಧರನ್ನು ಕೊಂದಿದ್ದರು. ಒಳನುಸುಳುವ ಪಾಕ್ ಉಗ್ರರು, ಭಯೋತ್ಪಾದನಾ ದಾಳಿಗೆ ಈ ಹೆದ್ದಾರಿಯಲ್ಲಿ ಟ್ರಕ್ ಬಳಸಿಕೊಳ್ಳುವುದು ಸಾಮಾನ್ಯವಾಗಿದೆ.

'ಭಯೋತ್ಪಾದನೆ ಕೊನೆಗೊಳಿಸಿ'

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಮತ್ತು ಪ್ರತ್ಯೇಕತಾವಾದಕ್ಕೆ ಸಹಕಾರ ನೀಡುವುದು ಕೊನೆಗೊಳ್ಳಬೇಕು. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುವಂತೆ ಗೃಹ ಸಚಿವ ಅಮಿತ್ ಶಾ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಗೃಹ ಸಚಿವಾಲಯದ ಕಚೇರಿಯಲ್ಲಿ ಬುಧವಾರ ಜಮ್ಮು ಮತ್ತು ಕಾಶ್ಮೀರ, ಲಡಾಕ್, ಲೇಹ್‌ನಲ್ಲಿನ ಭದ್ರತೆ ಸಂಬಂಧಿತ ವಿಷಯ ಮತ್ತು ಅಭಿವೃದ್ಧಿ ಯೋಜನೆಗಳ ಕುರಿತು ಅವರು ಉನ್ನತ ಮಟ್ಟದ ಸಭೆ ನಡೆಸಿದರು.

ಉಮ್ಮನ್ ಚಾಂಡಿ ಆರೋಪಮುಕ್ತ

ತಿರುವನಂತಪುರ: ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರನ್ನು ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಸಿಬಿಐ ಆರೋಪಮುಕ್ತಗೊಳಿಸಿದೆ.

'ದೌರ್ಜನ್ಯ ನಡೆದ ಬಗ್ಗೆ ಯಾವುದೇ ಸಾಕ್ಷ್ಯಾಧಾರ ಇಲ್ಲ' ಎಂದು ಸಿಬಿಐ ಹೇಳಿದೆ. ಇದೇ ರೀತಿಯ ಪ್ರಕರಣವೊಂದರಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಸಿಬಿಐ ಇತ್ತೀಚೆಗೆ ಆರೋಪಮುಕ್ತಗೊಳಿಸಿತ್ತು. 2011–2016ರ ಅವಧಿ ಯಲ್ಲಿ ರಾಜ್ಯದಲ್ಲಿ ನಡೆದಿದ್ದ ಸೋಲಾರ್ ಹಗರಣ ಸಂಬಂಧ, ಚಾಂಡಿ ವಿರುದ್ಧ ದೂರು ನೀಡಿದ್ದ ಮಹಿಳೆಯ ಮೇಲೆ ಸರಣಿ ವಂಚನೆ ಪ್ರಕರಣಗಳಿವೆ. ಈ ಅವಧಿಯಲ್ಲಿ ಚಾಂಡಿ ಅವರು ಕೇರಳದ ಮುಖ್ಯಮಂತ್ರಿಯಾಗಿದ್ದರು.

'ದೌರ್ಜನ್ಯ ನಡೆದಿದೆ ಎನ್ನಲಾದ ದಿನ ಚಾಂಡಿ ಅವರು ತಮ್ಮ ನಿವಾಸದಲ್ಲಿ ಇರಲೇ ಇಲ್ಲ. ಜೊತೆಗೆ ಮಹಿಳೆಯ ಹೇಳಿಕೆಗಳಲ್ಲಿ ವಿರೋಧಾಭಾಸಗಳಿವೆ ಎಂದು ಸಿಬಿಐ ತನ್ನ ವರದಿಯಲ್ಲಿ ಹೇಳಿದೆ' ಎಂದು ಮೂಲಗಳು ತಿಳಿಸಿವೆ.

ಬಸವನಗುಡಿ ಪೊಲೀಸ್ ಠಾಣಾ ವ್ಯಾಪ್ತಿ: ಮನೆಯ ಕೆಲಸಕ್ಕಿದ್ದ ಮಾಲೀಕರ ಮನೆಯಲ್ಲೇ ಚಿನ್ನಾಭರಣ ಕಳವು

ಅಟ್ಟಿಕಾ ಗೋಲ್ಡ್ ಕಂಪನಿ ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಸವನಗುಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೆಲಸಕ್ಕಿದ್ದ ಮನೆಯಿಂದಲೇ ಚಿನ್ನಾಭರಣ ಕಳವು ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಹಾಗೂ ಆರೋಪಿಯಿಂದ ಚಿನ್ನಾಭರಣ ಖರೀದಿಸಿದ್ದ ಅಟ್ಟಿಕಾ ಗೋಲ್ಡ್ ಕಂಪನಿಯ ವ್ಯವಸ್ಥಾಪಕ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಗ್ರಾಮದ ನಿವಾಸಿ ಜೆ.ಮನೋಜ್ (26) ಹಾಗೂ ಆರೋಪಿಯಿಂದ ಚಿನ್ನಾಭರಣ ಖರೀದಿಸಿದ್ದ ತಿಲಕ್‌ನಗರ ಬಿಟಿಟಿ ಪ್ರದೇಶದ ನಿವಾಸಿ ಶಿವು (39) ಬಂಧಿತರು.

'ಬಂಧಿತರಿಂದ ₹ 25 ಲಕ್ಷ ಮೌಲ್ಯದ 503 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯು ಒಂದು ವರ್ಷದಿಂದ ಮನೆಗೆಲಸ ಮಾಡಿಕೊಂಡಿದ್ದ. ಆ ಸಂದರ್ಭದಲ್ಲಿ ಮಾಲೀಕರ ವಿಶ್ವಾಸ ಸಹ ಗಳಿಸಿದ್ದ. ಮಾಲೀಕರು ಕುಟುಂಬಸ್ಥರ ಜೊತೆಗೆ ಕೆಲಸದ ನಿಮಿತ್ತ ಹೊರಗಡೆ ತೆರಳಿದಾಗ ಆರೋಪಿಗೆ ಮನೆಯ ಜವಾಬ್ದಾರಿ ವಹಿಸಿದ್ದರು. ಆಗ ಮನೆಯಲ್ಲಿದ್ದ ಚಿನ್ನಾಭರಣ ಕಳವು ಮಾಡಿ ಅಟ್ಟಿಕಾ ಗೋಲ್ಡ್ ಕಂಪನಿಯ ಶಿವು ಅವರ ನೆರವಿನಿಂದ ಮಾರಾಟ ಮಾಡಿದ್ದ. ಅದರಿಂದ ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದ. ಮನೆಯವರಿಗೆ ಅನುಮಾನ ಬಂದು ವಿಚಾರಣೆ ನಡೆಸುತ್ತಿದ್ದಂತೆಯೇ ಆರೋಪಿ ತಲೆಮರೆಸಿಕೊಂಡಿದ್ದ. ದೂರು ದಾಖಲಾದ ಮೇಲೆ ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು' ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ.ಕೃಷ್ಣಕಾಂತ್ ತಿಳಿಸಿದ್ದಾರೆ.

ಬಂಧಿತ ಆರೋಪಿಗಳ ಜತೆಗೆ ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡ

ಅಪರಾಧ ಸುದ್ದಿ

₹ 8 ಲಕ್ಷ ನಗದು ಜಪ್ತಿ: ಜೆ.ಜೆ. ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದ ಆರೋಪಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ನಯೀಂ ಷರೀಫ್ (26) ಬಂಧಿತ ವ್ಯಕ್ತಿ.ಬಂಧಿತನಿಂದ ಒಂದು ಜೊತೆ ಓಲೆ, ನಾಲ್ಕು ಚಿನ್ನದ ಉಂಗುರ, ಮೂರು ಬೆಳ್ಳಿಯ ಉಂಗುರ ಸೇರಿದಂತೆ ಒಟ್ಟು 80 ಗ್ರಾಂ ಚಿನ್ನಾಭರಣ ಹಾಗೂ ₹ 8 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

₹ 10 ಲಕ್ಷ ವಂಚನೆ: ವಿಮಾ ಕಂಪನಿ ವಿರುದ್ಧ ಎಫ್‌ಐಆರ್

ಬೆಂಗಳೂರು: ವೈಯಾಲಿಕಾವಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಸ್ತಿ ಖರೀದಿಗೆ ಸಾಲ ನೀಡುವುದಾಗಿ ಹೇಳಿ ವಿಮಾ ಕಂಪನಿಯೊಂದು ಮಹಿಳೆಯಿಂದ ₹ 10 ಲಕ್ಷ ಪಡೆದು ವಂಚಿಸಿದ್ದು, ಆ ಕಂಪನಿ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಸಹಕಾರ ನಗರದ ನಿವಾಸಿ ಶ್ರೀದೇವಿ ಎಂಬುವವರು ಆಸ್ತಿ ಖರೀದಿಗಾಗಿ ಸಾಲ ಪಡೆಯಲು ನಿರ್ಧರಿಸಿದ್ದರು. ಸಂಸ್ಥೆಯೊಂದು ನೀಡಿದ ಜಾಹೀರಾತು ಗಮನಿಸಿ, ವೈಯಾಲಿಕಾವಲ್ ಪೊಲೀಸ್ ಠಾಣಾ ವ್ಯಾಪ್ತಿಯ ವಿನಾಯಕ ವೃತ್ತದ ಬಳಿಯ ಫೈನಾನ್ಸ್‌ಗೆ ತೆರಳಿ ಸಾಲದ ಬಗ್ಗೆ ವಿಚಾರಿಸಿದ್ದರು. ಕಂಪನಿಯಲ್ಲಿದ್ದ ಸುಗುಣ ಎಂಬಾಕೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸ್ವಾಮಿನಾಥ್ ಸುಬ್ಬಯ್ಯಶೆಟ್ಟಿ, ಹಿರಿಯ ವ್ಯವಸ್ಥಾಪಕ ಲಕ್ಷ್ಮಿನಾರಾಯಣ್, ಮ್ಯಾನೇಜರ್ ವೆಂಕಟೇಶ್ ಅವರನ್ನು ಪರಿಚಯಿಸಿದ್ದರು. ಅದಾದ ಮೇಲೆ ಕಂಪನಿಯ ಷರತ್ತಿನ ಬಗ್ಗೆ ತಿಳಿಸಿ ಹಣ ಪಡೆದು ವಂಚಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶ್ರೀದೇವಿಗೆ ಆಸ್ತಿ ಖರೀದಿಗೆ ₹ 10 ಕೋಟಿಗೆ ಮನವಿ ಮಾಡಿದ್ದರು. ಸಾಲದ ಮೇಲಿನ ವಿಮೆ ಶುಲ್ಕವು ₹ 5 ಲಕ್ಷವಾಗಲಿದೆ ಎಂದು ಕಂಪನಿಯ ಸಿಬ್ಬಂದಿ ತಿಳಿಸಿದ್ದರು. ಸಾಲ ನೀಡಲು ಸಾಧ್ಯವಾಗದಿದ್ದರೆ ಬಡ್ಡಿ ಸಹಿತ ಹಣ ವಾಪಸ್ ನೀಡಲಾಗುವುದು ಎಂದು ಕಂಪನಿಯವರು ತಿಳಿಸಿದ್ದರು. ಅದನ್ನೇ ನಂಬಿದ್ದ ಶ್ರೀದೇವಿ, ಎರಡು ಪ್ರತ್ಯೇಕ ಅರ್ಜಿ ಪಡೆದುಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ವಿಮೆ ಶುಲ್ಕ, ಲೀಗಲ್ ಚಾರ್ಜ್, ಭೌತಿಕ ಪರಿಶೀಲನೆಗೆಂದು ₹ 10 ಲಕ್ಷವನ್ನು ಶ್ರೀದೇವಿ ಕಂಪನಿಗೆ ಪಾವತಿಸಿದ್ದರು. ಅದಾದ ಮೇಲೆ ಕಂಪನಿ ಸಿಬ್ಬಂದಿಯೂ ಸಾಲವನ್ನೂ ನೀಡಿಲ್ಲ. ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಮುನಿವೆಂಕಟಮ್ಮ, ರಾಜಶೇಖರ್, ತನುಜಾ, ಮರೀಗೌಡ, ರೋಹಿತ್, ಪ್ರವೀಣ್ ಅವರಿಗೂ ಇದೇ ವಿಮಾ ಕಂಪನಿ ಸಿಬ್ಬಂದಿ ವಂಚಿಸಿದ್ದಾರೆ' ಎಂದು ಮೂಲಗಳು ಹೇಳಿವೆ. ತನಿಖೆಗೆ ತಂಡ ರಚಿಸಲಾಗಿದೆ.

ಅಪಹರಣ-ಕೊಲೆ ಪ್ರಕರಣ: ಮತ್ತೆ ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತು ತಿಂಗಳ ಹಿಂದೆ ನಡೆದಿದ್ದ ಯುವಕನ ಅಪಹರಣ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಬ್ಬನ್ ಪಾರ್ಕ್ ಪೊಲೀಸರು ಮತ್ತೆ ಐವರು ಆರೋಪಿಗಳನ್ನು ಬುಧವಾರ ಬಂಧಿಸಿದ್ದಾರೆ.

ಉದಯ, ನವೀನ್, ಸಂಕೇತ್, ಭೋಗೇಶ್, ಗೋವಿಂದ್ ಬಂಧಿತರು.

ಇದೇ ಪ್ರಕರಣ ಸಂಬಂಧ ಮಂಗಳವಾರ ಕರ್ನಾಟಕ ರಕ್ಷಣಾ ವೇದಿಕೆ (ಕನ್ನಡಪರ ಸಂಘಟನೆಗಳ ಒಕ್ಕೂಟ) ರಾಜ್ಯ ಅಧ್ಯಕ್ಷ, ಚಿಕ್ಕಬಳ್ಳಾಪುರದ ಎಚ್.ಜಿ.ವೆಂಕಟಾಚಲಪತಿ ಹಾಗೂ ಅವರ ಪುತ್ರ ಎ.ವಿ.ಶರತ್ ಕುಮಾರ್ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದರು. ವ್ಯಕ್ತಿಯೊಬ್ಬರ ಪತ್ರ ಮತ್ತು ವಿಡಿಯೊ ಸಾಕ್ಷ್ಯ ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳಾದ ಉದಯ್, ಭೋಗೇಶ್, ಗೋವಿಂದ ಎಂಬುವವರು ಕೊಲೆಯಾದ ಎಚ್.ಶರತ್ ಮೇಲೆ ಹಲ್ಲೆ ನಡೆಸಿದ್ದರು. ಸಂಕೇತ್ ತನ್ನ ತೋಟದ ಮನೆಯಲ್ಲಿ ಶರತ್ ಕುಮಾರ್‌ಗೆ ಚಿತ್ರ ಹಿಂಸೆ ನೀಡಲು ಸ್ಥಳ ನೀಡಿದ್ದ' ಎಂದು ಮೂಲಗಳು ತಿಳಿಸಿವೆ.

ಏನಿದು ಪ್ರಕರಣ?: ಸಬ್ಸಿಡಿ ರೂಪದಲ್ಲಿ ಸರ್ಕಾರದಿಂದ ಕಾರು ಕೊಡಿಸುವುದಾಗಿ ಕೊಲೆಯಾದ ಎಚ್. ಶರತ್ ಅವರು ಚಿಕ್ಕಬಳ್ಳಾಪುರ ಹಾಗೂ ಯಲಹಂಕದ ವಾಸಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದುಕೊಂಡಿದ್ದರು ಎನ್ನಲಾಗಿದೆ. ಕಾರು ಕೊಡಿಸದ ಕಾರಣಕ್ಕೆ ಹಣ ವಾಪಸ್ ಕೊಡಿಸುವಂತೆ ವೆಂಕಟಾಚಲಪತಿಗೆ ಗ್ರಾಹಕರು ಕೋರಿದ್ದರು. ಶರತ್‌ನನ್ನು ಆರೋಪಿಗಳು ಅಪಹರಿಸಿ ಕೊಲೆ ಮಾಡಿದ್ದರು. ಮೃತದೇಹವನ್ನು ಚಾರ್ಮಾಡಿ ಘಾಟ್‌ನಲ್ಲಿ ಎಸೆದಿದ್ದರು ಎಂದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಲಿಫ್ಟ್ ಕುಸಿದು ಕಾರ್ಮಿಕ ಸಾವು: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯ ತಿಗಳರಪಾಳ್ಯದಲ್ಲಿ ಅಪ್ಪಾ ಮೆಡಿಕಲ್ ಸಂಸ್ಥೆಯಲ್ಲಿ ಮಂಗಳವಾರ ಲಿಫ್ಟ್ ಕುಸಿದು ಉತ್ತರ ಪ್ರದೇಶದ ಕಾರ್ಮಿಕ ರಮೇಶ್ (32) ಎಂಬುವವರು ಮೃತಪಟ್ಟಿದ್ದಾರೆ.

ಈ ಘಟನೆಯಲ್ಲಿ ಕಾರ್ಮಿಕರಾದ ಅನ್ಮೋಲ್, ನಿಶ್ಚಿತ್, ಪುನೀತ್, ಪ್ರದೀಪ್ ಅವರು ಗಾಯಗೊಂಡಿದ್ದಾರೆ. ಇವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೆಡಿಕಲ್‌ನ ವೇರ್‌ಹೌಸ್‌ನಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಔಷಧಿ ಸಾಗಿಸಿ ಲಿಫ್ಟ್ ಕೆಳಕ್ಕೆ ಬರುತ್ತಿರುವಾಗ ಈ ಅವಘಡ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಯುವತಿ ಆತ್ಮಹತ್ಯೆ: ಬಸವೇಶ್ವರನಗರದ ಕಮಲಾನಗರದಲ್ಲಿ ರಕ್ಷಿತಾ (17) ಎಂಬ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶಿವಮೊಗ್ಗದ ರಕ್ಷಿತಾ ಅಣ್ಣನ ಮನೆಯಲ್ಲಿ ವಾಸಿಸುತ್ತಿದ್ದರು. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಂಚಮಸಾಲಿಗಳ ಹೋರಾಟ ನ್ಯಾಯಸಮ್ಮತವಲ್ಲ: ನಟ ಚೇತನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೀಸಲಾತಿ ವಿಚಾರದಲ್ಲಿ ಪಂಚಮಸಾಲಿಗಳ ಹೋರಾಟ ನ್ಯಾಯಯುತವಾಗಿಲ್ಲ. ಪ್ರವರ್ಗ 3ಬಿಯಿಂದ 2ಎಗೆ ಸೇರಿಸಿ ಎಂಬ ಬೇಡಿಕೆ ಸ್ವಾರ್ಥದಿಂದ ಕೂಡಿದೆ' ಎಂದು ನಟ ಚೇತನ್ ಅಹಿಂಸ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಕೊಡುಗೆ ಶೂನ್ಯ. ಪ್ರಧಾನಿ ನರೇಂದ್ರ ಮೋದಿ ಮೀಸಲಾತಿ ವಿಚಾರದಲ್ಲಿ ಜನಪರ ಕೆಲಸ ಮಾಡಿಲ್ಲ. ಅಲ್ಲದೆ 2019ರಲ್ಲಿ ಇಡಬ್ಲ್ಯೂಎಸ್ ಕಾಯ್ದೆ ಜಾರಿಗೆ ತರುವ ಮೂಲಕ ಮೀಸಲಾತಿ ಉದ್ದೇಶದ ದಿಕ್ಕನ್ನು ತಪ್ಪಿಸಿದರು' ಎಂದರು.

'ಗಾಂಧಿ ಮತ್ತು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಮೀಸಲಾತಿ ತೆಗೆಯಬೇಕೆಂದು ಪ್ರಯತ್ನಿಸಿದರು. ನೆಹರೂ 1961ರಲ್ಲಿ ದೇಶದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮೀಸಲಾತಿಯನ್ನು ತೆಗೆದುಹಾಕಬೇಕು ಎಂದು ಪತ್ರ ಬರೆದಿದ್ದರು' ಎಂದು ಆರೋಪಿಸಿದರು.

'ನಾಗಮೋಹನ ದಾಸ್ ವರದಿಯಂತೆ ಪರಿಶಿಷ್ಟ ಜಾತಿಗೆ ಶೇ 17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ 7 ರಷ್ಟು ಮೀಸಲಾತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೆಚ್ಚಿಸಿರುವುದು ಒಳ್ಳೆಯ ಬೆಳವಣಿಗೆ. ಇದನ್ನು ಕಾರ್ಯರೂಪಕ್ಕೆ ತರಬೇಕು' ಎಂದು ತಿಳಿಸಿದರು.

'ಬಿಜೆಪಿಯನ್ನು ಮೀಸಲಾತಿ ವಿರೋಧಿ ಎಂದು ಹೇಳುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಕೊಡುಗೆ ಏನು' ಎಂದು ಪ್ರಶ್ನಿಸಿದರು.

'ಸರೋಜಿನಿ ಮಹಿಷಿ ವರದಿಯಂತೆ ಖಾಸಗಿ ವಲಯದಲ್ಲಿ ಭೌಗೋಳಿಕ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಬೇಕು. ಪ್ರವರ್ಗ 2ಎನಲ್ಲಿ ಒಳಮೀಸಲಾತಿ ಅವಶ್ಯಕತೆಯಿದೆ. ಹಾಲುಮತದ ಕುರುಬರು 2ಎ ಯಿಂದ ಪರಿಶಿಷ್ಟ ವರ್ಗದ ಸೌಲಭ್ಯ ಕೇಳುತ್ತಿರುವುದು ನ್ಯಾಯಸಮ್ಮತವಲ್ಲ' ಎಂದರು.

'ಒಕ್ಕಲಿಗರ ಮೀಸಲಾತಿ ಹೆಚ್ಚಿಸಲಿ'

'ಒಕ್ಕಲಿಗರು ಮೀಸಲಾತಿ ಕೇಳುವುದರಲ್ಲಿ ನ್ಯಾಯವಿದೆ. ಶೇ 4ರಿಂದ 12ರಷ್ಟು ಮೀಸಲಾತಿಯನ್ನು ಹೆಚ್ಚಿಸಬೇಕು ಎಂಬ ಹೋರಾಟ ಒಪ್ಪಬಹುದು' ಎಂದು ನಟ ಚೇತನ್ ಅಹಿಂಸ ಹೇಳಿದರು.

'ಯಾವುದೇ ಸಮುದಾಯದವರು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೇಳಬಹುದು' ಎಂದರು.

ಸಮ್ಮೇದ ಶಿಖರ್ಜಿಯನ್ನು ಪ್ರವಾಸಿ ತಾಣವೆಂದು ಘೋಷಿಸಿರುವ ಸರ್ಕಾರದ ನಡೆ ಖಂಡಿಸಿ ಕರ್ನಾಟಕ ಜೈನ್ ಅಸೋಸಿಯೇಷನ್ ನೇತೃತ್ವದಲ್ಲಿ ಜೈನ ಸಮುದಾಯದವರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಪ್ರವಾಸಿ ತಾಣವಾಗಿ 'ಸಮ್ಮೇದ್ ಶಿಖರ್ಜಿ': ಆದೇಶ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾರ್ಖಂಡ್‌ನ ಜೈನ ಸಮುದಾಯದ ಪವಿತ್ರ ಕ್ಷೇತ್ರ ಸಮ್ಮೇದ ಶಿಖರ್ಜಿಯನ್ನು ಪ್ರವಾಸಿ ತಾಣವೆಂದು ಘೋಷಿಸಿರುವ ಸರ್ಕಾರದ ನಡೆ ಖಂಡಿಸಿ ಕರ್ನಾಟಕ ಜೈನ್ ಅಸೋಸಿಯೇಷನ್ ನೇತೃತ್ವದಲ್ಲಿ ಜೈನ ಸಮುದಾಯದವರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಪವಿತ್ರ ಕ್ಷೇತ್ರವನ್ನು ಉಳಿಸಬೇಕು. ಪ್ರವಾಸಿ ತಾಣ ರದ್ದುಗೊಳಿಸಬೇಕು' ಎಂದು ಆಗ್ರಹಿಸಿದರು.

ಸಮ್ಮೇದ ಶಿಖರ್ಜಿ ಜೈನರ ಪವಿತ್ರ ಕ್ಷೇತ್ರ. ಈ ಕ್ಷೇತ್ರದ ದರ್ಶನ ಮಾಡಿದರೆ ಸಕಲ ಪಾಪಗಳೂ ನಾಶವಾಗುತ್ತವೆ ಎಂಬ ನಂಬಿಕೆಯಿದೆ. ಕೇಂದ್ರ ಹಾಗೂ ಜಾರ್ಖಂಡ್ ಸರ್ಕಾರಗಳು ಇದನ್ನು ಪ್ರವಾಸಿ ತಾಣವೆಂದು ಘೋಷಣೆ ಮಾಡಿದ್ದು ಜೈನ ಸಮುದಾಯಕ್ಕೆ ನೋವು ತಂದಿದೆ. ಈ ನಿರ್ಧಾರ ಹಿಂದಕ್ಕೆ ಪಡೆಯಬೇಕು ಎಂದು ಪ್ರತಿಭಟನಕಾರರು ಕೋರಿದರು.

ಸರ್ಕಾರದ ನಿರ್ಧಾರದಿಂದ ಜೈನ್ ಸಮುದಾಯದ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಹೇಳಿದರು.

ಕರ್ನಾಟಕ ಜೈನ್ ಭವನದಿಂದ ಅವೆನ್ಯೂ ರಸ್ತೆಯ ಮೂಲಕ ಚಿಕ್ಕಪೇಟೆ ಬಸದಿ ಮಾರ್ಗವಾಗಿ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನಕ್ಕೆ ಬಂದು ತಲುಪಿತು. ಅಲ್ಲಿ ಮೌನ ಪ್ರತಿಭಟನೆ ನಡೆಸಲಾಯಿತು. ಜೈನ ಮುನಿಗಳು, ಜೈನ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಉರುಳಿದ ಕಾರು: ದಂಪತಿ ಪಾರು

ಅಪಘಾತಕ್ಕೀಡಾಗಿರುವ ವಾಹನ

ಕೆಂಗೇರಿ: ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೊಮ್ಮಘಟ್ಟ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾರು ಅಪಘಾತಕ್ಕೀಡಾಗಿದ್ದು, ಕಾರಿನಲ್ಲಿದ್ದ ದಂಪತಿಗೆ ಗಾಯವಾಗಿದೆ. ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ನಿವೇಶನದ ಖರೀದಿಗಾಗಿ ಸ್ಥಳ ವೀಕ್ಷಣೆಗೆ ಬಂದಿದ್ದ ದಂಪತಿ ಮಧ್ಯಾಹ್ನ ತಾವರೆಕೆರೆ ರಸ್ತೆ ಮೂಲಕ ಕೆಂಗೇರಿ ಕಡೆಗೆ ತೆರಳುತ್ತಿದ್ದರು. ತಿರುವಿನಿಂದ ಕೂಡಿರುವ, ಕಿರಿದಾದ ಶಿಥಿಲ ರಸ್ತೆ ಬಳಿ ನಿಯಂತ್ರಣ ತಪ್ಪಿ ಬಲಕ್ಕೆ ಚಲಿಸಿತು. ರಸ್ತೆಗೆ ಅಳವಡಿಸಿರುವ ಕಬ್ಬಿಣದ ರೇಲಿಂಗ್ಸ್‌ಗೆ ಬಡಿದು ಪಕ್ಕದ ಮೋರಿಗೆ ಬಿದ್ದಿದೆ ಎಂದು ಪ್ರತ್ಯಕ್ಷ ದರ್ಶಿಯೊಬ್ಬರು ತಿಳಿಸಿದ್ದಾರೆ.

ಕಳಪೆ ಕಾಮಗಾರಿ ಆರೋಪ: ಸುಮಾರು 3-4 ವರ್ಷದ ಹಿಂದೆ ರಸ್ತೆ ಸುರಕ್ಷತೆಗಾಗಿ ಬಿಡಿಎ ವತಿಯಿಂದ ಕೊಮ್ಮಘಟ್ಟ ರಸ್ತೆಯಲ್ಲಿ ಕಬ್ಬಿಣದ ರೇಲಿಂಗ್ಸ್ ಅಳವಡಿಸಲಾಗಿತ್ತು. ಗುಣಮಟ್ಟ ಇಲ್ಲದ ಈ ಕಬ್ಬಿಣದ ರೇಲಿಂಗ್ಸ್ ಬಿಸಿಲು ಮಳೆಯಿಂದ ಮತ್ತಷ್ಟು ಹದಗೆಟ್ಟಿದೆ. ರೇಲಿಂಗ್ಸ್ ಪಕ್ಕದ ಕೆಲವು ಪಾರ್ಶ್ವಗಳಲ್ಲಿ ನೀರುಗಾಲುವೆಯೂ ಇದೆ. ಮಳೆಗಾಲದಲ್ಲಿ ಸಾಕಷ್ಟು ಪ್ರಮಾಣದ ನೀರು ಸಾಗಿಬರುತ್ತದೆ. ಒಂದೊಮ್ಮೆ ವಾಹನಗಳು ಅಪಘಾತಕ್ಕೀಡಾಗಿ ಈ ಸ್ಥಳಕ್ಕೆ ಬಿದ್ದರೆ ಪ್ರಾಣಹಾನಿ ಆಗುವ ಸಂಭವವೂ ಇದೆ. ನೀರಿನ ಹರಿವಿನಿಂದ ಕೆಲವೆಡೆ ರಸ್ತೆ ಈಗಾಗಲೇ ಹಾಳಾಗಿವೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದರು.

ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೆಂಪೇಗೌಡ ಬ್ಲಾಕ್ 3 ಬಡಾವಣೆಯ ಕೆಲವು ರಸ್ತೆ ತಿರುವುಗಳು ಅತೀವ ಅಪಾಯಕಾರಿಯಾಗಿವೆ. ವಾಹನ ದಟ್ಟಣೆ ಇರದ ಈ ರಸ್ತೆಗಳಲ್ಲಿ ವಾಹನ ಸವಾರರು ವೇಗವಾಗಿ ಚಲಿಸುವುದು ಸಾಮಾನ್ಯವಾಗಿದೆ.

ತಿರುವುಗಳು ಅತ್ಯಂತ ಕಡಿದಾಗಿರುವುದರಿಂದ ವೇಗವಾಗಿ ಬಂದ ವಾಹನಗಳು ಚಾಲಕನ ನಿಯಂತ್ರಣ ತಪ್ಪಿ ಅಪಘಾತವಾಗುವ ಸಂಭವ ಹೆಚ್ಚಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಹಂಪಿ: ಬೆಂಗಳೂರಿನ ಇಬ್ಬರು ನೀರುಪಾಲು

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಹಂಪಿ ಪುರಂದರದಾಸರ ಮಂಟಪದ ಸಮೀಪ ತುಂಗಭದ್ರಾ ನದಿಯಲ್ಲಿ ಈಜಾಡಲು ಹೋಗಿದ್ದ ಬೆಂಗಳೂರಿನ ಇಬ್ಬರು ಯುವಕರು ಬುಧವಾರ ಸಂಜೆ ನೀರುಪಾಲಾಗಿದ್ದಾರೆ.

'18 ವರ್ಷದ ಹರೀಶ್ ಹಾಗೂ ಜೀವ ಅವರು ಏಳೆಂಟು ಜನ ಗೆಳೆಯರೊಂದಿಗೆ ಹಂಪಿ ವೀಕ್ಷಣೆಗೆ ಬಂದಿದ್ದರು. ಸಂಜೆ ತುಂಗಭದ್ರಾ ನದಿಯಲ್ಲಿ ಈಜಾಡಲು ಹೋಗಿ ನಾಪತ್ತೆಯಾಗಿದ್ದಾರೆ. ಅಗ್ನಿಶಾಮಕ ದಳದವರು ಸ್ಥಳಕ್ಕೆ ಬಂದಿದ್ದು, ಹುಡುಕಾಟ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಚಿತ್ರಾವಳಿ

ನಗರದ ಮಲ್ಲೇಶ್ವರದ ಸೇವಾ ಸದನ ಸಭಾಂಗಣದಲ್ಲಿ ರಂಗ ಸಂಸ್ಥಾನ ಆಯೋಜಿಸಿರುವ ಶತ ಕಂಠಗಳ ಗಾಯನವನ್ನು ಪ್ರಸ್ತುತಪಡಿಸಿದ ಕಲಾವಿದರು —ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬ್ಯಾಟರಾಯನಪುರದ ಥಣಿಸಂದ್ರ ವಾರ್ಡಿನ ಭಾಗ್ಯಶ್ರೀ ರಾಯಲ್, ಪಿ ಆ್ಯಂಡ್ ಟಿ ಬಡಾವಣೆ ಹಾಗೂ ಜಕ್ಕೂರು ವಾರ್ಡಿನ ಗ್ರೀನ್ ಗಾರ್ಡನ್ ಮತ್ತು ದುರ್ಗಾಂಬಾ ಬಡಾವಣೆಯ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ₹ 2 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಂ. ಜಯಗೋಪಾಲಗೌಡ, ಪಳನಿ ವೆಂಕಟೇಶ್, ಎಚ್.ಎ. ಶಿವಕುಮಾರ್, ಟಿ. ವೆಂಕಟರಾಮರೆಡ್ಡಿ, ಬಿಬಿಎಂಪಿ ಸಹಾಯಕ ಎಂಜಿನಿಯರ್‌ಗಳಾದ ಸುರೇಶ್ ದೇವತ್ ರಾಜ್, ಮಾಲತೇಶ್ ಮತ್ತಿತರರು ಇದ್ದಾರೆ

ಬೆಂಗಳೂರು ನಗರ ಜಿಲ್ಲೆ ಕೃಷಿ ಇಲಾಖೆ, ಬೆಂಗಳೂರು ಉತ್ತರ ಮತ್ತು ಪೂರ್ವ ತಾಲ್ಲೂಕು ಕೃಷಿಕ ಸಮಾಜ ಜಂಟಿಯಾಗಿ ನಗರದಲ್ಲಿ ಬುಧವಾರ ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಶೇಷಾದ್ರಿ ಮತ್ತು ಪೂರ್ವ ತಾಲ್ಲೂಕಿನ ಮೋಹನ್ ಕುಮಾರ್ ಅವರಿಗೆ ಜಿಲ್ಲಾಮಟ್ಟದ 'ಆತ್ಮ ಕೃಷಿಕ' ಪ್ರಶಸ್ತಿ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ಸೋಮಶೇಖರಯ್ಯ, ತಿಮ್ಮರಾಯಪ್ಪ, ನಂಜುಂಡಪ್ಪ, ಶಂಕರಪ್ಪ ಹಾಗೂ ಬೆಂಗಳೂರು ಪೂರ್ವ ತಾಲ್ಲೂಕಿನ ಲತಾದೇವಿ ಅವರಿಗೆ ತಾಲ್ಲೂಕು ಮಟ್ಟದ 'ಆತ್ಮ ಕೃಷಿಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಂಗಳೂರು ನಗರಜಿಲ್ಲೆ ಜಂಟಿ ಕೃಷಿ ನಿರ್ದೇಶಕಿ ಎಸ್.ಎಸ್. ಲಲಿತಾ ರೆಡ್ಡಿ, ಕೃಷಿ ವಿಶ್ವವಿದ್ಯಾಲಯದ ಸಸ್ಯರೋಗಶಾಸ್ತ್ರ ವಿಭಾಗದ ವಿಜ್ಞಾನಿ ಸಿ.ಪಿ. ಮಂಜುಳಾ, ಕೃಷಿಕ ಸಮಾಜದ ಅಧ್ಯಕ್ಷ ಬಿ.ಕೆ. ಮಂಜುನಾಥಗೌಡ, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಶಿಲ್ಪಶ್ರೀ, ಸಹಾಯಕ ಕೃಷಿ ನಿರ್ದೇಶಕಿ ಬಿ.ಟಿ. ವಿನೋದಮ್ಮ, ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಯುವಕ ರೈತ ಘಟಕದ ಅಧ್ಯಕ್ಷ ಬಿ.ಕೆ. ರವೀಂದ್ರನಾಥಗೌಡ ಮತ್ತಿತರರು ಇದ್ದಾರೆ —ಪ್ರಜಾವಾಣಿ ಚಿತ್ರಗಳು

ಜೇಂಗೊಡ ಜನಪದ ಗೀತೋತ್ಸವ

ಬೆಂಗಳೂರು: 'ಜನರು ಜಾತಿ ಮತ್ತು ಊಳಿಗಮಾನ್ಯ ವ್ಯವಸ್ಥೆಯಿಂದ ಹೊರಬಂದ ಕಾರಣ ಜಾನಪದವನ್ನು ಕಲೆಯಾಗಿ ಪ್ರೀತಿಸುವ ಭಾವನೆ ಜನರಲ್ಲಿ ರೂಪುಗೊಂಡಿದೆ' ಎಂದು ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ ತಿಳಿಸಿದರು.

ಗಾಯನ ಗಂಗಾ ಟ್ರಸ್ಟ್ ನಗರದಲ್ಲಿ ಆಯೋಜಿಸಿದ್ದ 'ಜೇಂಗೊಡ ಜನಪದ ಗೀತೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಧರ್ಮ ಮತ್ತು ಆಚರಣೆ ಭಾಗವಾಗಿದ್ದ ಗಾಯನ ಮತ್ತು ಕಲೆಗಳು ಇತ್ತೀಚೆಗೆ ಸಾರ್ವಜನಿಕ ವೇದಿಕೆಯಲ್ಲಿ ಪ್ರದರ್ಶನಗೊಳ್ಳುತ್ತಿವೆ. ಜನಪದ ಗಾಯನ ನಿರ್ಲಕ್ಷಿಸುತ್ತಿದ್ದ ಸಂದರ್ಭ ಈಗ ದೂರವಾಗಿದೆ. ಕರ್ನಾಟಕ ಸುಗಮ ಸಂಗೀತ ಪರಿಷತ್‌ನಂತೆ ಜನಪದ ಗಾಯನ ಮತ್ತು ಕಲಾ ಪರಿಷತ್ ಆರಂಭ ವಾಗಿರುವುದು ವಿಶೇಷ ಸಂಗತಿ' ಎಂದರು.

'ಅಗ್ಗದ ಜನಪ್ರಿಯತೆಗೆ ಮನಸೋಲದೆ ಹಾಡು ಮತ್ತು ಕಲೆಯ ಮೂಲ ಆಶಯಗಳನ್ನು ಕಾಪಾಡುವ ಜವಾಬ್ದಾರಿ ಕಲಾವಿದರ ಮೇಲಿದೆ. ಗಾಯನ ಕಲಾ ಪರಿಷತ್ ನಮ್ಮ ಪರಂಪರೆಯನ್ನು ಸಂರಕ್ಷಣೆ ಮಾಡುವ ಜೊತೆಗೆ ಯುವ ಪೀಳಿಗೆಗೆ ಕಲೆಯನ್ನು ರವಾನಿಸುವ ಕೆಲಸ ಮಾಡಬೇಕು. ತಂತ್ರಜ್ಞಾನ ಯುಗದಲ್ಲಿ ಡಿಜಿಟಲ್ ವ್ಯವಸ್ಥೆಗಳನ್ನೇ ಬಳಸಿಕೊಂಡು ಹೊಸ ಜನಾಂಗವನ್ನು ತಲುಪಬೇಕು. ಹೊಸ ದಿಕ್ಕಿನಲ್ಲಿ ಹೇಗೆ ಜಾನಪದ ಕಲೆಯನ್ನು ಪ್ರಸಾರ ಮಾಡಬೇಕೆಂದು ಅರಿತು ಮುನ್ನಡೆಯಬೇಕು' ಎಂದರು.

ಕಾರ್ಯಕ್ರಮದಲ್ಲಿ ಗೋಪಿ, ಎಚ್.ಆರ್. ಲೀಲಾವತಿ, ಬಿ.ವಿ. ಶ್ರೀನಿವಾಸ್, ಚಂದ್ರಶೇಖರ್ ವೇಮಗಲ್ ನಾರಾಯಣಸ್ವಾಮಿ ಇದ್ದರು.

ಅಮೃತ್ ಮಹಲ್: ₹1.71 ಲಕ್ಷಕ್ಕೆ ಹರಾಜು

ಬೀರೂರು: ಇಲ್ಲಿನ ಅಮೃತ ಮಹಲ್ ತಳಿ ಸಂವರ್ಧನಾ ಕೇಂದ್ರದಲ್ಲಿ ಬುಧವಾರ ಹರಾಜಿನಲ್ಲಿ ಜೋಡಿ ಕರು ₹1.71 ಲಕ್ಷಕ್ಕೆ ಮಾರಾಟವಾಗಿದೆ.

ವಾರ್ಷಿಕ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಹಾವೇರಿ ಜಿಲ್ಲೆ ಹಿರೇಕೆರೂರು ಬುರಡೀಕಟ್ಟೆಯ ಯಶೋಧರ ಯಲ್ಲಪ್ಪ ಲಿಂಗದಹಳ್ಳಿ ಅವರು ಮೊದಲ ಜೋಡಿಯಾಗಿ ಪಣಕ್ಕಿದ್ದ ಎಲ್1970 ನಾಮಧಾರಿ ಮತ್ತು ಎಲ್1921 ಬೆಳ್ಳಿಗೆಜ್ಜೆ ಕರುಗಳನ್ನು ಈ ಮೊತ್ತಕ್ಕೆ ತಮ್ಮದಾಗಿಸಿಕೊಂಡರು.

'ಗಗನಕುಸುಮವಾಗುತ್ತಿರುವ ಉನ್ನತ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಎಂ.ಎಚ್. ಜಯಪ್ರಕಾಶ್ ನಾರಾಯಣ್ ಅವರ 96ನೇ ಜನ್ಮ ದಿನಾಚರಣೆಗೆ ಪಿವಿಪಿ ಟ್ರಸ್ಟ್ ಅಧ್ಯಕ್ಷ ಮರಿಸ್ವಾಮಿ ಚಾಲನೆ ನೀಡಿದರು. ಪಿವಿಪಿ ಟ್ರಸ್ಟಿ ಶಿವಮಲ್ಲು, ಪ್ರಾಂಶುಪಾಲೆ ಮೀನಾಕ್ಷಿ. ಡಾ.ಕೆ.ಎನ್ ಅನುರಾಧಾ ಇದ್ದಾರೆ

ಕೆಂಗೇರಿ: 1990ರ ದಶಕದ ನಂತರ ಬಂದ ಸರ್ಕಾರಗಳು ಖಾಸಗೀಕರಣ, ಉದಾರೀಕರಣದ ಹೆಸರಿನಲ್ಲಿ ಶಿಕ್ಷಣವನ್ನು ಉದ್ಯಮವನ್ನಾಗಿ ಪರಿವರ್ತಿಸುವ ನೀತಿಗಳನ್ನು ಜಾರಿಗೊಳಿಸಿತು ಎಂದು ಪಿವಿಪಿ ಟ್ರಸ್ಟಿ ಶಿವಮಲ್ಲು ಆರೋಪಿಸಿದರು.

ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಸಂಸ್ಥಾಪಕ ಎಂ.ಎಚ್. ಜಯಪ್ರಕಾಶ್ ನಾರಾಯಣ್ ಅವರ 96ನೇ ಜನ್ಮ ದಿನಾಚರಣೆಯಲ್ಲಿ ಅವರು ಮಾತನಾಡಿದರು. 1991ರ ವೇಳೆ ಜಾಗತೀಕರಣದ ಹೆಸರಿನಲ್ಲಿ ದೇಶವ್ಯಾಪಿ ಹಲವಾರು ಬದಲಾವಣೆಗಳಾದವು. ಅಲ್ಲಿಯವರೆಗೂ ಅಸ್ತಿತ್ವದಲ್ಲಿದ್ದ ಸರ್ಕಾರಗಳು ಎಲ್ಲಾ ವರ್ಗದವರಿಗೂ ಪೂರಕವಾದ ಶೈಕ್ಷಣಿಕ ನೀತಿಗಳನ್ನು ಅಳವಡಿಸಿಕೊಂಡಿದ್ದವು. ಬದಲಾದ ಕಾಲಘಟ್ಟದಲ್ಲಿ ಜಾಗತೀಕರಣದ ಹೆಸರಿನಲ್ಲಿ ಉನ್ನತ ಶಿಕ್ಷಣವು ದೀನ ದಲಿತರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ ಗಗನಕುಸುಮವಾಗಿ ರೂಪುಗೊಂಡಿತು ಎಂದು ಬೇಸರ ವ್ಯಕ್ತಪಡಿಸಿದರು.

ಪಿವಿಪಿ ಟ್ರಸ್ಟ್ ಅಧ್ಯಕ್ಷ , ಮಾಜಿ ಐಪಿಎಸ್ ಅಧಿಕಾರಿ ಮರಿಸ್ವಾಮಿ ಮಾತನಾಡಿ, 'ಅಂಬೇಡ್ಕರ್ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದ್ದ ಜಯಪ್ರಕಾಶ್, ಶಿಕ್ಷಣಕ್ಕೆ ಮಹತ್ವ ನೀಡಿದರು. ಮಹಿಳೆಯರಿಗೂ ಸಮನಾದ ಅವಕಾಶ ದೊರೆಯಬೇಕೆಂದು ಬಾಲಕಿಯರ ವಸತಿಶಾಲೆಯನ್ನು ಆರಂಭಿಸಿದರು' ಎಂದು ಹೇಳಿದರು.

ಜಯಪ್ರಕಾಶ್ ಅವರ ತತ್ವ ಹಾಗೂ ಆಶಯಗಳನ್ನು ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಅಳವಡಿಸಿಕೊಂಡು ನಡೆಯುವುದೇ ನಾವು ಅವರಿಗೆ ಸಲ್ಲಿಸುವ ಗೌರವ ಎಂದು ತಿಳಿಸಿದರು. 'ಅನಾರೋಗ್ಯಪೀಡಿತರಾಗಿ ಆಸ್ಪತ್ರೆಯಲ್ಲಿ ಇದ್ದಾಗಲೂ ಮತದಾರರನ್ನು ಮರೆತಿರಲಿಲ್ಲ. ಅಲ್ಲಿಂದಲೇ ಜನರ ಕುಂದುಕೊರತೆಗಳಿಗೆ ಸ್ಪಂದಿಸುತ್ತಿದ್ದರು' ಎಂದು ಅವರ ಒಡನಾಡಿ ಎಂ. ಶ್ರೀಧರ ಮೂರ್ತಿ ಹೇಳಿದರು.

ಇದೇ ವೇಳೆ ಜಯಪ್ರಕಾಶ್ ಅವರ ಅನುಯಾಯಿಗಳು ಹಾಗೂ ಅಭಿಮಾನಿಗಳು ಜಯಪ್ರಕಾಶ್ ಅವರ ಬದುಕು–ಬರಹಗಳ ಬಗ್ಗೆ ಬೆಳಕು ಚೆಲ್ಲಿದರು. ಪ್ರಾಂಶುಪಾಲೆ ಮೀನಾಕ್ಷಿ, ಡೀನ್ ಕೆ.ಎನ್.ಅನುರಾಧಾ ಮತ್ತಿತರರು ಉಪಸ್ಥಿತರಿದ್ದರು.

ನೆನಪಿನೋಕುಳಿ ಕಾರ್ಯಕ್ರಮದಲ್ಲಿ ಸಾಹಿತಿ ಹರಿಹರಪ್ರಿಯ ಆಶಯ

'ಜಿಎಸ್‌ಎಸ್ ಸಮಾಧಿ ಸಾಂಸ್ಕೃತಿಕ ಹೆಗ್ಗುರುತಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು.ಆರ್. ಅನಂತಮೂರ್ತಿಯವರ ಸಮಾಧಿ ಭೂಮಿಯನ್ನು ಸಾಂಸ್ಕೃತಿಕ ಹೆಗ್ಗುರುತಿನ ಕೇಂದ್ರವಾಗಿ ರೂಪಿಸಬೇಕು' ಎಂದು ಸಾಹಿತಿ ಹರಿಹರಪ್ರಿಯ ಆಶಯ ವ್ಯಕ್ತಪಡಿಸಿದರು.

ಪ್ರೊ. ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ. ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾಸಮಿತಿ ಕಲಾಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜಿ. ಎಸ್. ಶಿವರುದ್ರಪ್ಪ ಮತ್ತು ಪ್ರೊ. ಯು. ಆರ್. ಅನಂತಮೂರ್ತಿ ಅವರ ನೆನಪಿನೋಕುಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಭಾರತದಲ್ಲಿ ಹಿಂದೂರಾಷ್ಟ್ರದ ಹೆಸರಿನಲ್ಲಿ ಜನರ ನಡುವೆ ವಿಷಬೀಜಗಳನ್ನು ಬಿತ್ತನೆ ಮಾಡುತ್ತಿದ್ದಾರೆ. ಅಂತಹವರಿಗೆ ಜಿ.ಎಸ್. ಶಿವರುದ್ರಪ್ಪ ಮತ್ತು ಯು.ಆರ್. ಅನಂತಮೂರ್ತಿ ಅವರ ಬರವಣಿಗೆ ಹಾಗೂ ಚಿಂತನೆಗಳು ಮಾದರಿಯಾಗಬೇಕು. ಸರ್ಕಾರ ಸಾಹಿತಿಗಳ ಅಂತ್ಯಕ್ರಿಯೆ ನಡೆಸಿದ್ದ ಸ್ಥಳವನ್ನು ನಿರ್ಲಕ್ಷ್ಯಕ್ಕೆ ದೂಡಿ, ಸಾಹಿತಿಗಳಿಗೆ ಅಪಮಾನ ಮಾಡುತ್ತಿದ್ದಾರೆ. ಇದು ಕನ್ನಡತನಕ್ಕೆ ಮಾಡುವ ವಿದ್ರೋಹವಾಗಿದೆ. ಕೂಡಲೇ ಸರ್ಕಾರ ಇದರ ಬಗ್ಗೆ ಗಮನಹರಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದರೆ ಕನ್ನಡಪರ ಸಂಘಟನೆಗಳು ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದರು.


ನೆನಪಿನೋಕುಳಿ ಕಾರ್ಯಕ್ರಮದಲ್ಲಿ (ಎಡದಿಂದ) ಸಿವಿಜಿ ಚಂದ್ರು, ರಂಗಭೂಮಿ ಕಲಾವಿದ ಕೆ. ರೇವಣ್ಣ, ಸಾಹಿತಿ ಪುಸ್ತಕಮನೆ ಹರಿಹರಪ್ರಿಯ, ಸಾಹಿತಿ ಡಾ. ಬೈರಮಂಗಲ ರಾಮೇಗೌಡ, ರಂಗಸಂಘಟಕ ಮಲ್ಲಿಕಾರ್ಜುನ ಮಹಾಮನೆ, ರಂಗ ನಿರ್ದೇಶಕ ಕುಮಾರ್ ಕೆ.ಎಚ್., ನರಸಿಂಹಮೂರ್ತಿ, ಗಾಯಕ ಕೆ.ಎನ್ ನಾಗೇಶ್ ಅವರು ಜಿ.ಎಸ್. ಶಿವರುದ್ರಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಭೈರಮಂಗಲ ರಾಮೇಗೌಡ ಮಾತನಾಡಿ, 'ಸಾಹಿತಿಗಳ ಸಮಾಧಿ ಸ್ಥಳವು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಬಿತ್ತಿ ಬೆಳೆಯುವ ತಾಣವಾಗಿ ಕಾಣುತ್ತಿದೆ. ಈ ಸ್ಥಳವು ಸಾಂಸ್ಕೃತಿಕ ಕ್ಷೇತ್ರವಾಗಬೇಕಾದರೆ ಇದನ್ನು ಪ್ರವಾಸಿತಾಣವಾಗಿ ರೂಪಿಸಬೇಕು. ನಿರಂತರ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಾಹಿತ್ಯದ ಚಟುವಟಿಕೆಗಳು ನಡೆಯುವಂತೆ ಸರ್ಕಾರ ಯೋಜನೆ ರೂಪಿಸಬೇಕು' ಎಂದು ತಿಳಿಸಿದರು.

ವೇದಿಕೆಯ ಸಂಚಾಲಕ ಕೆ.ಎಚ್. ಕುಮಾರ್ ಮಾತನಾಡಿ, 'ಸತತ ನಾಲ್ಕು ವರ್ಷಗಳಿಂದ ಖಾಸಗಿಯಾಗಿ ನಾವು ಈ ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ. ಇದು ಸರ್ಕಾರದ ಕಾರ್ಯಕ್ರಮವಾಗಿ ರೂಪುಗೊಳ್ಳಬೇಕು. ಸಾಹಿತಿಗಳ ಸಮಾಧಿ ಜಾಗವನ್ನು ಕಬಳಿಸುವ ಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಈ ಜಾಗವನ್ನು ಉಳಿಸಿಕೊಳ್ಳಲು ನಾವು ಯಾವುದೇ ರೀತಿಯ ಹೋರಾಟಕ್ಕೂ ನಾವು ಸಿದ್ಧರಿದ್ದೇವೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಂಗಸಂಘಟಕ ಮಲ್ಲಿಕಾರ್ಜುನ ಮಹಾಮನೆ, ಗೋವಿಂದರಾಜನಗರ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ರಾ. ನರಸಿಂಹಮೂರ್ತಿ ಸೇರಿ ಹಲವರು ಭಾಗಿಯಾಗಿದ್ದರು. ಕವಿಗೋಷ್ಠಿಯಲ್ಲಿ ಹಲವು ಯುವಕವಿಗಳು ಕವಿತೆ ವಾಚನ ಮಾಡಿದರು. ಮತ್ತು ಕಲಾಗೌರಿ ತಂಡದಿಂದ ನೃತ್ಯ ಪ್ರದರ್ಶನ ನಡೆಯಿತು.

ರಾಜ್ಯ ಸರ್ಕಾರಕ್ಕೆ ಮುಜುಗರ ತಂದ ವರ್ಷ

• ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ರಾಜಕೀಯ, ಕೃಷಿ, ಧಾರ್ಮಿಕ ಸೇರಿ ವಿವಿಧ ಕ್ಷೇತ್ರಗಳಲ್ಲಿ 2022ರಲ್ಲಿ ನಡೆದ ಘಟನೆಗಳು ಸಿಹಿ–ಕಹಿಯ ಸಮ್ಮಿಶ್ರಣವಾಗಿದ್ದವು.

ಗುತ್ತಿಗೆದಾರರ ಸಂಘ ಹಾಗೂ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳು ಮಾಡಿದ ಶೇ 40 ಕಮಿಷನ್ ಆರೋಪಗಳು, ನೇಮಕಾತಿ ಹಗರಣಗಳು, ಪಠ್ಯಪುಸ್ತಕ ಸಮಿತಿ ನೇಮಕ ವಿವಾದ ಸರ್ಕಾರವನ್ನು ಸಾಕಷ್ಟು ಮುಜುಗರಕ್ಕೀಡು ಮಾಡಿದವು. ಕಾಂಗ್ರೆಸ್ 'ಪೇಸಿಎಂ' ಅಭಿಯಾನದ ಮೂಲಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು. ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧ ವರ್ಷದ ಪ್ರಮುಖ ವಿವಾದಗಳಲ್ಲಿ ಒಂದು. ಭ್ರಷ್ಟಾಚಾರ ನಿಗ್ರಹ ದಳವನ್ನು ರದ್ದು ಮಾಡಿದ ಹೈಕೋರ್ಟ್ ತೀರ್ಪು, ಲೋಕಾಯುಕ್ತಕ್ಕೆ ಮರಳಿ ಅಧಿಕಾರ ನೀಡಿದ್ದೂ ಉಲ್ಲೇಖನೀಯ.

ಚಿತ್ರದುರ್ಗದ ಮುರುಘಾ ಮಠದ ಪೀಠಾಧಿಪತಿ ಮುರುಘಾ ಶರಣರು ಹಾಸ್ಟೆಲ್‌ನ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬಂಧಿತರಾದರು. ಧಾರ್ಮಿಕ ಪರಂಪರೆಯಲ್ಲೇ ಕಪ್ಪುಚುಕ್ಕಿ. ಶಿವಮೊಗ್ಗ, ಮಂಗಳೂರಿನಲ್ಲಿ ಹಿಂದು, ಮುಸ್ಲಿಂ ಯುವಕರ ಹತ್ಯೆ ಕರ್ನಾಟಕದ ಕೋಮು ಸೌಹಾರ್ದದ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ವನ್ಯಜೀವಿ–ಮಾನವ ಸಂಘರ್ಷ ಹಿಂದೆಂದಿಗಿಂತಲೂ ಹೆಚ್ಚು ಆತಂಕ ಸೃಷ್ಟಿಸಿತು.

ಡಿಸೆಂಬರ್ ಅಂತ್ಯದವರೆಗೂ ಮಳೆ ಸುರಿದದ್ದು, ರಾಜ್ಯದ ಎಲ್ಲ ಜಲಾಶಯ, ಕೆರೆ–ಕಟ್ಟೆಗಳು ಭರ್ತಿಯಾದವು. ವಿಧಾನಸಭೆ ಚುನಾವಣಾ ವರ್ಷದ ವೇಳೆಗೆ ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಮತ್ತೆ ಭುಗಿಲೆದ್ದು, ಸಂಘರ್ಷದ ವಾತಾವರಣ ನಿರ್ಮಾಣವಾಯಿತು.

ಲೋಕಾಯುಕ್ತಕ್ಕೆ ಮರಳಿದ ಶಕ್ತಿ: ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಹುಟ್ಟುಹಾಕಿದ್ದ ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಆಗಸ್ಟ್‌ನಲ್ಲಿ ರದ್ದು ಮಾಡಿತು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತಕ್ಕೆ ಮರಳಿಸಿತು.

ಶೇ 40 ಕಮಿಷನ್ ಸದ್ದು: ಗುತ್ತಿಗೆದಾರರಿಂದ ಶೇ 40 ಕಮಿಷನ್ ಪಡೆಯುತ್ತಾರೆ ಎಂಬ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪ ರಾಜ್ಯ ಸರ್ಕಾರವನ್ನು ಮುಜುಗರಕ್ಕೀಡು ಮಾಡಿತು. ಕಮಿಷನ್ ಆರೋಪದ ಮೇಲೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆ ನೀಡಿದರು. ಹಾಗೆಯೇ ಖಾಸಗಿ ಶಾಲೆಗಳ ಒಕ್ಕೂಟವೂ ಶಿಕ್ಷಣ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಪ್ರಧಾನಮಂತ್ರಿಗೆ ಪತ್ರ ಬರೆದಿತ್ತು. ವಿರೋಧ ಪಕ್ಷ ಕಾಂಗ್ರೆಸ್ ಶೇ 40 ಕಮಿಷನ್ ದಂಧೆಯ ವಿರುದ್ಧ 'ಪೇಸಿಎಂ' ಅಭಿಯಾನವನ್ನು ಹಮ್ಮಿಕೊಂಡಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರ 'ಇರುವ ಕ್ಯೂಆರ್ ಕೋಡ್ ಸಿದ್ಧಪಡಿಸಿ 'ಪೇಸಿಎಂ– ಶೇ 40ರಷ್ಟು ಲಂಚ ಸ್ವೀಕರಿಸಲಾಗುವುದು' ಎಂದು ಭಿತ್ತಿಪತ್ರ ಅಂಟಿಸುವ ಅಭಿಯಾನ ನಡೆಸಿತು.

15 ಸಾವಿರ ಶಾಲಾ ಶಿಕ್ಷಕರ ನೇಮಕ: ಹಲವು ವರ್ಷಗಳ ನಂತರ ಏಕಕಾಲಕ್ಕೆ 15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಅಂತಿಮವಾಗಿ 13,363 ಅಭ್ಯರ್ಥಿಗಳು ಆಯ್ಕೆಯಾದರು.

ಜೈಲು ಸೇರಿದ ಮುರುಘಾ ಶರಣರು: ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಶರಣರು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತು ಆಗಸ್ಟ್‌ನಲ್ಲಿ ಜೈಲು ಸೇರಿದರು. ಶರಣರ ವಿರುದ್ಧ ಪ್ರಕರಣ ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಪಿತೂರಿ ರೂಪಿಸಿದ ಆರೋಪದಡಿ ಮಠದ ಮಾಜಿ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ.ಬಸವರಾಜನ್ ದಂಪತಿ ಬಂಧಿಸಿದ ಪೊಲೀಸರು ಜೈಲಿಗೆ ಕಳುಹಿಸಿದ್ದರು.

ಮಹಿಳಾ ಆಯೋಗಕ್ಕೆ ರಜತ ಸಂಭ್ರಮ: ರಾಜ್ಯ ಮಹಿಳಾ ಆಯೋಗದ ರಜತ ಮಹೋತ್ಸವ ಆಚರಿಸಿಕೊಂಡಿದ್ದು 2022ರ ವಿಶೇಷ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಯೋಗದ ಸಬಲೀಕರಣಕ್ಕೆ ಹಲವು ಯೋಜನೆ ರೂಪಿಸುವ ಭರವಸೆ ನೀಡಿದರು.

ಶಿಕ್ಷಕರ ಸ್ನೇಹಿಯಾದ ವರ್ಗಾವಣೆ ನೀತಿ: ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020ಯನ್ನು ಜಾರಿಗೊಳಿಸಿ, ರಾಜ್ಯ ಸರ್ಕಾರ ವರ್ಗಾವಣೆಗಳಿಗೆ ಅಧಿಸೂಚನೆ ಹೊರಡಿಸಿತು.

ನಿಲ್ಲದ ಮಾನವ–ಪ್ರಾಣಿ ಸಂಘರ್ಷ: ರಾಜ್ಯದ ಕೆಲವು ಭಾಗಗಳಲ್ಲಿ ಚಿರತೆ–ಮಾನವರ ಮಧ್ಯೆ, ಕೆಲವು ಭಾಗಗಳಲ್ಲಿ ಆನೆ–ಮಾನವರ ಮಧ್ಯೆ ನಡೆದ ಸಂಘರ್ಷದಲ್ಲಿ ಕೆಲವರು ಜೀವ ಕಳೆದುಕೊಂಡರು. ಆನೆಗಳ ಹಾವಳಿ ತಡೆಯಲು ಸರ್ಕಾರ ಕ್ಷಿಪ್ರಕಾರ್ಯ ಪಡೆಯನ್ನೂ ರಚಿಸಿತು.

ಮೂರು ಸಂಸ್ಥೆಗೆ ₹ 2 ಸಾವಿರ ಕೋಟಿ ಹೊಣೆ: ರಾಜ್ಯದ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಪದಾರ್ಥ ಪೂರೈಸಲು ಕೇವಲ ಮೂರು ಸಂಘಗಳಿಗೆ ಅನುಮತಿ ನೀಡಿದ ಸರ್ಕಾರ, ಹಿಂದೆ ಕಳಪೆ ಆಹಾರ ಪೂರೈಕೆ ಮಾಡಿ ಕಪ್ಪುಪಟ್ಟಿಗೆ ಸೇರಿದ್ದ ತಮಿಳುನಾಡು ಮೂಲದ ಸಂಸ್ಥೆಗೆ ಮತ್ತೆ ಮಣೆ ಹಾಕಿತು. ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಿವೆ (ಎಂಎಸ್‌ಪಿಟಿಸಿ). ಅವುಗಳಲ್ಲಿ ಕೇವಲ ಮೂರು ಸಂಘಗಳಿಗೆ ಸರಾಸರಿ ₹ 2 ಸಾವಿರ ಕೋಟಿ ವಹಿವಾಟು ಇರುವ ಹೊಣೆಗಾರಿಕೆ ನಿಭಾಯಿಸಲು ಅನುಮತಿ ನೀಡಿತು.

ಎನ್‌ಪಿಎಸ್ ವಿರುದ್ಧ ತೀವ್ರಗೊಂಡ ಹೋರಾಟ: ಹೊಸ ಪಿಂಚಣಿ ವ್ಯವಸ್ಥೆ ರದ್ದು ಮಾಡುವಂತೆ ಕೋರಿ ವಿವಿಧ ಸಂಘಟನೆಗಳು ನಿರಂತರ ಹೋರಾಟ ಆರಂಭಿಸಿದವು. 2006ರಿಂದ ಹೊಸ ಪಿಂಚಣಿ ವ್ಯವಸ್ಥೆ ಜಾರಿಯಾದರೂ, ಹೋರಾಟ ತೀವ್ರ ಕಾವು ಪಡೆದದ್ದು ಇದೇ ವರ್ಷ.

ಪದವಿ ಕಾಲೇಜು ಸಹ ಪ್ರಾಧ್ಯಾಪಕರಿಗೆ 'ಪ್ರೊಫೆಸರ್' ಗರಿ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 274 ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕ (ಪ್ರೊಫೆಸರ್) ಹುದ್ದೆಗೆ ಬಡ್ತಿ ನೀಡಿ ಸರ್ಕಾರ ಆದೇಶ ಹೊರಡಿಸಿತು. ಉನ್ನತ ಶಿಕ್ಷಣದ ಇತಿಹಾಸದಲ್ಲಿ ಇದೇ ಮೊದಲ ಬಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಸಿಬ್ಬಂದಿಗೆ ಪ್ರೊಫೆಸರ್‌ಗಳಾಗುವ ಅವಕಾಶ ದೊರೆಯಿತು.

ನೇಮಕಾತಿ ಅಕ್ರಮ ವರ್ಷ; ಜೈಲು ಸೇರಿದ ಎಡಿಜಿಪಿ: ಪಿಎಸ್‌ಐ, ಸಹಾಯಕ ಶಿಕ್ಷಕರು, ಪ್ರೌಢಶಾಲೆ ಸಹ ಶಿಕ್ಷಕರ ನೇಮಕಾತಿ ಅಕ್ರಮಗಳು 2022ರಲ್ಲಿ ಹೆಚ್ಚು ಸುದ್ದಿ ಮಾಡಿದವು. ಎಡಿಜಿಪಿ ಅಮ್ರಿತ್ ಪೌಲ್, ಕುಲಸಚಿವ ಪ್ರೊ. ಎಚ್.ನಾಗರಾಜ್, ಶಿಕ್ಷಣ ಇಲಾಖೆ ನಿರ್ದೇಶಕರಾದ ಎಂ.ಪಿ. ಮಾದೇಗೌಡ, ಗೀತಾ ಜೈಲು ಸೇರಿದ್ದರು. 545 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದ ಬಗ್ಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್, ಸಿಬ್ಬಂದಿ ಹಾಗೂ ಅಕ್ರಮದಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳು, ಮಧ್ಯವರ್ತಿಗಳಾಗಿದ್ದ ಹಾಲಿ ಡಿವೈಎಸ್ಪಿಗಳು, ಪಿಎಸ್‌ಐಗಳು ಬಂಧನಕ್ಕೊಳಗಾಗಿದ್ದರು. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹಗರಣ, ಪ್ರೌಢಶಾಲೆ ಸಹ ಶಿಕ್ಷಕರ 2012–13 ಹಾಗೂ 2014–15ನೇ ಸಾಲಿನ ನೇಮಕಾತಿ ಅಕ್ರಮಗಳು ಇದೇ ವರ್ಷ ಬೆಳಕಿಗೆ ಬಂದವು.

ಬೆಳಕಿಗೆ ಬಂದ ಮತದಾರರ ಅಕ್ರಮ ಸಮೀಕ್ಷೆ: ಮತದಾರರ ವೈಯಕ್ತಿಕ ಮಾಹಿತಿ ಕಳವು, ದುರ್ಬಳಕೆ ಆರೋಪದಡಿ 'ಚಿಲುಮೆ' ಸಂಸ್ಥೆ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಸಂಸ್ಥಾಪಕ ರವಿಕುಮಾರ್, ಶಿವಾಜಿನಗರದ ಕಂದಾಯ ಅಧಿಕಾರಿ ಸುಹೇಲ್ ಅಹಮದ್, ಮಹದೇವಪುರದ ಕಂದಾಯ ಅಧಿಕಾರಿ ಕೆ.ಚಂದ್ರಶೇಖರ್, ಚಿಕ್ಕಪೇಟೆಯ ಉಪ ಕಂದಾಯ ಅಧಿಕಾರಿ ವಿ.ಬಿ.ಭೀಮಾಶಂಕರ್ ಮತ್ತು ರಾಜರಾಜೇಶ್ವರಿ ನಗರದ ಕಂದಾಯ ಅಧಿಕಾರಿ ಮಹೇಶ್ ಸೇರಿ ಹಲವರನ್ನು ಬಂಧಿಸಲಾಯಿತು.

ಪರೀಕ್ಷಾ ಕಾರ್ಯಕ್ಕೆ ಒಂದೇ ಮಂಡಳಿ: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹೆಸರನ್ನು 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ' ಎಂದು ಬದಲಾಯಿಸಲಾಯಿತು. ಪ್ರೌಢ ಶಾಲೆಗಳ ಜತೆಗೆ, ಪದವಿಪೂರ್ವ ಪರೀಕ್ಷೆಗಳನ್ನೂ ಈ ಮಂಡಳಿ ನಿರ್ವಹಿಸಲಿದೆ.

₹ 100 ದೇಣಿಗೆ ಸದ್ದು, ಆದೇಶ ರದ್ದು: ರಾಜ್ಯದ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಅಗತ್ಯವಿರುವ ಖರ್ಚು–ವೆಚ್ಚಗಳಿಗಾಗಿ ಮಕ್ಕಳ ಪೋಷಕರಿಂದ ದೇಣಿಗೆ ರೂಪದಲ್ಲಿ ಪ್ರತಿ ತಿಂಗಳು ₹ 100 ಸಂಗ್ರಹಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ (ಎಸ್‌ಡಿಎಂಸಿ) ಅನುಮತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದರು. ಸರ್ಕಾರದ ಈ ನಡೆ ಶಿಕ್ಷಣದ ಮೂಲಭೂತ ಹಕ್ಕಿನ ಉಲ್ಲಂಘನೆ, ಕಡ್ಡಾಯ ಶಿಕ್ಷಣ ಹಕ್ಕು ಮೊಟಕುಗೊಳಿಸುವ ಹುನ್ನಾರ ಎಂದು ಶಿಕ್ಷಣ ತಜ್ಞರು, ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಒತ್ತಡಕ್ಕೆ ಮಣಿದ ಸರ್ಕಾರ ಸುತ್ತೋಲೆ ವಾಪಸ್ ಪಡೆಯಿತು.

ದಾವಣಗೆರೆಯ ಹೊರವಲಯದಲ್ಲಿ ಸಿದ್ದರಾಮಯ್ಯ ಅವರ ಜನ್ಮಮಹೋತ್ಸವ (ಅಮೃತ ಮಹೋತ್ಸವ) ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ

ಸಿದ್ದರಾಮಯ್ಯ ಅಮೃತ ಮಹೋತ್ಸವ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ 75 ಜನ್ಮದಿನೋತ್ಸವ ದಾವಣಗೆರೆಯಲ್ಲಿ ನಡೆಯಿತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಹಾಜರಾಗಿದ್ದ ಈ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು. ಕಾಂಗ್ರೆಸ್ ಶಕ್ತಿ ಪ್ರದರ್ಶನಕ್ಕೆ ಇದು ವೇದಿಕೆಯಾಯಿತು. ರಾಹುಲ್ ಗಾಂಧಿ ಹಮ್ಮಿಕೊಂಡಿದ್ದ ಭಾರತ್ ಜೋಡೊ ಯಾತ್ರೆ ಕರ್ನಾಟಕದಲ್ಲೂ ಸಾಗಿತು.

ಹಿಜಾಬ್ ವಿವಾದ

ಉಡುಪಿಯಲ್ಲಿ ಫೆಬ್ರುವರಿ ತಿಂಗಳಲ್ಲಿ ಹಿಜಾಬ್ ವಿವಾದ ಆರಂಭವಾಯಿತು. ರಾಜ್ಯ ಸರ್ಕಾರ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧಿಸಿ ಆದೇಶ ಹೊರಡಿಸಿತು.

ರಾಜ್ಯದ ಶಾಲಾ, ಕಾಲೇಜು ತರಗತಿಗಳಲ್ಲಿ ಹಿಜಾಬ್ ಧರಿಸಲು ಅನುಮತಿ ಕೋರಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಗಳನ್ನು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಜೆ.ಎಂ. ಖಾಜಿ ಅವರಿದ್ದ ತ್ರಿಸದಸ್ಯ ನ್ಯಾಯಪೀಠ ರದ್ದುಗೊಳಿಸಿ ತೀರ್ಪು ನೀಡಿತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ಸಂಬಂಧ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ವಿಭಿನ್ನ ತೀರ್ಪು ನೀಡಿದ ಕಾರಣ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿದೆ.

ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆಯನ್ನೂ ಸರ್ಕಾರ ಜಾರಿಗೆ ತಂದಿತು.

ಹಿಜಾಬ್ ಧರಿಸಿ ಕಾಲೇಜಿಗೆ ತೆರಳಲು ಅನುಮತಿ ನಿರಾಕರಿಸಿದ ಕ್ರಮವನ್ನು ಖಂಡಿಸಿ ಪ್ರತಿಭಟನೆ

ಪ್ರಮುಖ ಸುದ್ದಿಗಳು

- ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಪರಿಕಲ್ಪನೆ ಆಧಾರಿತ ಫಲಪುಷ್ಪ ಪ್ರದರ್ಶನ ಆಗಸ್ಟ್‌ನಲ್ಲಿ ನಡೆಯಿತು.
- ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಭಾರತ್ ಗೌರವ್ ಕಾಶಿ ದರ್ಶನ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 11ರಂದು ಚಾಲನೆ ನೀಡಿದರು.
- ಅದೇ ದಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ –2 ಉದ್ಘಾಟನೆಯನ್ನು ಪ್ರಧಾನಿ ನರೇಂದ್ರ ಮೋದಿ ನೆರವೇರಿಸಿದರು. ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆಯನ್ನೂ ಉದ್ಘಾಟಿಸಿದರು.
- ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯವು 89 ವರ್ಷಗಳ ಬಳಿಕ ಸೆಪ್ಟೆಂಬರ್ ತಿಂಗಳಲ್ಲಿ ಭರ್ತಿಯಾಯಿತು.
- ಮಂಗಳೂರಿನ ಗರೋಡಿ ಬಳಿ ಕುಕ್ಕರ್ ಬಾಂಬ್ ಸ್ಫೋಟವಾಯಿತು.

ವಾಣಿ ವಿಲಾಸ ಸಾಗರ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು



ಮುಂಬೈ ಅನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕು ಎಂಬ ಸಚಿವ ಅಶ್ವತ್ಥನಾರಾಯಣ ಅವರ ಹೇಳಿಕೆ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕೋಮು ಹತ್ಯೆ, ಸಂಘರ್ಷಗಳು

ರಾಜ್ಯದ ಕರಾವಳಿ, ಮಲೆನಾಡಿನಲ್ಲಿ ಕೋಮು ಸಂಘರ್ಷ, ಹತ್ಯೆಗಳು 2022ರಲ್ಲೂ ಘಟಿಸಿದವು. ವರ್ಷದ ಆರಂಭದಲ್ಲಿ ಶಿವಮೊಗ್ಗದಲ್ಲಿ ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಯಾಯಿತು, ನಂತರ ಗಲಭೆಗಳು ನಡೆದವು. ದಕ್ಷಿಣ ಕನ್ನಡದಲ್ಲಿ ಜುಲೈನಲ್ಲಿ ಮೊಹಮ್ಮದ್ ಮಸೂದ್, ಬಿಜೆಪಿ ಯುವಮೋರ್ಚಾ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು, ಸುರತ್ಕಲ್‌ನಲ್ಲಿ ಮೊಹಮ್ಮದ್ ಫಾಝಿಲ್ ಹತ್ಯೆ, ಡಿಸೆಂಬರ್‌ನಲ್ಲಿ ಸುರತ್ಕಲ್ ಸಮೀಪದ ಕಾಟಿಪಳ್ಳ ಕೃಷ್ಣಾಪುರದಲ್ಲಿ ಅಬ್ದುಲ್ ಜಲೀಲ್ ಹತ್ಯೆಗಳು ನಡೆದವು.

ರಾಜ್ಯದ ಕೆಲವೆಡೆ ಜಾತ್ರೆ, ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಆಜಾನ್- ಭಜನೆ ಸಂಘರ್ಷಕ್ಕೂ ರಾಜ್ಯ ಸಾಕ್ಷಿಯಾಯಿತು.

2022: ಯುದ್ಧ, ಆಂತರಿಕ ಬಿಕ್ಕಟ್ಟು, ದಂಗೆ

2022 ವಿಶ್ವದ ಬಹುತೇಕ ದೇಶಗಳು ಆಂತರಿಕ ಕ್ಷೋಭೆ, ಯುದ್ಧಗಳಿಗೆ ಸಾಕ್ಷಿಯಾದ ವರ್ಷ. ಫೆಬ್ರುವರಿಯಲ್ಲಿ ಆರಂಭವಾದ ರಷ್ಯಾ–ಉಕ್ರೇನ್ ಯುದ್ಧ ಇನ್ನೂ ಮುಗಿದಿಲ್ಲ. ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಬಗೆಹರಿದಿಲ್ಲ. ಪಾಕಿಸ್ತಾನ ಪ್ರವಾಹ, ಅಮೆರಿಕದ ಹಿಮಮಾರುತ, ಇಂಡೊನೇಷ್ಯಾದ ಕಾಲ್ತುಳಿತ... ಹೀಗೆ ಪ್ರಕೃತಿ ವಿಕೋಪಗಳು ಮತ್ತು ದುರಂತಗಳ ಸಾಲು ಪಟ್ಟಿ ಮಾಡಿದರೆ ಮುಗಿಯುವುದಿಲ್ಲ

ಜನವರಿ

3: ಪ್ರಜಾಪ್ರಭುತ್ವ ಪರ ಪ್ರತಿಭಟನೆಯಿಂದಾಗಿ ಸುಡಾನ್ ಪ್ರಧಾನಿ ಅಬ್ದುಲ್ಲಾ ಹ್ಯಾಮ್‌ಡೋಕ್ ರಾಜೀನಾಮೆ.

21: ಯೆಮೆನ್‌ನ ಹೂತಿ ಬಂಡುಕೋರರಿಂದ ಜೈಲಿನ ಮೇಲೆ ವೈಮಾನಿಕ ದಾಳಿ: 100ಕ್ಕೂ ಹೆಚ್ಚು ಕೈದಿಗಳ ಮರಣ.

29: ಭಾರತವು ಇಸ್ರೇಲ್‌ನಿಂದ ಪೆಗಾಸಸ್ ಬೇಹುಗಾರಿಕೆ ಕುತಂತ್ರಾಂಶ ಖರೀದಿಸಿರುವುದಾಗಿ 'ದಿ ನ್ಯೂಯಾರ್ಕ್ ಟೈಮ್ಸ್' ವರದಿ.

ಫೆಬ್ರುವರಿ

3: ಪೆಗಾಸಸ್ ಕುತಂತ್ರಾಂಶ ಖರೀದಿ ದೃಢಪಡಿಸಿದ ಅಮೆರಿಕದ ಎಫ್‌ಬಿಐ.

22-24: ಉಕ್ರೇನ್‌ನ ಡೊನೆಸ್ಕ್, ಲುಹಾನ್ಸ್ಕ್‌ನಲ್ಲಿ ರಷ್ಯಾ ಸೇನೆ ಜಮಾವಣೆ. ಉಕ್ರೇನ್‌ನಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಘೋಷಣೆ. 24ರಂದು ಉಕ್ರೇನ್ ಮೇಲೆ ಯುದ್ಧ ಸಾರಿದ ರಷ್ಯಾ.

ಕೀವ್ ನಗರದ ಮೇಲೆ ರಷ್ಯಾ ನಡೆಸಿದ ದಾಳಿಯಲ್ಲಿ ಗಾಯಗೊಂಡವರನ್ನು ಉಕ್ರೇನ್‌ನ ಸೈನಿಕರು ಸ್ಥಳಾಂತರಿಸಿದರು—ಎಎಫ್‌ಪಿ ಚಿತ್ರ

ಮಾರ್ಚ್

1: ರಷ್ಯಾ ನಡೆಸಿದ ಶೆಲ್ ದಾಳಿಯಲ್ಲಿ ಉಕ್ರೇನ್‌ನ ಹಾರ್ಕಿವ್ ನಗರದಲ್ಲಿ ನೆಲೆಸಿದ್ದ ಹಾವೇರಿಯ ವೈದ್ಯ ವಿದ್ಯಾರ್ಥಿ ನವೀನ್ ಗ್ಯಾನಗೌಡರ್ ಸಾವು.

2: ಯುದ್ಧ ಬಿಕ್ಕಟ್ಟು ಮತ್ತಷ್ಟು ಜಟಿಲ. ಉಕ್ರೇನ್ ತೊರೆಯುವಂತೆ ಭಾರತೀಯ ನಾಗರಿಕರಿಗೆ ರಾಯಭಾರ ಕಚೇರಿಯ ಸೂಚನೆ.

15: ಕೀವ್‌ಗೆ ಭೇಟಿ ನೀಡಲು ನ್ಯಾಟೊ ಸದಸ್ಯ ರಾಷ್ಟ್ರಗಳ ಪ್ರಧಾನಿಗಳ ನಿರ್ಧಾರ.

ಏಪ್ರಿಲ್

5: ಪಾಕಿಸ್ತಾನದಲ್ಲಿ ಸಾಂವಿಧಾನಿಕ ಬಿಕ್ಕಟ್ಟು. ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ ಅವಿಶ್ವಾಸ ನಿಲುವಳಿ ತಿರಸ್ಕಾರ.

10-11: ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ಸರ್ಕಾರ ಪತನ. ನೂತನ ಪ್ರಧಾನಿಯಾಗಿ ಶಹಬಾಜ್ ಷರೀಫ್ ಆಯ್ಕೆ.

ಮೇ

6-12: ಶ್ರೀಲಂಕಾದಲ್ಲಿ ಹದಗೆಟ್ಟ ಆರ್ಥಿಕತೆ. ಸರ್ಕಾರದ ವಿರುದ್ಧ ಪ್ರತಿಭಟನೆ ತೀವ್ರ. ಕಾನೂನು ಸುವ್ಯವಸ್ಥೆ ಕಾಪಾಡಲು ಸೇನೆಗೆ ಸಂಪೂರ್ಣ ಅಧಿಕಾರ. ಸಂಸದ ಅಮರಕೀರ್ತಿ ಅಥುಕೊರಾಲ ಹತ್ಯೆ. ಪ್ರಧಾನಿ ಹುದ್ದೆಗೆ ಮಹಿಂದಾ ರಾಜಪಕ್ಸ ರಾಜೀನಾಮೆ. ಸಂಪುಟ ವಿಸರ್ಜನೆ. ಪ್ರಧಾನಿಯಾಗಿ ರಾನಿಲ್ ವಿಕ್ರಮಸಿಂಘೆ ಪ್ರಮಾಣ ವಚನ ಸ್ವೀಕಾರ.

13-14: ಯುಎಇ ಅಧ್ಯಕ್ಷ ಶೇಖ್ ಖಲೀಫಾ ಬಿನ್ ಜಾಯೇದ್ ಅಲ್ ನಹ್ಯಾನ್ ನಿಧನ. ಹೊಸ ಅಧ್ಯಕ್ಷರಾಗಿ ಯುವರಾಜ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಆಯ್ಕೆ.

ಜುಲೈ

5-6: ಬ್ರಿಟನ್‌ನ ಹಣಕಾಸು ಸಚಿವ ರಿಷಿ ಸುನಕ್ ರಾಜೀನಾಮೆ. ಕನ್ಸರ್ವೇಟಿವ್ ಪಕ್ಷದ ನಾಯಕತ್ವಕ್ಕೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ರಾಜೀನಾಮೆ.

8- ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಹತ್ಯೆ. ಪಶ್ಚಿಮ ಜಪಾನ್‌ನ ನಾರಾ ಪಟ್ಟಣದಲ್ಲಿ ಭಾಷಣ ಮಾಡುತ್ತಿದ್ದಾಗ ಹಂತಕನ ಗುಂಡಿಗೆ ಬಲಿ.

ಶಿಂಜೊ ಅಬೆ

9-22: ಶ್ರೀಲಂಕಾದಲ್ಲಿ ನಾಗರಿಕ ದಂಗೆ. ಅಧ್ಯಕ್ಷ ಗೊಟಬಯ ರಾಜಪಕ್ಸ ನಿವಾಸಕ್ಕೆ ತೆರಳಿ ದಾಂಧಲೆ. ಗೊಟಬಯ ರಾಜೀನಾಮೆ. ಶ್ರೀಲಂಕಾ ಅಧ್ಯಕ್ಷರಾಗಿ ರಾನಿಲ್ ವಿಕ್ರಮ ಸಿಂಘೆ ಆಯ್ಕೆ. ದಿನೇಶ್ ಗುಣವರ್ಧನ ನೂತನ ಪ್ರಧಾನಿ

ಆಗಸ್ಟ್

2: ಅಮೆರಿಕದಿಂದ ಅಲ್ ಕೈದಾ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿ ಹತ್ಯೆ.

12: ಲೇಖಕ ಸಲ್ಮಾನ್ ರಶ್ದಿ ಹತ್ಯೆ ಯತ್ನ.

27: ಪಾಕಿಸ್ತಾನದಲ್ಲಿ ಭಾರಿ ಮಳೆ. ಪ್ರವಾಹಕ್ಕೆ ಸಿಲುಕಿ 937 ಸಾವು.

ಸೆಪ್ಟೆಂಬರ್

5: ಬ್ರಿಟನ್ ಪ್ರಧಾನಿಯಾಗಿ ಲಿಜ್ ಟ್ರಸ್ ಆಯ್ಕೆ.

8-10 ಬ್ರಿಟನ್ ರಾಣಿ 2ನೇ ಎಲಿಜಬೆತ್ ನಿಧನ. ರಾಜನಾಗಿ 3ನೇ ಚಾರ್ಲ್ಸ್ ಅಧಿಕಾರ ಸ್ವೀಕಾರ.

2ನೇ ಎಲಿಜಬೆತ್

19: ಹಿಜಾಬ್ ಧರಿಸದ್ದಕ್ಕಾಗಿ ನೈತಿಕ ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದ 22 ವರ್ಷದ ಯುವತಿ ಸಾವು. ಇರಾನ್‌ನಲ್ಲಿ ತೀವ್ರ ಪ್ರತಿಭಟನೆ.

ಅಕ್ಟೋಬರ್

1: ಫುಟ್‌ಬಾಲ್ ಪಂದ್ಯದ ವೇಳೆ ಗಲಭೆ. ಇಂಡೊನೇಷ್ಯಾದಲ್ಲಿ ಕಾಲ್ತುಳಿತಕ್ಕೆ 125 ಮಂದಿ ಸಾವು.

5: ಫ್ರಾನ್ಸ್‌ನ ಲೇಖಕಿ ಆ್ಯನಿ ಎರ್ನೊಗೆ ನೊಬೆಲ್ ಗೌರವ.

10: ಅರ್ಥಶಾಸ್ತ್ರಜ್ಞರಾದ ಬೆನ್ ಎಸ್ ಬೆರ್ನಾನ್ಕೆ, ಡಗ್ಲಾಸ್ ಡಬ್ಲ್ಯು ಡೈಮಂಡ್ ಮತ್ತು ಫಿಲಿಪ್ ಎಚ್ ಡೈಬ್‌ವಿಗ್‌ಗೆ ನೊಬೆಲ್ ಗರಿ.

20-24: ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ರಾಜೀನಾಮೆ.

ರಿಷಿ ಸುನಕ್

ನೂತನ ಪ್ರಧಾನಿಯಾಗಿ ರಿಷಿ ಸುನಕ್ ನೇಮಕ.

ನವೆಂಬರ್

3: ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮೇಲೆ ದಾಳಿ. ಕಾಲಿಗೆ ತಗುಲಿದ ಗುಂಡು.

16: ಭಾರತಕ್ಕೆ 2023ನೇ ಸಾಲಿನ ಜಿ-20 ಗುಂಪಿನ ಅಧ್ಯಕ್ಷತೆ ಹಸ್ತಾಂತರ.

21: ಇಂಡೊನೇಷ್ಯಾದ ಪಶ್ಚಿಮ ಜಾವಾ ಪ್ರಾಂತ್ಯದಲ್ಲಿ ಪ್ರಬಲ ಭೂಕಂಪ- 162 ಮಂದಿ ಸಾವು. 700ಕ್ಕೂ ಅಧಿಕ ಜನರಿಗೆ ಗಾಯ.

ಡಿಸೆಂಬರ್

1: ಜಿ-20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡ ಭಾರತ.

4: ಇಂಡೊನೇಷ್ಯಾದ ಜಾವಾ ಅಗ್ನಿಪರ್ವತ ಸೆಮೆರುವಿನಲ್ಲಿ ಜ್ವಾಲಾಮುಖಿ ಸ್ಫೋಟ.

16: ಐರ್ಲೆಂಡ್ ಪ್ರಧಾನಿಯಾಗಿ ಲಿಯೋ ವರಾಡ್ಕರ್ ನೇಮಕ.

23: ನೇಪಾಳ ಜೈಲಿನಿಂದ ಸರಣಿ ಹಂತಕ ಚಾರ್ಲ್ಸ್ ಶೋಭರಾಜ್ ಬಿಡುಗಡೆ.

23: 'ಬಾಂಬ್ ಸೈಕ್ಲೋನ್' ಶೀತ ಮಾರುತಕ್ಕೆ ಅಮೆರಿಕ ತತ್ತರ. ಹತ್ತಾರು ಜನರ ಸಾವು.

25: ನೇಪಾಳ ಪ್ರಧಾನಿಯಾಗಿ ಪುಷ್ಪ ಕಮಲ್ ದಹಲ್ (ಪ್ರಚಂಡ) ನೇಮಕ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮರುಜನ್ಮ

ಜ್ವರ ಬಂದು ತನು ಬೆಂದ ಯಾತನೆಯ ಮಾತೇನು ?
|ಉರಿಬೇಗೆಯಿಳಿಯೆ ಹೊಸ ಹೊಸಬನಾ ನರನು ||
ಕರಣತಪನೆಗಳಿಳಿಯೆ, ಕಾರಣವದೇನಿರಲಿ |
ಮರುಜನ್ಮವಾತ್ಮಂಗೆ – ಮಂಕುತಿಮ್ಮ || 788 ||

ಪದ-ಅರ್ಥ: ಉರಿಬೇಗೆಯಿಳಿಯೆ = ಉರಿಬೇಗೆ (ತೀವ್ರಜ್ವರ) + ಇಳಿಯೆ, ಹೊಸಬನಾ = ಹೊಸಬನು + ಆ, ಕರಣತಪನೆಗಳಿಳಿಯೆ = ಕರಣ(ಇಂದ್ರಿಯ) + ತಪನೆ(ತಾಪ)ಗಳನ್ನು + ಇಳಿಯೆ, ಕಾರಣವದೇನಿರಲಿ = ಕಾರಣವು + ಅದೇನು + ಇರಲಿ, ಮರುಜನ್ಮವಾತ್ಮಂಗೆ = ಮರುಜನ್ಮ(ಪುನರ್ಜನ್ಮ) + ಆತ್ಮಂಗೆ(ಆತ್ಮನಿಗೆ)

ವಾಚ್ಯಾರ್ಥ: ಜ್ವರ ಬಂದಾಗ, ದೇಹ ಬೆಂದು ಆದ ಯಾತನೆಯು ತುಂಬ ಹೆಚ್ಚು. ಆದರೆ ತೀವ್ರವಾದ ಜ್ವರ ಇಳಿದ ಮೇಲೆ ಮನುಷ್ಯ ಹೊಸದಾಗಿರುವಂತೆ ಚುರುಕಾಗುತ್ತಾನೆ. ಅದಾವ ಕಾರಣಕ್ಕೋ, ಇಂದ್ರಿಯಗಳ ತಾಪ ಇಳಿದಾಗ ಮನುಷ್ಯನಿಗೆ ಪುನರ್ಜನ್ಮವಾದಂತೆ.

ವಿವರಣೆ: ನಮಗೆಲ್ಲ ಅಂಗುಲಿಮಾಲನ ಕಥೆ ಗೊತ್ತಿದೆ. ಅವನದೊಂದು ವಿಚಿತ್ರವಾದ ಆದರೆ ಕ್ರೂರ ವ್ರತ. ಸಾವಿರ ಜನರನ್ನು ಕೊಂದುಬಿಡುತ್ತೇನೆ ಎಂದು ತೀರ್ಮಾನಿಸಿದ. ಲೆಕ್ಕ ಇಡುವುದು ಹೇಗೆ? ತಾನು ಕೊಂದವರ ತೋರುಬೆರಳುಗಳನ್ನು ಕತ್ತರಿಸಿ, ದಾರದಲ್ಲಿ ಪೋಣಿಸಿ ಕೊರಳಲ್ಲಿ ಹಾಕಿಕೊಂಡಿದ್ದ. ಅದಕ್ಕೇ ಅವನು ಅಂಗುಲಿಮಾಲ- ತೋರುಬೆರಳುಗಳ ಮಾಲೆ ಹಾಕಿಕೊಂಡವನು. ಒಮ್ಮೆ ಭಗವಾನ್ ಬುದ್ಧ, ಅಂಗುಲಿಮಾಲನಿದ್ದ ಕಾಡಿನ ಪ್ರದೇಶಕ್ಕೆ ಬಂದ. ಕತ್ತಿ ಹಿರಿದು ನಿಂತಿದ್ದ ಕ್ರೂರಿಯನ್ನು ಪ್ರೇಮ ತುಂಬಿದ ಕಣ್ಣುಗಳಿಂದ ಸೋಲಿಸಿ ಗೆದ್ದ. ಅಂಗುಲಿಮಾಲ ಬುದ್ಧನಿಗೆ ಶರಣಾದ. ಇದು ನಮಗೆ ಸಾಮಾನ್ಯವಾಗಿ ತಿಳಿದ ಕಥೆ. ಮುಂದೇನಾಯಿತು ಎನ್ನುವುದು ಮುಖ್ಯ. ಅಂಗುಲಿಮಾಲ ಬುದ್ಧನ ಶಿಷ್ಯನಾಗಿ ಅವನನ್ನು ಹಿಂಬಾಲಿಸಲು ಬೇಡಿದ. ಬುದ್ಧ ಹೇಳಿದ, "ಈಗಲೇ ಬರುವುದು ಬೇಡ.

ನೀನು ಈ ಪ್ರದೇಶದ ಹಳ್ಳಿಗಳಲ್ಲಿ ಮೂರು ವರ್ಷ ಜನರ ಸೇವೆ ಮಾಡು. ನಂತರ ನನ್ನ ಬಳಿಗೆ ಬರುವಿಯಂತೆ". ಅಂಗುಲಿಮಾಲ ಹೌಹಾರಿದ. "ಪ್ರಭೂ, ನಾನಿಲ್ಲಿಯ ಅನೇಕರನ್ನು ಕೊಂದಿದ್ದೇನೆ. ಅವರು ನನ್ನನ್ನು ಬಿಟ್ಟಾರೆಯೇ? ಸತ್ತವರ ಮಕ್ಕಳು, ಸಂಬಂಧಿಕರಿಗೆ ನನ್ನ ಮೇಲೆ ಅಸಾಧ್ಯ ಕೋಪವಿದೆ. ಅವರ ಮಧ್ಯೆ ನಾನು ಹೇಗೆ ಬದುಕಲಿ?". "ಅದು ನಿನ್ನ ಕರ್ಮ. ಅದನ್ನು ಸವೆಸಲೇ ಬೇಕು. ಅವರು ನಿನಗೆ ಹೊಡೆದರೂ, ಶಿಕ್ಷಿಸಿದರೂ ನೀನು ತಾಳ್ಮೆ ಕಳೆದುಕೊಳ್ಳದೆ ಪ್ರೀತಿಯಿಂದ ಅವರ ಸೇವೆ ಮಾಡು" ಎಂದು ಹೇಳಿ ನಡೆದ ಬುದ್ಧ. ಅಂಗುಲಿಮಾಲ ಸುತ್ತಲಿನ ಹಳ್ಳಿಗಳಿಗೆ ನಡೆದ. ಜನ ಅವನಿಗೆ ಹೊಡೆದರು. ಹಣೆಯ ಮೇಲೆ ರಕ್ತ ಚಿಮ್ಮಿತು, ಮೈಮೇಲೆ ಬಾಸುಂಡೆಗಳು ಮೂಡಿದವು. ಅನೇಕ ದಿನ ಊಟವಿಲ್ಲದೆ ಇದ್ದ. ಸೇವೆಯನ್ನು ಬಿಡಲಿಲ್ಲ. ದಿನಗಳೆದಂತೆ ಜನ ಅವನಲ್ಲಿ ಆದ ಪರಿವರ್ತನೆಯನ್ನು ಕಂಡರು, ಸೇವೆಯನ್ನು ಮೆಚ್ಚಿದರು. ಮೂರು ವರ್ಷಗಳಲ್ಲಿ ಆತ ತ್ಯಾಗದ, ಸೇವೆಯ, ಪ್ರೇಮದ ಪ್ರತಿಮೂರ್ತಿಯೇ ಆದ. ಆಗ ಬುದ್ಧ ಬಂದು ಅವನನ್ನು ಕರೆದೊಯ್ದು ತನ್ನ ಪ್ರಮುಖ ಶಿಷ್ಯರಲ್ಲಿ ಒಬ್ಬನನ್ನಾಗಿಸಿದ. ಇದು ಒಂದು ಜೀವ ಸಂಪೂರ್ಣ ಪರಿವರ್ತನೆಯನ್ನು ಹೊಂದಿದ ಕಥೆ. ಜ್ವರ ಬಂದು ಇಳಿದ ಮೇಲೆ ದೇಹ ಹಗುರಾಗಿ ಹೊಸ ಚೈತನ್ಯ ಬರುತ್ತದೆ. ಹಾಗೆಯೇ ಯಾವುದೇ ಕಾರಣದಿಂದ ಇಂದ್ರಿಯಗಳ ತಾಪ ಇಳಿದು ಹೋದರೆ ಅದೊಂದು ಮರುಜನ್ಮವಿದ್ದಂತೆ. ಕ್ರೂರತೆಯನ್ನು, ಕಾಮವನ್ನು ಜೀವನದ ಮಾರ್ಗವನ್ನಾಗಿಯೇ ಮಾಡಿಕೊಂಡಿದ್ದ ಅಂಗುಲಿಮಾಲ, ಬುದ್ಧದರ್ಶನದ ಅಮೃತ ಕ್ಷಣದಲ್ಲಿ ಅವನ್ನೆಲ್ಲ ನೀಗಿಕೊಂಡು ಸಂತನಾಗಿ ಪುನರ್ಜನ್ಮ ಪಡೆದಂತೆ. ಇದೇ ಕಗ್ಗದ ಧ್ವನಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಡಿಸೆಂಬರ್ 29, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಸಪ್ತಮಿ ಗಂ. 19-18 ನಕ್ಷತ್ರ: ಪೂರ್ವಾಭಾದ್ರಾ ಗಂ. 11-44 ಯೋಗ: ವ್ಯತೀಪಾತ ಗಂ. 11-46, ಕರಣ: ಗರಜೆ ಗಂ. 07-56, ಧನುರ್ ಮಾಸದ 13 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30–03-00, ಸೂರ್ಯೋದಯ : 06-56 ಸೂರ್ಯಾಸ್ತ : 06-09, ಮುಸ್ಲಿಂ ದಿನಾಂಕ : 05 ಜುಮಾದುಸ್ಸಾನಿ
ದಿನ ವಿಶೇಷ : ಗುರುಗೋವಿಂದ ಸಿಂಗ್‌ರವರ ಜನ್ಮ ದಿನ
ಅದೃಷ್ಟ ಸಂಖ್ಯೆ : 8, 12

ಮೇಷ: ಯಾವುದೇ ಹೊಸ ವ್ಯಕ್ತಿಗಳಿಂದ ಪ್ರಚೋದನೆಗೆ ಒಳಗಾಗದಿರಿ. ಶರೀರದಲ್ಲಿ ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿಯನ್ನು ಹೊಂದುತ್ತಿರಿ. ಮನಸ್ಸಿಗೆ ನೆಮ್ಮದಿ ಕಾಣುವಿರಿ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯುವುದು.

ವೃಷಭ: ಮನೆಯವರು ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ಈ ದಿನ ಹೆಂಡತಿ ಆರೋಗ್ಯ ಸುಧಾರಿಸುತ್ತದೆ. ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ.

ಮಿಥುನ: ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ಪ್ರಯತ್ನ ಬಲಕ್ಕೆ ಉತ್ತಮ ಫಲ. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆ ಯಾಗುವುದು. ಭೂಮಿ ಖರೀದಿ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂತು.

ಕರ್ಕಾಟಕ: ಆಹಾರ ಶೈಲಿಯು ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದ ಈ ದಿನ ನಿರುತ್ಸಾಹಿಯಾಗಿರುತ್ತೀರಿ. ಆಹಾರದಲ್ಲಿ ಪತ್ಯವನ್ನು ಮತ್ತು ಶುಚಿತ್ವವನ್ನು ಕಾಪಾಡಿಕೊಳ್ಳಿರಿ.

ಸಿಂಹ: ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂತಹ ಕಾರ್ಯಗಳ ಸಂಭವವಿದೆ. ಈತರಹದ ವಿಷಯದಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕಾಲ ಒದಗಿ ಬಂದಿದೆ.

ಕನ್ಯಾ: ಕ್ರಯ ವಿಕ್ರಯಗಳಿಗೆ ಇದು ಉತ್ತಮ ಕಾಲ. ಸಾಧ್ಯವಾದಷ್ಟು ಸಮಾಧಾನ ತಾಳ್ಮೆಯಿಂದ ಮುಂದುವರದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ಆರ್ಥಿಕವೃದ್ಧಿ, ಆರೋಗ್ಯವೃದ್ಧಿ, ಅಕಸ್ಮಿಕ ಧನ ಯೋಗ ಈ ದಿನದಲ್ಲಿದೆ.

ತುಲಾ: ಗೊಂದಲದಲ್ಲಿ ಸಿಕ್ಕಿರುವ ನಿಮಗೆ ಈ ದಿನ ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದ ಒಳ್ಳೆಯ ಫಲಿತಾಂಶ ಪಡೆಯುವಿರಿ. ದಂತ ವೈದ್ಯರಿಗೆ ಲಾಭದಾಯಕ ದಿನ. ಲೇವಾದೇವಿ ವ್ಯವಹಾರದಲ್ಲಿ ಜಾಗ್ರತೆ ಇರಲಿ.

ವೃಶ್ಚಿಕ: ಹರಿತವಾದ ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು, ಹೆಚ್ಚಿನ ಗಮನದಿಂದ ಕೆಲಸ ಮಾಡಿ. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿಗೆ ಗಮನ ಕೊಡಿ.

ಧನು: ದೇವರ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು. ಸಿವಿಲ್ ಎಂಜಿನಿಯರ್‌ಗೆ ಲಾಭದಾಯಕದ ದಿನ. ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ.

ಮಕರ: ಮುಕ್ತಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಳ್ಳಿರಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಅಧಿಕವಾಗಿರಲಿದೆ. ವಿದ್ಯಾರ್ಥಿವರ್ಗಕ್ಕೆ ತಮ್ಮ ಅಭ್ಯಾಸದಲ್ಲಿ ಹೆಚ್ಚಿನ ಸಾಧನೆ ಮಾಡಲು ಅವಕಾಶ ಸಿಗಲಿದೆ.

ಕುಂಭ: ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ ಅಥವಾ ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ನಿಮ್ಮ ಕ್ರಿಯೆಯನ್ನು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಸ್ವತ್ತು ಖರೀದಿಯ ವಿಚಾರದಲ್ಲಿ ಬಂಧುಗಳು ನೆರವಿಗೆ ಬರುವರು.

ಮೀನ: ಬೇರೆಯವರ ಬಗ್ಗೆ ಅನುಕಂಪ ತೋರುವ ಬಗ್ಗೆಯೂ ಗಮನ ಹರಿಸುವುದನ್ನು ಮರೆಯದಿರಿ. ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸುವಂತೆ ತಿಳಿ ಹೇಳಬೇಕಾದ ಪರಿಸ್ಥಿತಿ ಇದೆ.

ಪದಬಂಧ 5183

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೆಲ ಅಥವಾ ಬೆಟ್ಟದಲ್ಲಿ ಕೊರೆದ ಗುಪ್ತದಾರಿ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ಕಳೆಯುವ ಲೆಕ್ಕ (5)
7.ವಿಷ್ಣುವಿನ ವಾಹನ (3)
8.ಇದಂತೂ ಕೆಲಸಕ್ಕೆ ಬಾರದ ಮಾತು (5)
10.ಬಯಲಲ್ಲಿ ತೋಡಿಕೊಂಡಿರುವ ಆಸೆ (3)
11.ಅದೇ ತಾನೆ ಲಗ್ನವಾದ ಗಂಡ ಹೆಂಡತಿ (5)
14.ಸುಗಂಧಯುಕ್ತ ಜಲ (3)
15.ಈತ ಕೊಳ್ಳೆ ಹೊಡೆಯುವವನು (5)

ಮೇಲಿಂದ ಕೆಳಕ್ಕೆ
1.ಕೇಳಲು ಹಿತಕರವಾದುದು (3)
2.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
4.ತಂಡದಲ್ಲಿದ್ದಾಗ ಅರ್ಥವಿಲ್ಲದ ಮಾತು! (3)
6.ಸೊಗಸಾಗಿಯೂ ಕಾಣುತ್ತಿರುವ ಶುಭಚಿಹ್ನೆ (3)
7.ಜಾಗಟೆ ಸದ್ದಿಗೇ ಈ ಗೊಂದಲ! (3)
8.ಧಾನ್ಯ ಕುಟ್ಟಲು ಬಳಸುತ್ತಿದ್ದ ಸಾಧನ (3)
9.ವಾಚಾಳಿಯಿಲ್ಲಿ ತಿರುಗಿ ನಿಂತಿದ್ದಾನೆ (3)
10.ಸ್ಲೇಟಿನ ಮೇಲೆ ಬರೆಯಲು ಬಳಸುವ ಸಾಧನ (3)
12.ದಂಗೆಯೊಳಗೆ ಪಲ್ಲಕ್ಕಿ ಕಾಣುತ್ತಿದೆಯೇ? (3)
13.ತೀರದಲ್ಲೆಲ್ಲಾ ಕವಿದಿರುವ ಅಂಧಕಾರ (3)



5182ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮದುಮಗ 3.ಒಡ್ಡೋಲಗ 5.ಜುಲುಮೆ 6.ರಿಕಾಪು 8.ದುರುಳ 9.ನಿಮೇಷ 10.ನಗದು 12.ಸಂಭಾವ್ಯ 14.ರಣಭೇರಿ 15.ನತದೃಷ್ಟ

ಮೇಲಿಂದ ಕೆಳಕ್ಕೆ:
1.ಮದಕರಿ 2.ಗಲೀಜು 3.ಒಲುಮೆ 4.ಗಟ್ಟಿಕುಳ 7.ಪುರುಷ 8.ದುಮ್ಮಾನ 9.ನಿರುತ್ತರ 11.ದುರಾದೃಷ್ಟ 12.ಸಂಚಾರಿ 13.ವ್ಯಸನ

ಸುಡೊಕು 5569

	2			5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5568 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,132
ಇಂದಿನ ಅಂತ್ಯ	18,122
▼	10
ದಿನದ ಕನಿಷ್ಠ	18,068

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1300 (1275)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹960 (938)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2500
ಮಧ್ಯಮ	₹1500-1800
ಸಣ್ಣ	₹1000-1500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹456-675
ದ್ವಿತಳಿ (ಬಿ.ವಿ)	₹563-805

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹132
ಆರ್‌ಎಸ್‌ಎಸ್-5	₹124
ಗುಡ್ ಲಾಟ್	₹118

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13500
ಎಸಿ	₹6950
ಆರ್‌ಪಿ	₹8000
ಆರ್‌ಸಿ	₹4510

ಮುಂಬೈ ಧಾರಣೆ

ಶೇಂಗಾ

28–12–2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	12375 (1175)
ಪಾಮ್ ವಾರದ ಡೆಲಿವರಿ	965 (936)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1220)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

54,350 (54,150)

ಬೆಳ್ಳಿ ಕೆ.ಜಿ 67,850 (67,750)

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಡಾ. ಎನ್. ಕೃಷ್ಣಪ್ಪ

ಎಂ.ಬಿ.ಬಿ.ಎಸ್, ಎಂ.ಎಸ್.(ಆರ್ಥೋ)

29-12-2008

ಇಂತಿ : ಕುಟುಂಬವರ್ಗದವರು

ಸಂಕ್ಷಿಪ್ತ ಸುದ್ದಿ

ವಿಶ್ರಾಂತ ಪೋಪ್ 16ನೇ ಬೆನೆಡಿಕ್ಟ್ ಸ್ಥಿತಿ ಗಂಭೀರ

ವ್ಯಾಟಿಕನ್ ಸಿಟಿ (ಎಪಿ): ವಿಶ್ರಾಂತ ಪೋಪ್, 95 ವರ್ಷದ 16ನೇ ಬೆನೆಡಿಕ್ಟ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ವೈದ್ಯರು ತೀವ್ರ ನಿಗಾ ವಹಿಸಿದ್ದಾರೆ ಎಂದು ವ್ಯಾಟಿಕನ್ ವಕ್ತಾರರು ಬುಧವಾರ ತಿಳಿಸಿದ್ದಾರೆ.

'ಪೋಪ್ ಫ್ರಾನ್ಸಿಸ್ ಬುಧವಾರ ಬೆನೆಡಿಕ್ಟ್ ಅವರ ನಿವಾಸಕ್ಕೆ ಭೇಟಿ ನೀಡಿದರು. ಬಳಿಕ ಬೆನೆಡಿಕ್ಟ್ ಅವರ ಆರೋಗ್ಯ ಚೇತರಿಕೆಗೆ ಪ್ರಾರ್ಥನೆ ಸಲ್ಲಿಸಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ. , ವೈದ್ಯರು ಬೆನೆಡಿಕ್ಟ್ ಅವರ ಆರೋಗ್ಯದ ಮೇಲೆ ತೀವ್ರ ನಿಗಾ ವಹಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಜುಗಡ್ಡೆ ಕುಸಿತ 3 ಭಾರತೀಯ ಅಮೆರಿಕನ್ನರ ಸಾವು

ವಾಷಿಂಗ್ಟನ್ (ಪಿಟಿಐ): ಹೆಪ್ಪುಗಟ್ಟಿದ ಸರೋವರದ ಮೇಲೆ ನಡೆಯುತ್ತಿದ್ದಾಗ ಮಂಜುಗಡ್ಡೆ ಕುಸಿದು, ನೀರಿನಲ್ಲಿ ಮುಳುಗಿದ ಪರಿಣಾಮ ಒಬ್ಬ ಮಹಿಳೆ ಸೇರಿ ಮೂವರು ಭಾರತೀಯ ಅಮೆರಿಕನ್ನರು ಮೃತಪಟ್ಟಿರುವ ಘಟನೆ ಅಮೆರಿಕದಲ್ಲಿ ನಡೆದಿದೆ.

ಅರಿಜೋನಾ ರಾಜ್ಯದ ಕೊಕೊನಿನೊ ಕೌಂಟಿಯ ವುಡ್ಸ್ ಕ್ಯಾನಿಯನ್ ಸರೋವರದಲ್ಲಿ ಈ ದುರ್ಘಟನೆ ಸಂಭವಿಸಿದೆ.

'ಮೃತರನ್ನು ನಾರಾಯಣ ಮುದ್ದಣ (49), ಗೋಕುಲ್ ಮೆಡಿಸೆಟಿ (47) ಮತ್ತು ಹರಿತಾ ಮುದ್ದಣ ಎಂದು ಗುರುತಿಸಲಾಗಿದೆ. ಮೃತರು ಅರಿಜೋನಾದ ಚಾಂಡ್ಲರ್ ನಿವಾಸಿಗಳಾಗಿದ್ದು, ಭಾರತ ಮೂಲದವರಾಗಿದ್ದಾರೆ' ಎಂದು ಕೊಕಿನಿನೊ ಕೌಂಟಿ ಪೊಲೀಸರು ತಿಳಿಸಿದ್ದಾರೆ.

ಅಮೆರಿಕ ಮತ್ತು ಕೆನಡಾದ ಹಲವೆಡೆ ಶೀತ ಮಾರುತದ ಅಬ್ಬರ ಜೋರಾಗಿದ್ದು, ಸುಮಾರು 25 ಕೋಟಿ ಜನರು ತೊಂದರೆಗೆ ಸಿಲುಕಿದ್ದಾರೆ.

ಡಿಕ್ಕಿ: ಸಾಲುಗಟ್ಟಿ ನಿಂತ 200ಕ್ಕೂ ಅಧಿಕ ವಾಹನಗಳು

ಬೀಜಿಂಗ್ (ಎಎಫ್‌ಪಿ): ಹೆನಾನ್ ಪ್ರಾಂತ್ಯದ ಝೆಂಗ್‌ಝೌ ನಗರದ ಸಮೀಪ ಹೆದ್ದಾರಿಯಲ್ಲಿ, 200ಕ್ಕೂ ಹೆಚ್ಚು ವಾಹನಗಳ ನಡುವೆ ಡಿಕ್ಕಿ ಸಂಭವಿಸಿದ್ದು, ವಾಹನಗಳು ಸಾಲುಗಟ್ಟಿ ನಿಂತಿವೆ.

ಈ ಘಟನೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಸರ್ಕಾರಿ ಒಡೆತನದ ಸುದ್ದಿವಾಹಿನಿ ಸಿಸಿಟಿವಿ ವರದಿ ಮಾಡಿದೆ. ದಟ್ಟ ಮಂಜು ಕವಿದಿದ್ದೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ.

ಕಾರುಗಳು, ವ್ಯಾನ್ ಹಾಗೂ ಲಾರಿಗಳು ಸಾಲಾಗಿ, ಒಂದಕ್ಕೊಂದು ಡಿಕ್ಕಿಯಾಗಿ ನಿಂತಿರುವ ಚಿತ್ರಗಳು ಹಾಗೂ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಮಹಿಳೆಯರಿಗೆ ಶಿಕ್ಷಣ ನಿರ್ಬಂಧ: ವಿಶ್ವಸಂಸ್ಥೆ ಖಂಡನೆ

ವಿಶ್ವ ಸಂಸ್ಥೆ (ಪಿಟಿಐ): ವಿಶ್ವವಿದ್ಯಾಲಯಗಳಿಗೆ ಪ್ರವೇಶ ಮಾಡದಂತೆ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಉದ್ಯೋಗ ಮಾಡದಂತೆ ಮಹಿಳೆಯರಿಗೆ ನಿರ್ಬಂಧ ಹೇರಿರುವ ತಾಲಿಬಾನ್‌ನ ನಿರ್ಧಾರವನ್ನು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ಖಂಡಿಸಿದೆ.

ಭದ್ರತಾ ಮಂಡಳಿಯ ಡಿಸೆಂಬರ್ ತಿಂಗಳ ಅಧ್ಯಕ್ಷತೆಯನ್ನು ಭಾರತವು ವಹಿಸಿಕೊಂಡಿದೆ. 'ಇಂಥ ನಿರ್ಧಾರಗಳು ಮಾನವಹಕ್ಕುಗಳ ಗೌರವವನ್ನು ಕಡಿಮೆಗೊಳಿಸುತ್ತವೆ ಮತ್ತು 'ಹೆಚ್ಚು ಅಪಾಯಕಾರಿ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ರಾಯಭಾರಿ ಮತ್ತು ಭದ್ರತಾ ಮಂಡಳಿಯ ಅಧ್ಯಕ್ಷೆ ರುಚಿರಾ ಕಾಂಬೋಜ್ ಹೇಳಿದ್ದಾರೆ.

2022 ಹಿನ್ನೋಟ

ಷೇರುಪೇಟೆಗೆ ದೇಶಿ ಹೂಡಿಕೆದಾರರ ಬಲ

ದೇಶದ ಷೇರುಪೇಟೆಗಳು 2022ರಲ್ಲಿ ಬಹಳಷ್ಟು ಏರಿಳಿತ ಕಂಡರೂ, ಜಾಗತಿಕವಾಗಿ ಉತ್ತಮ ಗಳಿಕೆ ಕಂಡ ಷೇರುಪೇಟೆಗಳ ಸಾಲಿಗೆ ಸೇರಿಕೊಂಡಿವೆ. ಜಾಗತಿಕ ವಿದ್ಯಮಾನಗಳ ಪರಿಣಾಮಕ್ಕೆ ಸಿಲುಕಿದರೂ, ದೇಶಿ ಹೂಡಿಕೆದಾರರ (ಡಿಐಐ) ಸಕ್ರಿಯ ಭಾಗವಹಿಸುವಿಕೆಯ ಕಾರಣದಿಂದಾಗಿ ದೇಶದ ಷೇರುಪೇಟೆಗಳು ಈ ವರ್ಷ ತೀವ್ರ ಕುಸಿತ ಕಾಣುವುದು ತಪ್ಪಿತು.

ಹಣದುಬ್ಬರ ಹೆಚ್ಚಳ, ಉಕ್ರೇನ್ ಸಂಘರ್ಷದಂತಹ ಕೆಟ್ಟ ಪರಿಣಾಮ ಬೀರುವ ಅಂಶಗಳು ಹಾಗೂ ವಿದೇಶಿ ಹೂಡಿಕೆದಾರರು ದಾಖಲೆ ಪ್ರಮಾಣದಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು, ಹಣದುಬ್ಬರ, ಕೇಂದ್ರೀಯ ಬ್ಯಾಂಕ್‌ಗಳಿಂದ ಬಿಗಿಯಾದ ಹಣಕಾಸು ನೀತಿಗಳು ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿವೆ.

ಇಂತಹ ಸಂದರ್ಭದಲ್ಲಿ ದೇಶದ ಸಣ್ಣ ಮತ್ತು ಸಾಂಸ್ಥಿಕ ಹೂಡಿಕೆದಾರರು ಷೇರುಗಳ ಖರೀದಿಗೆ ಗಮನ ಹರಿಸಿದ್ದರಿಂದ ವರ್ಷದ ಒಟ್ಟು ವಹಿವಾಟು ಸಕಾರಾತ್ಮಕ ನೆಲೆಯಲ್ಲಿಯೇ ಇರುವಂತೆ ಆಯಿತು. ಮಾರುಕಟ್ಟೆಯ ಮಾಹಿತಿಯ ಪ್ರಕಾರ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ₹ 2 ಲಕ್ಷ ಕೋಟಿಗೂ ಅಧಿಕ ಮೊತ್ತದ ಷೇರುಗಳನ್ನು 2022ರಲ್ಲಿ ಖರೀದಿಸಿದ್ದಾರೆ.

ವರ್ಷದ ಬಹುಪಾಲು ಅವಧಿಯಲ್ಲಿ ಷೇರುಪೇಟೆ ವಹಿವಾಟು ನೀರಸವಾಗಿಯೇ ಇತ್ತಾದರೂ ಹಬ್ಬಗಳ ಅವಧಿಯಲ್ಲಿ ಗೂಳಿಯು ಮೈಕೊಡವಿ ಓಟ ಆರಂಭಿಸಿತು.

ಹಣದುಬ್ಬರ ಏರಿಕೆ, ರಷ್ಯಾ–ಉಕ್ರೇನ್ ಸಮರ ಮತ್ತು ಬಡ್ಡಿದರ ಹೆಚ್ಚಳದ ಅಡೆತಡೆಗಳ ನಡುವೆಯೂ ಬಿಎಸ್‌ಇ ಸೆನ್ಸೆಕ್ಸ್ 2022ರಲ್ಲಿ ಜನವರಿ 3ರಿಂದ ಡಿಸೆಂಬರ್ 28ರವರೆಗಿನ ವಹಿವಾಟನಲ್ಲಿ ಶೇ 2.92ರಷ್ಟು (1,727 ಅಂಶ) ಏರಿಕೆ ಕಂಡಿದೆ. ಈ ಮೂಲಕ ಉತ್ತಮ ಗಳಿಕೆ ಕಂಡಿರುವ ಪ್ರಮುಖ ಷೇರು ಮಾರುಕಟ್ಟೆಗಳ ಸಾಲಿಗೆ ಸೇರಿದೆ. ಸೆನ್ಸೆಕ್ಸ್ ಜೂನ್ 17ರಂದು 52 ವಾರಗಳ ಕನಿಷ್ಠ ಮಟ್ಟವಾದ 50,921 ಅಂಶಗಳಿಗೆ ಕುಸಿದಿತ್ತು. ಬಳಿಕ ಡಿಸೆಂಬರ್ 1ರಂದು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 63,583 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತ್ತು.

ಎಫ್‌ಪಿಐ: ದಾಖಲೆಯ ಹೊರಹರಿವು

ದೇಶದ ಷೇರುಪೇಟೆಗಳಿಂದ 2022ರಲ್ಲಿ ದಾಖಲೆ ಪ್ರಮಾಣದಲ್ಲಿ ವಿದೇಶಿ ಬಂಡವಾಳ (ಎಫ್‌ಪಿಐ) ಹೊರಹರಿವು ಕಂಡುಬಂದಿತು. ಡಿಸೆಂಬರ್ 28ರವರೆಗಿನ ಮಾಹಿತಿಯ ಪ್ರಕಾರ ₹ 1.21 ಲಕ್ಷ ಕೋಟಿ ವಿದೇಶಿ ಬಂಡವಾಳವನ್ನು ಹಿಂದಕ್ಕೆ ಪಡೆಯಲಾಗಿದೆ.

ಹಣದುಬ್ಬರ, ರಷ್ಯಾ–ಉಕ್ರೇನ್ ಸಮರ ಮತ್ತು ಅದರಿಂದಾಗಿ ಪೂರೈಕೆ ವ್ಯವಸ್ಥೆಯಲ್ಲಿ ಆದಂತಹ ಅಡಚಣೆಗಳು, ಸರಕುಗಳ ದರ ಏರಿಕೆ, ಕಚ್ಚಾ ತೈಲ ದರ ಹೆಚ್ಚಳ ಹಾಗೂ ವಿವಿಧ ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಏರಿಕೆಯ ಕಾರಣಗಳಿಂದಾಗಿ ಮೂರು ವರ್ಷಗಳ ಬಳಿಕ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವಂತೆ ಆಗಿದೆ.

ಎಫ್‌ಪಿಐ ಹೂಡಿಕೆ ವಿವರ

2019	₹ 1.01 ಲಕ್ಷ ಕೋಟಿ
2020	₹ 1.7 ಲಕ್ಷ ಕೋಟಿ
2021	₹ 25,752 ಕೋಟಿ
2022	₹ 1.21 ಲಕ್ಷ ಕೋಟಿ ▼

ಕಂಪನಿಗಳ ಬಂಡವಾಳ ಸಂಗ್ರಹಕ್ಕೆ ಹಿನ್ನಡೆ

ರಷ್ಯಾ–ಉಕ್ರೇನ್ ಸಮರ, ಹಣದುಬ್ಬರದ ತೀವ್ರ ಏರಿಕೆಯ ಕಾರಣಗಳಿಂದಾಗಿ ಭಾರತದ ಕಂಪನಿಗಳ ಬಂಡವಾಳ ಸಂಗ್ರಹಕ್ಕೆ 2022ರಲ್ಲಿ ಹಿನ್ನಡೆಯಾಗಿದೆ.

ಷೇರುಗಳು ಮತ್ತು ಸಾಲಪತ್ರಗಳನ್ನು ಮಾರಾಟ ಮಾಡುವ ಮೂಲಕ ಭಾರತದ ಕಂಪನಿಗಳು 2022ರಲ್ಲಿ ಡಿಸೆಂಬರ್ 15ರವರೆಗಿನ ಮಾಹಿತಿಯ ಪ್ರಕಾರ, ₹ 11.06 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ. 2021ರಲ್ಲಿ ಸಂಗ್ರಹ ಆಗಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 20ರಷ್ಟು ಇಳಿಕೆಯಾಗಿದೆ.

ಜಾಗತಿಕ ಬಿಕ್ಕಟ್ಟಿನಿಂದಾಗಿ ಷೇರುಪೇಟೆಗಳ ವಹಿವಾಟು ಅಸ್ಥಿರವಾಗಿತ್ತು. ಇದರಿಂದಾಗಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಹೊಸದಾಗಿ ಬಂಡವಾಳ ಸಂಗ್ರಹಿಸುವುದು ಭಾರಿ ಇಳಿಕೆ ಕಂಡಿತು. ಅಲ್ಲದೆ, ಐಪಿಒ ಮೂಲಕ ಬಂಡವಾಳ ಸಂಗ್ರಹವು 2021ಕ್ಕೆ ಹೋಲಿಸಿದರೆ 2022ರಲ್ಲಿ ಅರ್ಧದಷ್ಟು ಕಡಿಮೆ ಆಗಿದೆ.

(ಆಧಾರ: ಪಿಟಿಐ, ಬಿಎಸ್‌ಇ)

ಮುಕೇಶ್ ಅಂಬಾನಿ ರಿಲಯನ್ಸ್ ಮುಖ್ಯಸ್ಥರಾಗಿ 20 ವರ್ಷ

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಅವರು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮುಖ್ಯಸ್ಥರಾಗಿ 20 ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಕಂಪನಿಯ ಆದಾಯವು 17 ಪಟ್ಟು ಹೆಚ್ಚಾಗಿದೆ, ಲಾಭವು 20 ಪಟ್ಟು ಹೆಚ್ಚಾಗಿದೆ.

ಧೀರೂಭಾಯ್ ಅಂಬಾನಿ ಅವರು 2002ರಲ್ಲಿ ಮೃತಪಟ್ಟ ನಂತರ ಮುಕೇಶ್ ಅಂಬಾನಿ ಮತ್ತು ಅನಿಲ್ ಅಂಬಾನಿ ಅವರು ರಿಲಯನ್ಸ್ ಮುಂದಾಳತ್ವವನ್ನು ವಹಿಸಿಕೊಂಡರು. ಕಂಪನಿಯು ವಿಭಜನೆ ಆದ ನಂತರದಲ್ಲಿ ರಿಲಯನ್ಸ್‌ನ ಅನಿಲ, ತೈಲ ಮತ್ತು ಪೆಟ್ರೊಕೆಮಿಕಲ್ಸ್ ವಹಿವಾಟುಗಳು ಮುಕೇಶ್ ಅಂಬಾನಿ ಅವರ ಪಾಲಿಗೆ ಬಂದವು.

20 ವರ್ಷಗಳಲ್ಲಿ ಮುಕೇಶ್ ಒಡೆತನದ ರಿಲಯನ್ಸ್ ಕಂಪನಿಯು ಬೇರೆ ಬೇರೆ ವಹಿವಾಟುಗಳಲ್ಲಿ ವಿಸ್ತರಿಸಿಕೊಂಡಿದೆ. ದೂರಸಂಪರ್ಕ, ಚಿಲ್ಲರೆ ವಹಿವಾಟು, ನವ ಇಂಧನ ವಹಿವಾಟುಗಳನ್ನು ಆರಂಭಿಸಿದೆ.

ಮೋತಿಲಾಲ್ ಓಸ್ವಾಲ್ ಕಂಪನಿ ಸಿದ್ಧಪಡಿಸಿರುವ 26ನೆಯ ವಾರ್ಷಿಕ ಸಂಪತ್ತು ಸೃಷ್ಟಿ ಅಧ್ಯಯನ ವರದಿ ಪ್ರಕಾರ, ರಿಲಯನ್ಸ್ ಕಂಪನಿಯು 2016ರಿಂದ 2021ರ ಅವಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತು ಸೃಷ್ಟಿಸಿದೆ. ಕಂಪನಿ ಸೃಷ್ಟಿಸಿರುವ ಸಂಪತ್ತಿನ ಮೊತ್ತ ಸರಿಸುಮಾರು ₹ 10 ಲಕ್ಷ ಕೋಟಿ ಎಂದು ವರದಿ ಹೇಳಿದೆ.

ಟಾಟಾ ಸ್ಟೀಲ್, ಟೂಟರ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸ್ಟೀಲ್ ಮತ್ತು ಟೂಟರ್ ಹೈಪರ್‌ಲೂಪ್ ಕಂಪನಿಗಳು ಪರಸ್ಪರ ಒಪ್ಪಂದವೊಂದಕ್ಕೆ ಸಹಿ ಮಾಡಿದ್ದು, ಹೈಪರ್‌ಲೂಪ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಅದನ್ನು ಅಳವಡಿಸಲು ಜಂಟಿಯಾಗಿ ಕೆಲಸ ಮಾಡಲಿವೆ.

ಪ್ರಯಾಣಕ್ಕೆ ಹಾಗೂ ಸರಕು ಸಾಗಣೆಗೆ ಹೈಪರ್‌ಲೂಪ್ ತಂತ್ರಜ್ಞಾನವು ಸುಸ್ಥಿರ ಹಾಗೂ ಕಡಿಮೆ ವೆಚ್ಚದ್ದು ಎಂಬ ನಂಬಿಕೆ ಇದೆ. ಇದು ವಾಯುಯಾನಕ್ಕಿಂತ ಕಡಿಮೆ ಅವಧಿ ತೆಗೆದುಕೊಳ್ಳುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಭವಿಷ್ಯದಲ್ಲಿ ಸುಸ್ಥಿರ ಸಾಗಾಟ ಕ್ಷೇತ್ರದಲ್ಲಿ ಹೈಪರ್‌ಲೂಪ್ ತಂತ್ರಜ್ಞಾನಕ್ಕೆ ಹೆಚ್ಚಿನ ಅವಕಾಶಗಳಿವೆ' ಎಂದು ಟಾಟಾ ಸ್ಟೀಲ್ ಕಂಪನಿಯ ಹಿರಿಯ ಅಧಿಕಾರಿ ಡಾ. ದೇಬಶಿಶ್ ಭಟ್ಟಾಚಾರ್ಜಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹಳೆಚಾಲಿ	36809-40099	ರಾಶಿ	40469-45599
ಕೋಕ	12500-25000	ಹೊಸಚಾಲಿ	31809-34339	ಸರಕು	52009-72659
ಹೊಸತು	27500-38000	**ಪುತ್ತೂರು**		**ಶಿರಸಿ**	
ಹಳತು	48000-54500	ಕೋಕ	11000-26000	ಬೆಟ್ಟೆ	35899-41769
ಕುಮಟ		ಹೊಸತು	32000-38000	ಬಿಳಿಗೋಟು	21361-34300
ಚಿಪ್ಪು	25609-31999	**ಶಿವಮೊಗ್ಗ**		ಚಾಲಿ	34099-42200
ಕೋಕ	16509-28509	ಬೆಟ್ಟೆ	44019-51800	ಕೆಂಪುಗೋಟು	22229-34019
ಫ್ಯಾಕ್ಟರಿ	11099-18429	ಗೊರಬಲು	17809-34350	ರಾಶಿ	26799-44519

'ಅಶ್ವತ್ಥನಾರಾಯಣ ಮಂದಿರವಾದರೂ ಕಟ್ಟಲಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಮನಗರದಲ್ಲಿರುವ ರಾಮದೇವರ ಬೆಟ್ಟವನ್ನು ದಕ್ಷಿಣ ಅಯೋಧ್ಯೆ ಮಾದರಿಯಲ್ಲಿ ಅಭಿವೃದ್ಧಿ ಮಾಡುತ್ತೇವೆ' ಎಂಬ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಹೇಳಿಕೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

'ರಾಮಮಂದಿರ ಜೀರ್ಣೋದ್ಧಾರಕ್ಕೆ ಅಭಿವೃದ್ಧಿಗೆ ಯೋಜನೆ ರೂಪಿಸಲು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ಅಯೋಧ್ಯೆ ಮಾದರಿಯಲ್ಲಿ ಅಭಿವೃದ್ಧಿ ಮಾಡುತ್ತೇವೆ. ಜೀರ್ಣೋದ್ಧಾರ ಕಾರ್ಯಕ್ರಮಕ್ಕೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಆಹ್ವಾನಿಸುತ್ತೇವೆ. ಹಿಂದೂ ಧಾರ್ಮಿಕ ಕೇಂದ್ರವಾನ್ನಾಗಿ ಮಾಡುತ್ತೇವೆ' ಎಂದು ಅಶ್ವತ್ಥನಾರಾಯಣ ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಡಿ.ಕೆ. ಶಿವಕುಮಾರ್, 'ಅಲ್ಲಿ ರಾಮಮಂದಿರವಾದರೂ ಕಟ್ಟಲಿ, ಸೀತಾ ಮಂದಿರವಾದರೂ ಕಟ್ಟಲಿ, ಅಶ್ವತ್ಥನಾರಾಯಣ ಮಂದಿರವಾದರೂ ಕಟ್ಟಿಕೊಳ್ಳಲಿ, ನಮ್ಮ ತಕರಾರು ಇಲ್ಲ' ಎಂದಿದ್ದಾರೆ.

'ಮೂರು ವರ್ಷದ ಹಿಂದೆ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಂದರು. ಏನೋ ಕ್ಲೀನ್ ಮಾಡ್ತೇನೆ ಅಂತಿದ್ರು, ಈಗ ಎಲ್ಲವನ್ನೂ ಕ್ಲೀನ್ ಮಾಡಿದ್ದಾರೆ. ಇಡೀ ರಾಮನಗರ ಕ್ಲೀನ್ ಮಾಡಿರೋದು ನೋಡಿದ್ದೀನಿ' ಎಂದು ವ್ಯಂಗ್ಯವಾಡಿದರು.

ಅಮಿತ್ ಶಾ ಭೇಟಿಯ ಬಗ್ಗೆ ಪ್ರಶ್ನಿಸಿದಾಗ, 'ಮೊದಲು ಅಮಿತ್ ಶಾ ಅವರು ಬಂದು ಹೋಗಲಿ' ಎಂದಷ್ಟೇ ಪ್ರತಿಕ್ರಿಯಿಸಿದರು.

ಒಬಿಸಿ ಮೀಸಲಾತಿ: ಆಯೋಗ ರಚಿಸಿದ ಯೋಗಿ ಸರ್ಕಾರ

ಯೋಗಿ ಆದಿತ್ಯನಾಥ್

ಲಖನೌ (ಪಿಟಿಐ): ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಕಲ್ಪಿಸುವುದಕ್ಕಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಸರ್ಕಾರವು ಬುಧವಾರ ಐವರು ಸದಸ್ಯರನ್ನೊಳಗೊಂಡ ಆಯೋಗ ರಚಿಸಿದೆ.

ನಿವೃತ್ತ ನ್ಯಾಯಮೂರ್ತಿ ರಾಮ್ ಅವತಾರ್ ಸಿಂಗ್ ನೇತೃತ್ವದ ಈ ಆಯೋಗದಲ್ಲಿ ನಿವೃತ್ತ ಐಎಎಸ್ ಅಧಿಕಾರಿಗಳಾದ ಚೌಬ್ ಸಿಂಗ್ ವರ್ಮಾ, ಮಹೇಂದ್ರ ಕುಮಾರ್, ರಾಜ್ಯದ ಮಾಜಿ ಕಾನೂನು ಸಲಹೆಗಾರರಾದ ಸಂತೋಷ್‌ಕುಮಾರ್ ವಿಶ್ವಕರ್ಮ ಹಾಗೂ ಬ್ರಜೇಶ್‌ಕುಮಾರ್ ಸೋನಿ ಅವರು ಇದ್ದಾರೆ. ಇವರ ನೇಮಕಕ್ಕೆ ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ.

ಒಬಿಸಿಗೆ ಮೀಸಲಾತಿ ಕಲ್ಪಿಸದೆಯೇ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಮಂಗಳವಾರ ಸರ್ಕಾರಕ್ಕೆ ಆದೇಶಿಸಿತ್ತು. ಈ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿದ್ದ ಕರಡು ಅಧಿಸೂಚನೆಯನ್ನೂ ರದ್ದುಗೊಳಿಸಿತ್ತು.

ಹ್ಯಾಕರ್‌ಗಳ ವೇದಿಕೆ ಹೇಳಿಕೆ: ಸಚಿವಾಲಯ ನಿರಾಕರಣೆ

ಡಾರ್ಕ್ ವೆಬ್‌ನಲ್ಲಿ 3 ಕೋಟಿ ರೈಲ್ವೆ ಬಳಕೆದಾರರ ದತ್ತಾಂಶ ಮಾರಾಟಕ್ಕೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಭಾರತೀಯ ರೈಲ್ವೆ ಬಳಕೆದಾರರ ಪೈಕಿ 3 ಕೋಟಿಗೂ ಅಧಿಕ ಮಂದಿಯ ದತ್ತಾಂಶವನ್ನು ಡಾರ್ಕ್ ವೆಬ್‌ನಲ್ಲಿ ಮಾರಾಟಕ್ಕಿಡಲಾಗಿದೆ ಎಂದು ಹ್ಯಾಕರ್‌ಗಳ ವೇದಿಕೆ ಹೇಳಿದೆ. ಆದರೆ, ಕೇಂದ್ರ ರೈಲ್ವೆ ಸಚಿವಾಲಯ ಇದನ್ನು ಅಲ್ಲಗಳೆದಿದೆ.

'ಭಾರತೀಯ ರೈಲ್ವೆ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಸೇರಿದಂತೆ ರೈಲ್ವೆ ಇಲಾಖೆಯ ಯಾವ ಸರ್ವರ್‌ನಿಂದಲೂ ದತ್ತಾಂಶ ಸೋರಿಕೆಯಾಗಿಲ್ಲ. ದತ್ತಾಂಶಕ್ಕೆ ಕನ್ನ ಹಾಕಲಾಗಿದೆ ಎಂಬ ಸುದ್ದಿಯು ಸತ್ಯಕ್ಕೆ ದೂರವಾದುದು' ಎಂದು ಸಚಿವಾಲಯ ಬುಧವಾರ ಸ್ಪಷ್ಟಪಡಿಸಿದೆ. ಈ ಸಂಬಂಧ ಐಆರ್‌ಸಿಟಿಸಿ ತನಿಖೆ ಕೈಗೊಳ್ಳಲಿದೆ ಎಂದೂ ಹೇಳಿದೆ.

'3 ಕೋಟಿಗೂ ಅಧಿಕ ಮಂದಿಯ ದತ್ತಾಂಶ ನಮ್ಮ ಬಳಿ ಇದೆ. ಅದನ್ನು ಡಾರ್ಕ್ ವೆಬ್‌ನಲ್ಲಿ ಮಾರಾಟಕ್ಕಿಟ್ಟಿದ್ದೇವೆ. ಬಳಕೆದಾರರ ಹೆಸರು, ಲಿಂಗ, ಇ–ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ನಗರದ ಮಾಹಿತಿಯನ್ನು ಇದು ಒಳಗೊಂಡಿದೆ' ಎಂದು ಹ್ಯಾಕರ್‌ಗಳ ವೇದಿಕೆ (ಏಲಿಯಸ್ ಶ್ಯಾಡೊಹ್ಯಾಕರ್ಸ್) ತಿಳಿಸಿದೆ.

'ರೈಲ್ವೆ ಬಳಕೆದಾರರ ದತ್ತಾಂಶ ಸೋರಿಕೆ ಸಾಧ್ಯತೆ ಕುರಿತ ಮಾಹಿತಿಯನ್ನು ಭಾರತೀಯ ಕಂಪ್ಯೂಟರ್ ತುರ್ತು ಸ್ಪಂದನಾ ತಂಡ (ಸಿಇಆರ್‌ಟಿ) ನಮ್ಮೊಂದಿಗೆ ಹಂಚಿಕೊಂಡಿತ್ತು. ಮಾದರಿ ದತ್ತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ದತ್ತಾಂಶ ಸೋರಿಕೆಯಾಗಿಲ್ಲ ಎಂಬುದು ಸ್ಪಷ್ಟವಾಗಿದೆ. ದತ್ತಾಂಶ ಸೋರಿಕೆಯಾಗಿದೆಯೇ ಇಲ್ಲವೆ ಎಂಬುದನ್ನು ಕೂಡಲೇ ಪರೀಕ್ಷಿಸುವಂತೆ ಐಆರ್‌ಸಿಟಿಸಿಯ ವ್ಯಾವಹಾರಿಕ ಪಾಲುದಾರರಿಗೂ ಸೂಚಿಸಲಾಗಿತ್ತು' ಎಂದು ಸಚಿವಾಲಯ ಹೇಳಿದೆ.

ರಷ್ಯಾದ ಆಕ್ರಮಣ ಎದುರಿಸಲು ಉಕ್ರೇನ್ ಪ್ರತಿತಂತ್ರ

ವಾಯು ದಾಳಿಯ ಡ್ರೋನ್ ಅಭಿವೃದ್ಧಿ

ಕೀವ್ (ಎಪಿ): ವಿಚಕ್ಷಣೆ ಮತ್ತು ಕಣ್ಗಾವಲಿಗಾಗಿ ಸುಮಾರು 1,400 ಡ್ರೋನ್‌ಗಳನ್ನು ಖರೀದಿಸಿರುವ ಉಕ್ರೇನ್, ಆಕ್ರಮಣಕ್ಕೆ ರಷ್ಯಾ ಸೇನೆ ಬಳಸಿದ ಸ್ಫೋಟಕ ದಾಳಿ ಸಾಮರ್ಥ್ಯದ ಡ್ರೋನ್‌ಗಳನ್ನು ಧ್ವಂಸಗೊಳಿಸುವಂತಹ ಮಾನವ ರಹಿತ ವೈಮಾನಿಕ ಸಾಧನಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿರುವುದಾಗಿ ಬುಧವಾರ ಹೇಳಿದೆ.

ರಷ್ಯಾ ನಡೆಸುತ್ತಿರುವ ಯುದ್ಧವನ್ನು ಇಂಟರ್ನೆಟ್ ಯುಗದ ಮೊದಲ ಪ್ರಮುಖ ಯುದ್ಧ ಎಂದಿರುವ ಉಕ್ರೇನ್‌ನ ಡಿಜಿಟಲ್ ಟ್ರಾನ್ಸ್‌ಫಾರ್ಮೇಶನ್ ಸಚಿವ ಮಿಖಾಯಿಲೊ ಫೆಡೊರೊವ್ ಅವರು, ಇಲಾನ್ ಮಸ್ಕ್ ಅವರು ಯುದ್ಧದ ವೇಳೆ ಸ್ಟಾರ್‌ಲಿಂಕ್ ಸೇವೆ ಒದಗಿಸಿದ್ದರಿಂದ ಕದನದ ಸ್ವರೂಪವೇ ಬದಲಾಯಿತು. ಯುದ್ಧವನ್ನು ಡ್ರೋನ್ ಮತ್ತು ಉಪಗ್ರಹ ಆಧಾರಿತವಾಗಿ ರೂಪಾಂತರಗೊಳಿಸಿದ ಶ್ರೇಯ ಮಸ್ಕ್ ಅವರಿಗೆ ಸಲ್ಲಬೇಕು ಎಂದರು.

'ಗೂಢಚಾರಿಕೆ, ಯುದ್ಧಾಂಗಣದ ವಿಚಕ್ಷಣೆ ಮತ್ತು ಕಣ್ಗಾವಲಿಗಾಗಿ ಹದ್ದಿನಗಣ್ಣಿನಂತಹ ಡ್ರೋನ್‌ಗಳನ್ನು ನಾವು ಖರೀದಿಸಿದ್ದೇವೆ. ಈಗ ನಾವು ಅಗತ್ಯ ಸಂಖ್ಯೆಯ ವಿಚಕ್ಷಣಾ ಡ್ರೋನ್‌ಗಳನ್ನು ಹೊಂದಿದ್ದೇವೆ. ಮುಂದಿನ ಗುರಿ ದಾಳಿ ಸಾಮರ್ಥ್ಯದ ಡ್ರೋನ್‌ಗಳು. ಇವೆರಡು ಮಾದರಿಯ ಡ್ರೋನ್‌ಗಳು ಸ್ಫೋಟಿಸುವಂತಹವು. ಸುಮಾರು 3ರಿಂದ 10 ಕಿ.ಮೀ. ದೂರದವರೆಗೆ ಹಾರುವ ಸಾಮರ್ಥ್ಯವಿದ್ದು, ಗುರಿಗಳನ್ನು ನಿಖರವಾಗಿ ಭೇದಿಸುತ್ತವೆ' ಎಂದರು.

'ಭವಿಷ್ಯದಲ್ಲಿ ದಾಳಿಗಳು ಡ್ರೋನ್‌ಗಳಿಂದಲೇ ಕೂಡಿರುತ್ತವೆ. ಮಾನವ ರಹಿತ ವೈಮಾನಿಕ ಸಾಧನಗಳನ್ನು ನಾವು ಅಭಿವೃದ್ಧಿಪಡಿಸುತ್ತಿದ್ದೇವೆ. ಇದು ತಂತ್ರಜ್ಞಾನಗಳ ಅಭಿವೃದ್ಧಿಯ ಮುಂದಿನ ಹೆಜ್ಜೆಯಾಗಿದೆ' ಎಂದು ಅವರು ಹೇಳಿದರು.

ಹೊಸ ಇತಿಹಾಸ ಪುಸ್ತಕ ಮಾರ್ಚ್‌ನಿಂದ ಲಭ್ಯ

'ಸರಿಪಡಿಸಿದ ಇತಿಹಾಸ' ಬೋಧನೆ: ಪ್ರಧಾನ್

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಇತಿಹಾಸವನ್ನು 'ಸರಿಪಡಿಸಿದ' ರೂಪದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೇಳಿದ್ದಾರೆ.

ಸಚಿವರ ಹೇಳಿಕೆಗೆ ಪೂರಕವಾದ ಕೆಲಸಗಳು ಆರಂಭವಾಗಿವೆ ಎಂದು ಭಾರತೀಯ ಐತಿಹಾಸಿಕ ಸಂಶೋಧನಾ ಸಂಸ್ಥೆಯ (ಐಸಿಎಚ್‌ಆರ್) ಸದಸ್ಯ ಕಾರ್ಯದರ್ಶಿ ಉಮೇಶ್ ಅಶೋಕ್ ಕದಂ ಅವರು ಬುಧವಾರ ಹೇಳಿದ್ದಾರೆ.

ಐಸಿಎಚ್‌ಆರ್ ಹಾಗೂ ಆರ್‌ಎಸ್‌ಎಸ್‌ನ ಅಂಗಸಂಸ್ಥೆ 'ಅಖಿಲ ಭಾರತೀಯ ಇತಿಹಾಸ ಸಂಕಲನ ಯೋಜನೆ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದ್ದ ಪ್ರಧಾನ್, 'ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಸಿದ್ಧಪಡಿಸಲಾಗುವ ಸಮಗ್ರ ಇತಿಹಾಸ ಆವೃತ್ತಿಯು ಮುಂದಿನ ಮಾರ್ಚ್ ಹೊತ್ತಿಗೆ ವಿದ್ಯಾರ್ಥಿಗಳಿಗೆ ಸಿಗಲಿದೆ. ಈ ಪುಸ್ತಕಗಳು ಜಗತ್ತಿಗೆ ಭಾರತದ ನೈಜ ಚಿತ್ರಣವನ್ನು ನೀಡಲಿವೆ' ಎಂದು ಹೇಳಿದ್ದರು.

'ದೇಶೀಯ ಮೂಲಗಳ ಮಾಹಿತಿ ಆಧರಿಸಿದ ಸಮಗ್ರ ರೂಪದಲ್ಲಿ ಪುಸ್ತಕಗಳು ತಯಾರಾಗಲಿವೆ. ಭಾರತದ ಆರ್ಥಿಕ ಇತಿಹಾಸವನ್ನು ಹೇಳುವ ಪುಸ್ತಕವೂ ಹೊರಬರಲಿದೆ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಭಾರತದ ಕೊಡುಗೆಯನ್ನು ಪ್ರಚಾರ ಮಾಡಲು ಇಸ್ರೊ ಜೊತೆಗಿನ ಯೋಜನೆಯೂ ಇದೆ. ಈ ಪುಸ್ತಕಗಳು ನಮ್ಮ ಜ್ಞಾನಕ್ಕೆ ಹೊಸ ಹೊಳಹು ನೀಡಲಿವೆ. ಅದು ಐರೋಪ್ಯ ಕೇಂದ್ರಿತ ಅಥವಾ ಮೊಘಲ್ ಇತಿಹಾಸ ಪ್ರಭಾವಿತ ದೃಷ್ಟಿಕೋನದ ಹೊರಗೆ ದೃಷ್ಟಿ ಹಾಯಿಸುತ್ತದೆ' ಎಂದು ಕದಂ ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

PHARMACIST - Generic Aadhar Davangere B. Pharm/D. Pharma with KSPC Regd. 9036059698

ಸಾರ್ವಜನಿಕ ಪ್ರಕಟಣೆ

NOTICE

I, Madhu Kumar Varma, Managing Partner of MS AGROTECH located in Survey No 23/1 Bylakonenahalli Village, Shed No 2 Andrahalli Main Road , Lakshmipura Post, Dasanapura Hobli, Bangalore North Taluk, Bengaluru Rural District, Bangalore- 562162, would like to market the below Fertilizers after obtaining Wholesale Licence for Karnataka State From State Department of Agriculture . We will follow the procedures as specified in F.C.O.

100% WATER SOLUBLE MIXTUTRE OF FERTILIZERS
• N.P.K. (19:19:19) • N.P.K. (13:40:13)
100% WATER SOLUBLE COMPLEX FERTILIZERS
• POTASSIUM NITRATE (13:00:45)
• CALCIUM NITRATE GRANULAR (NPKCa) (15.5:00:00:18.5)
• MONO POTASSIUM PHOSPHATE (00:52:34)
• MONO AMMONIUM PHOSPHATE (12:61:00)
STRAIGHT POTASSIC FERTILIZERS
• NPK (00:00:50)
MICRONUTRIENT FERTILIZERS
• ZINC SULPHATE HEPTAHYDRATE -21% • ZINC SULPHATE MONOHYDRATE -33%
• DI- SODIUM OCTA BORATE TETRAHYDRATE-DOT (Boron20%)

Madhu Kumar Varma
Managing Partner of
MS Agrotech

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

23.01.2023 08.03.2023 10.04.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ,ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 05.02.2023 17.03.2023 ರಾಜಸ್ಥಾನ್ 9 ದಿನಗಳು. A/C ರೂಂ/ A/C ಬಸ್ಸು/ ವಿಮಾನದಲ್ಲಿ. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

24.12.2022 ರಿಂದ 14 ದಿನಗಳ ಆಂಧ್ರಪ್ರವಾಸ. 23.02.2023 ರಿಂದ 11 ದಿನಗಳ ಕಾಶಿ.ಗಯಾ ನೈಮಿಶಾರಣ್ಯ.ಚಿತ್ರಕೂಟ. 23.02.2023 ರಿಂದ 15 ದಿನಗಳ ಮಲ್ಟಿ ಎಕ್ಸಲ್ ಸೆಮಿ ಸ್ಲಿಪರ್ ಕೋಚ್ ಬಸ್ಸು/ ವಿಮಾನದಲ್ಲಿ ಅಷ್ಟಜ್ಯೋತಿರ್ಲಿಂಗ ಪ್ರವಾಸ. 23.03.2023 ರಿಂದ 10/18 ದಿನಗಳ ನೇಪಾಳ ಮುಕ್ತಿನಾಥ ಕಾಶಿ,ಗಯಾ ಕೊಲ್ಕತ್ತಾ,ಪುರಿ ಕೋನಾರ್ಕ್ ಭುವನೇಶ್ವರ್. 27.04.2023 ರಿಂದ 14 ದಿನಗಳ ಚಾರ್-ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ದಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9845560219/ 9739847429.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

2022 ಹಿನ್ನೋಟ

ಅಥ್ಲೆಟಿಕ್ಸ್: ನೀರಜ್ ಚೋಪ್ರಾ ಹೊಳಪು

ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರ ಸಾಧನೆ ಈ ವರ್ಷವೂ ಭಾರತದ ಅಥ್ಲೆಟಿಕ್ಸ್‌ನಲ್ಲಿ ಸುದ್ದಿಮಾಡಿತು. ಚೋಪ್ರಾ ಅಲ್ಲದೆ ಲಾಂಗ್‌ಜಂಪರ್ ಮುರಳಿ ಶ್ರೀಶಂಕರ್, ಸ್ಟೀಪಲ್ ಚೇಸ್‌ನಲ್ಲಿ ಅವಿನಾಶ್ ಸಬ್ಳೆ ಅಂತರರಾಷ್ಟ್ರೀಯ ಕೂಟಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿದರು. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕೂಟದಲ್ಲೂ ಭಾರತದ ಅಥ್ಲೀಟ್‌ಗಳು ಮಿಂಚಿದರು.ಕೆಲವು ಅಥ್ಲೀಟ್‌ಗಳು ಉದ್ದೀಪನಾ ಮದ್ದು ಸೇವಿಸಿ ಸಿಕ್ಕಿಬಿದ್ದದ್ದು ಕಪ್ಪುಚುಕ್ಕೆಯಾಗಿ ಪರಿಣಮಿಸಿತು. 'ಪಯ್ಯೋಳಿ ಎಕ್ಸ್‌ಪ್ರೆಸ್' ಖ್ಯಾತಿಯ ಪಿ.ಟಿ.ಉಷಾ ಐಒಎ ಅಧ್ಯಕ್ಷೆಯಾಗಿದ್ದು ಈ ವರ್ಷದ ಮತ್ತೊಂದು ಪ್ರಮುಖ ಬೆಳವಣಿಗೆ.

'ಡೈಮಂಡ್' ಸಾಧನೆ

2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದ ನೀರಜ್ ಅವರು ಈ ವರ್ಷವೂ ಹಲವು ಪ್ರಥಮಗಳಿಗೆ ಕಾರಣರಾದರು. ಜುಲೈ ತಿಂಗಳಲ್ಲಿ ಅಮೆರಿಕದ ಒರೆಗಾನ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ 88.13 ಮೀಟರ್ಸ್ ಸಾಧನೆಯೊಂದಿಗೆ ಬೆಳ್ಳಿ ಗೆದ್ದುಕೊಂಡಿದ್ದರು.

ಸ್ವಿಟ್ಜರ್‌ಲೆಂಡ್‌ನ ಜೂರಿಕ್‌ನಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಗೆದ್ದು, ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡಿದ್ದರು. 2022 ರಲ್ಲಿ ಅವರು ಆರು ಬಾರಿ 88 ಮೀ. ಗಿಂತ ಹೆಚ್ಚು ದೂರ ಸಾಧನೆ ಮಾಡಿದ್ದಾರೆ.

ಉಷಾ ಐಒಎ ಅಧ್ಯಕ್ಷೆ

ದಿಗ್ಗಜ ಅಥ್ಲೀಟ್ ಪಿ.ಟಿ. ಉಷಾ ಅವರು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೊದಲ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.

ಡಿ.10 ರಂದು ನಡೆದಿದ್ದ ಐಒಎ ಚುನಾವಣೆಯಲ್ಲಿ ಅವರ ಅವಿರೋಧ ಆಯ್ಕೆ ನಡೆದಿತ್ತು. ಅಧ್ಯಕ್ಷ ಹುದ್ದೆಗೆ 58 ವರ್ಷದ ಉಷಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. 95 ವರ್ಷಗಳ ಇತಿಹಾಸವಿರುವ ಸಂಸ್ಥೆಯ ಅತ್ಯುನ್ನತ ಸ್ಥಾನಕ್ಕೆ ಆಯ್ಕೆಯಾಗಿರುವ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಅವರದ್ದಾಗಿದೆ.

ಕಾಮನ್‌ವೆಲ್ತ್ ಕೂಟದಲ್ಲಿ ಪದಕ ಬೇಟೆ

ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕೂಟದ ಅಥ್ಲೆಟಿಕ್ಸ್‌ನಲ್ಲಿ ಎಂಟು ಪದಕ ಜಯಿಸಿದ್ದು, ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತದ ಶಕ್ತಿಯನ್ನು ಸಾಬೀತುಪಡಿಸಿತು. ಭಾರತ 1ಚಿನ್ನ, 4 ಬೆಳ್ಳಿ ಮತ್ತು 3 ಕಂಚು ಜಯಿಸಿತು. ನವದೆಹಲಿ ಕೂಟ ಹೊರತುಪಡಿಸಿದರೆ ಅಥ್ಲೆಟಿಕ್ಸ್‌ನಲ್ಲಿ ಭಾರತದ ಶ್ರೇಷ್ಠ ಸಾಧನೆ ಈ ಬಾರಿ ಮೂಡಿಬಂದಿತ್ತು. ಟ್ರಿಪಲ್ ಜಂಪ್‌ನಲ್ಲಿ ಎಲ್ದೋಸ್ ಪೌಲ್ ಮತ್ತು ಅಬ್ದುಲ್ಲಾ ಅಬೂಬಕರ್ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದ್ದರು.

ಎಲ್ದೋಸ್ ಪೌಲ್

ಉದ್ದೀಪನಾ ಮದ್ದು ಸದ್ದು

'ಉದ್ದೀಪನಾ ಮದ್ದು' ಕರಿನೆರಳು ಈ ವರ್ಷವೂ ಭಾರತದ ಅಥ್ಲೆಟಿಕ್ ಕ್ಷೇತ್ರವನ್ನು ಕಾಡಿತು. ನಿಷೇಧಿತ ಮದ್ದು ಸೇವಿಸಿರುವುದು ಸಾಬೀತಾದ ಕಾರಣ ಕೆಲ ಪ್ರಮುಖ ಅಥ್ಲೀಟ್‌ಗಳು ಶಿಕ್ಷೆಗೆ ಗುರಿಯಾದರು. ಮಹಿಳಾ ಡಿಸ್ಕಸ್ ಥ್ರೋ ಸ್ಪರ್ಧಿಗಳಾದ ನವಜೀತ್ ಕೌರ್ ಧಿಲ್ಲೋನ್ ಮತ್ತು ಕಮಲ್‌ಪ್ರೀತ್ ಕೌರ್ ಅವರು ಮೂರು ವರ್ಷಗಳ ನಿಷೇಧ ಶಿಕ್ಷೆ ಹಾಗೂ ಅಥ್ಲೀಟ್ ಎಂ.ಆರ್.ಪೂವಮ್ಮ ಅವರು ಎರಡು ವರ್ಷಗಳ ನಿಷೇಧಕ್ಕೆ ಗುರಿಯಾಗಿದ್ದಾರೆ. ಶೇಖರ್ ಧನಲಕ್ಷ್ಮಿ ಮತ್ತು ಐಶ್ವರ್ಯಾ ಬಾಬು ಅವರೂ ಉದ್ದೀಪನಾ ಮದ್ದು ಪರೀಕ್ಷೆಯಲ್ಲಿ ಸಿಕ್ಕಿಬಿದ್ದರು.

ಭಾರತ ಮಹಿಳಾ ತಂಡ ಪ್ರಕಟ; ಹರ್ಮನ್‌ಪ್ರೀತ್ ಕೌರ್ ನೇತೃತ್ವ

ಟಿ20 ವಿಶ್ವಕಪ್: ಶಿಖಾಗೆ ಸ್ಥಾನ

ನವದೆಹಲಿ (ಪಿಟಿಐ): ವೇಗದ ಬೌಲರ್ ಶಿಖಾ ಪಾಂಡೆ ಅವರು ಮಹಿಳಾ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಫೆ.10 ರಿಂದ 26ರ ವರೆಗೆ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ಹರ್ಮನ್‌ಪ್ರೀತ್ ಕೌರ್ ನೇತೃತ್ವದ 15 ಸದಸ್ಯರ ತಂಡವನ್ನು ಬುಧವಾರ ಪ್ರಕಟಿಸಲಾಯಿತು.

ಶಿಖಾ ಅವರು 2021ರ ಅಕ್ಟೋಬರ್‌ನಲ್ಲಿ ಕೊನೆಯದಾಗಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು. ಇದೀಗ ಅವರು ಅಚ್ಚರಿಯ ರೀತಿಯಲ್ಲಿ ಸ್ಥಾನ ಪಡೆದಿದ್ದಾರೆ. 33 ವರ್ಷದ ಶಿಖಾ 55 ಏಕದಿನ ಮತ್ತು 56 ಟಿ20 ಪಂದ್ಯಗಳನ್ನು ಆಡಿದ್ದಾರೆ.

ಜೆಮಿಮಾ ರಾಡ್ರಿಗಸ್ ಅವರು ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ಈಚೆಗೆ ನಡೆದ ಸರಣಿಯಲ್ಲಿ ಅವರು ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದರು.

ವಿಶ್ವಕಪ್‌ಗೆ ಮುನ್ನ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್‌ಇಂಡೀಸ್ ತಂಡಗಳು ಒಳಗೊಂಡಂತೆ ನಡೆಯಲಿರುವ ತ್ರಿಕೋನ ಸರಣಿಗೂ ಭಾರತ ತಂಡವನ್ನು ಇದೇ ವೇಳೆ ಆಯ್ಕೆ ಮಾಡಲಾಯಿತು.

ತ್ರಿಕೋನ ಸರಣಿಯ ಮೊದಲ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ ಜ.19 ರಂದು ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಜ.23 ರಂದು ವೆಸ್ಟ್ ಇಂಡೀಸ್ ವಿರುದ್ಧ ಆಡಲಿದೆ.

ಶಿಖಾ ಪಾಂಡೆ

ಸ್ಮೃತಿ ಮಂದಾನ (ಎಡ) ಮತ್ತು ಹರ್ಮನ್‌ಪ್ರೀತ್ ಕೌರ್

ವಿಶ್ವಕಪ್ ಟೂರ್ನಿಗೆ ಭಾರತ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ರಿಚಾ ಘೋಷ್ (ವಿಕೆಟ್ ಕೀಪರ್), ಜೆಮಿಮಾ ರಾಡ್ರಿಗಸ್, ಹರ್ಲೀನ್ ಡಿಯೊಲ್, ದೀಪ್ತಿ ಶರ್ಮ, ದೇವಿಕಾ ವೈದ್ಯ, ರಾಧಾ ಯಾದವ್, ರೇಣುಕಾ ಠಾಕೂರ್, ಅಂಜಲಿ ಸರ್ವಾನಿ, ಪೂಜಾ ವಸ್ತ್ರಕರ್, ರಾಜೇಶ್ವರಿ ಗಾಯಕವಾಡ್, ಶಿಖಾ ಪಾಂಡೆ

ಹೆಚ್ಚುವರಿ ಆಟಗಾರ್ತಿಯರು: ಸ್ನೇಹಾ ರಾಣಾ, ಎಸ್.ಮೇಘನಾ, ಮೇಘನಾ ಸಿಂಗ್

ತ್ರಿಕೋನ ಸರಣಿಗೆ ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ (ಉಪನಾಯಕಿ), ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ಜೆಮಿಮಾ, ಹರ್ಲೀನ್ , ದೀಪ್ತಿ , ದೇವಿಕಾ, ರಾಜೇಶ್ವರಿ, ರಾಧಾ, ರೇಣುಕಾ, ಮೇಘನಾ ಸಿಂಗ್, ಅಂಜಲಿ, ಸುಷ್ಮಾ ವರ್ಮಾ, ಅಮನ್‌ಜೋತ್ ಕೌರ್, ಪೂಜಾ, ಎಸ್.ಮೇಘನಾ, ಸ್ನೇಹಾ, ಶಿಖಾ

ಚೆಸ್: ಸವಿತಾ ಶ್ರೀಗೆ ಕಂಚಿನ ಪದಕ

ಅಲ್ಮಾತಿ, ಕಜಕಸ್ತಾನ (ಪಿಟಿಐ): ಭಾರತದ ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್ ಬಿ.ಸವಿತಾ ಶ್ರೀ ಅವರು ಇಲ್ಲಿ ನಡೆದ ಫಿಡೆ ಮಹಿಳೆಯರ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

15 ವರ್ಷದ ಸವಿತಾ ಅವರು 11 ಸುತ್ತುಗಳಲ್ಲಿ ಒಟ್ಟು ಎಂಟು ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು. ಎಂಟು ಸುತ್ತುಗಳ ಬಳಿಕ ಸವಿತಾ 6.5 ಪಾಯಿಂಟ್ಸ್‌ಗಳನ್ನು ಹೊಂದಿದ್ದರು. ಕೊನೆಯ ಮೂರು ಸುತ್ತುಗಳಲ್ಲಿ 1.5 ಪಾಯಿಂಟ್ಸ್ ಸಂಗ್ರಹಿಸಿದರು.

ಒಂಬತ್ತನೇ ಸುತ್ತಿನಲ್ಲಿ ಕಜಕಸ್ತಾನದ ಜನ್ಸಯ ಅಬ್ದುಮಲಿಕ್ ಎದುರು ಸೋತದ್ದು ಸವಿತಾ ಅವರಿಗೆ ಮುಳುವಾಗಿ ಪರಿಣಮಿಸಿತು. ಇಲ್ಲದಿದ್ದರೆ ಚಿನ್ನ ಅಥವಾ ಬೆಳ್ಳಿ ಗೆಲ್ಲುವ ಅವಕಾಶವಿತ್ತು.

ಇಲ್ಲಿ 36ನೇ ಶ್ರೇಯಾಂಕ ಪಡೆದಿದ್ದ ಭಾರತದ ಆಟಗಾರ್ತಿ 10ನೇ ಸುತ್ತಿನಲ್ಲಿ ಸಿಂಗಪುರದ ಕ್ವಿಯಾನ್‌ಯುನ್ ಗಾಂಗ್ ಅವರನ್ನು ಮಣಿಸಿದರೆ, ಕೊನೆಯ ಸುತ್ತಿನಲ್ಲಿ ಕಜಕಸ್ತಾನದ ದಿನಾರಾ ಸದುವಕಸೊವಾ ವಿರುದ್ಧ ಗೆದ್ದರು.

ಕೊನೇರು ಹಂಪಿ ಅವರು ಆರನೇ ಸ್ಥಾನ ಗಳಿಸಿದರು. ಸವಿತಾ, ಹಂಪಿ ಮತ್ತು ಇತರ ಇಬ್ಬರು ಸ್ಪರ್ಧಿಗಳು ತಲಾ ಎಂಟು ಪಾಯಿಂಟ್ಸ್ ಗಳಿಸಿದ್ದರು. 'ಟೈಬ್ರೇಕ್' ಸ್ಕೋರ್ ಅಳವಡಿಸಿದಾಗ ಸವಿತಾ ಅವರು ಇತರರನ್ನು ಹಿಂದಿಕ್ಕಿ ಕಂಚು ತಮ್ಮದಾಗಿಸಿಕೊಂಡರು.

ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್: ಕರ್ನಾಟಕದ ಪಾರಮ್ಯ

ರಾಜ್ಯದ ಈಜುಪಟುಗಳಿಂದ ದಾಖಲೆಗಳ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜುಕೊಳದಲ್ಲಿ ಸಂಚಲನ ಮೂಡಿಸಿದ ಕರ್ನಾಟಕ ತಂಡದವರು ಕೇರಳದ ತಿರುವನಂತಪುರದಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಒಟ್ಟು ಒಂಬತ್ತು ಕೂಟ ದಾಖಲೆ ಬರೆದರು.

4X100 ಮೀಟರ್ಸ್ ಫ್ರೀಸ್ಟೈಲ್ ರಿಲೇಯ ಬಾಲಕರ ಒಂದನೇ ಗುಂಪಿನಲ್ಲಿ ಕರ್ನಾಟಕದ ತರುಣ್ ಅರುಣ್, ವಿಶ್ವನಾಥ್, ಸ್ವಯಂ ಮತ್ತು ಧ್ಯಾನ್ ಎಂ. ಅವರಿದ್ದ ತಂಡವು 3 ನಿಮಿಷ 45.45 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಇದರೊಂದಿಗೆ 2020ರಲ್ಲಿ ಕರ್ನಾಟಕ ತಂಡವೇ ನಿರ್ಮಿಸಿದ್ದ ದಾಖಲೆ (3 ನಿಮಿಷ 48.53 ಸೆ.) ದಾಖಲೆಯನ್ನು ಉತ್ತಮಪಡಿಸಿಕೊಂಡಿತು.

ಇದೇ ಸ್ಪರ್ಧೆಯ ಬಾಲಕರ ಎರಡನೇ ಗುಂಪಿನಲ್ಲಿ ರೇಣುಕಾಚಾರ್ಯ, ದಕ್ಷಣ್ ಎಸ್, ನಿಶಾನ್ ಮತ್ತು ಅಕ್ಷಜ್ ಅವರಿದ್ದ ತಂಡವು 3 ನಿ. 55.96 ಸೆಕೆಂಡುಗಳಲ್ಲಿ ಗುರಿ ತಲುಪಿತು.

4X100 ಮೀಟರ್ಸ್ ಫ್ರೀಸ್ಟೈಲ್ ರಿಲೇಯ ಬಾಲಕಿಯರ ಒಂದನೇ ಗುಂಪಿನಲ್ಲಿ ಸಾಕ್ಷಿ ಎಸ್, ಎಂ.ವಿ. ರಿಷಿಕಾ, ಧೃತಿ ಕೆ.ಆರ್ ಮತ್ತು ಲಕ್ಷ್ಮಿ ಎಸ್, ಅವರನ್ನೊಳಗೊಂಡ ತಂಡ 4 ನಿ. 19.62 ಸೆಕೆಂಡಗಳಲ್ಲಿ ಗುರಿ ಮುಟ್ಟಿ ದಾಖಲೆ ಬರೆಯಿತು.

ಇದೇ ಸ್ಪರ್ಧೆಯ ಬಾಲಕಿಯರ ಎರಡನೇ ಗುಂಪಿನಲ್ಲಿ ತಿಷ್ಯಾ ಸೋನಾರ್, ಸುಹಾಸಿನಿ ಘೋಷ್, ಶ್ರೀಚರಣಿ ಮತ್ತು ಆರ್ನಾ ಎಂ.ಪಿ. ಅವರಿದ್ದ ತಂಡವು 4 ನಿ. 19.27 ಸೆಕೆಂಡುಗಳಲ್ಲಿ ಗುರಿ ತಲುಪಿ ದಾಖಲೆಯೊಂದಿಗೆ ಚಿನ್ನ ತನ್ನದಾಗಿಸಿಕೊಂಡಿತು.

ವೈಯಕ್ತಿಕ ವಿಭಾಗದಲ್ಲಿ ಕರ್ನಾಟಕದ ನೈಶಾ ಶೆಟ್ಟಿ, ಆಕಾಶ್ ಮಣಿ, ಅಮನ್ ಸುಣಗಾರ, ಆರುಷಿ ಅಗರವಾಲ್, ಲಕ್ಷ್ಮಿ ತ್ರಿವಿಕ್ರಮ ಕೂಡ ಕೂಟ ದಾಖಲೆ ಬರೆದರು.

ಫಲಿತಾಂಶಗಳು (ಕರ್ನಾಟಕ ಮಾತ್ರ): ಬಾಲಕರು: 800 ಮೀ. ಫ್ರೀಸ್ಟೈಲ್: ಗುಂಪು 1: ಪವನ್ ಧನಂಜಯ–2. ಗುಂಪು 2: ರೇಣುಕಾಚಾರ್ಯ–2, ದಕ್ಷಣ್ ಎಸ್–3.

400 ಮೀ. ಫ್ರೀಸ್ಟೈಲ್: ಗುಂಪು 3: ಕೃಷ್ಣ ನಂದಕುಮಾರ್–3.

50 ಮೀ. ಬಟರ್‌ಫ್ಲೈ ಸ್ಟ್ರೋಕ್:ಗುಂಪು 1: ರಿಷಭ್ ಸಿಂಗ್ ದದ್ವಾಲ್–1, ಕಾಲ: 26.74 ಸೆ., ಧ್ಯಾನ್ ಎಂ.–2. ಗುಂಪು 2: ಅಮನ್ ಸುಣಗಾರ–2.ಗುಂಪು 3: ದರ್ಶವೀರ್ ಸಿಂಗ್ ಜಬ್ಬಿ–3

50 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 1: ಬಾಸಿತ್ ಅಹಮದ್–2, ಸೂರ್ಯ ಜೋಯಪ್ಪ–3. ಗುಂಪು 2: ಅನ್ಮೋಲ್ ಕುಮಾರ್ ನಿಷಾದ್–3. ಗುಂಪು 3: ಅಥರ್ವ್ ಪಾಲ್ ಸಿಂಗ್–2

200 ಮೀ. ಬ್ಯಾಕ್‌ಸ್ಟ್ರೋಕ್: ಗುಂಪು 1: ಆಕಾಶ್ ಮಣಿ–1 (ಕೂಟ ದಾಖಲೆ, ಕಾಲ: 2 ನಿ. 12.91 ಸೆ.). ಗುಂಪು 2: ಅಮನ್ ಸುಣಗಾರ–1 (ಕೂಟ ದಾಖಲೆ, ಕಾಲ: 2 ನಿ. 17.80 ಸೆ.), ಅಂಬರ್ ಜೆ. ಸಿಂಗ್–2

200 ಮೀ. ಫ್ರೀಸ್ಟೈಲ್: ಸಂಜೀತ್ ಜೆ.–1 ಕಾಲ: 1 ನಿ. 59.69 ಸೆ., ತರುಣ್ ಅರುಣ್–2. ಗುಂಪು 2: ರೇಣುಕಾಚಾರ್ಯ–2

4X50 ಮೀ. ಫ್ರೀಸ್ಟೈಲ್ ರಿಲೇ: ಗುಂಪು 3: ಕರ್ನಾಟಕ–3.

4X100 ಮೀ. ಫ್ರೀಸ್ಟೈಲ್ ರಿಲೇ: ಗುಂಪು 1: ಕರ್ನಾಟಕ–1 (ಕೂಟ ದಾಖಲೆ, ಕಾಲ: 3 ನಿ. 45.45 ಸೆ.). ಗುಂಪು 2: ಕರ್ನಾಟಕ–1 (ಕೂಟ ದಾಖಲೆ, ಕಾಲ: 3 ನಿ. 55.96 ಸೆ.)

ಬಾಲಕಿಯರು: 800 ಮೀ. ಫ್ರೀಸ್ಟೈಲ್: ಗುಂಪು 1: ಅದಿತಿ ಎನ್. ಮುಲಾಯ್ –1, ಕಾಲ: 9 ನಿ. 53.62 ಸೆ. ಎಂ.ವಿ. ರಿಷಿಕಾ–2. ಗುಂಪು 2: ಶ್ರೀಚರಣಿ ತುಮು–1 ಕಾಲ: 9 ನಿ.53.77 ಸೆ. ಸಬಾ ಸುಹಾನ್–2

400 ಮೀ. ಫ್ರೀಸ್ಟೈಲ್: ಗುಂಪು 3: ಮೀರಾ ನಂಬಿಯಾರ್–3

50 ಮೀ. ಬಟರ್‌ಫ್ಲೈ ಸ್ಟ್ರೋಕ್: ಗುಂಪು 1: ನೈಶಾ ಶೆಟ್ಟಿ–1 (ಕೂಟ ದಾಖಲೆ, ಕಾಲ: 30.12 ಸೆ.), ಅವನಿ ವಿಶ್ವಾಸ್–2. ಗುಂಪು 2: ಸುಹಾಸಿನಿ ಘೋಷ್ –1 ಕಾಲ: 30.89 ಸೆ.), ಮೋನ್ಯಾ ಕೌಸುಮಿ–2. ಗುಂಪು 3: ಜನನಿ–2.

50 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 2: ತಾನ್ಯಾ ಎಸ್.–1, ಕಾಲ: 37.4 ಸೆ, ರಿಯಾನ್ನಾ ಧರಿತಿ–2

200 ಮೀ. ಬ್ಯಾಕ್‌ಸ್ಟ್ರೋಕ್: ಗುಂಪು 1: ಆರುಷಿ ಅಗರವಾಲ್ –1 (ಕೂಟ ದಾಖಲೆ, ಕಾಲ: 2 ನಿ. 33.18 ಸೆ.). ಗುಂಪು 2: ನೈಷಾ –1 ಕಾಲ: 2 ನಿ. 36.3 ಸೆ.), ತಾನ್ಯಾ ಎಂ.ಎನ್–2

200 ಮೀ. ಫ್ರೀಸ್ಟೈಲ್: ಗುಂಪು 1: ಲಕ್ಷ್ಮಿ ತಿವಿಕ್ರಮ–1 (ಕೂಟ ದಾಖಲೆ, ಕಾಲ: 2 ನಿ.13.89 ಸೆ.), ಅದಿತಿ ಮುಲಾಯ್–2. ಗುಂಪು 2: ಆರ್ನಾ ಎಂ.ಪಿ.–1, ಕಾಲ: 2 ನಿ.16.41 ಸೆ. ತಿಶ್ಯಾ ಸೋನಾರ್–2

4X50 ಮೀ. ಫ್ರೀಸ್ಟೈಲ್ ರಿಲೇ: ಗುಂಪು 3: ಕರ್ನಾಟಕ 2.

4X100 ಮೀ. ಫ್ರೀಸ್ಟೈಲ್ ರಿಲೇ: ಗುಂಪು 1: ಕರ್ನಾಟಕ–1 (ಕೂಟ ದಾಖಲೆ, ಕಾಲ: 4 ನಿ.19.62 ಸೆ.). ಗುಂಪು 2: ಕರ್ನಾಟಕ–1 (ಕೂಟ ದಾಖಲೆ, ಕಾಲ: 4 ನಿ.19.27 ಸೆ.).

ವಿಶ್ವಕಪ್ ಗೆದ್ದರೆ ಆಟಗಾರರಿಗೆ ತಲಾ ₹ 25 ಲಕ್ಷ ಬಹುಮಾನ: ಹಾಕಿ ಇಂಡಿಯಾ

ನವದೆಹಲಿ (ಪಿಟಿಐ): ಪುರುಷರ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಿನ್ನದ ಪದಕ ಗೆದ್ದರೆ ತಂಡದ ಆಟಗಾರರಿಗೆ ತಲಾ ₹ 25 ಲಕ್ಷ ಮತ್ತು ನೆರವು ಸಿಬ್ಬಂದಿಗೆ ತಲಾ ₹ 5 ಲಕ್ಷ ಬಹುಮಾನ ನೀಡುವುದಾಗಿ ಹಾಕಿ ಇಂಡಿಯಾ ಘೋಷಿಸಿದೆ.

ಮುಂದಿನ ತಿಂಗಳು 13ರಿಂದ ಒಡಿಶಾದ ಭುವನೇಶ್ವರ–ರೂರ್ಕೆಲಾದಲ್ಲಿ ಟೂರ್ನಿ ನಡೆಯಲಿದೆ. ಟೂರ್ನಿಯ ಮೊದಲ ದಿನ, ಮೊದಲ ಪಂದ್ಯದಲ್ಲಿ ಭಾರತ, ಸ್ಪೇನ್ ತಂಡಕ್ಕೆ ಮುಖಾಮುಖಿಯಾಗಲಿದೆ.

ಬೆಳ್ಳಿ ಪದಕ ಜಯಿಸಿದರೆ ಆಟಗಾರರಿಗೆ ತಲಾ ₹ 15 ಲಕ್ಷ ಮತ್ತು ನೆರವು ಸಿಬ್ಬಂದಿಗೆ ₹ 3 ಲಕ್ಷ; ಕಂಚು ಗೆದ್ದರೆ ₹ 10 ಲಕ್ಷ ಮತ್ತು ₹ 2 ಲಕ್ಷ ಬಹುಮಾನ ನೀಡುವುದಾಗಿ ಹಾಕಿ ಇಂಡಿಯಾ ತಿಳಿಸಿದೆ. ಡಿ. 24ರಂದು ನಡೆದ ಹಾಕಿ ಇಂಡಿಯಾದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

'ಬಹುಮಾನ ಘೋಷಣೆಯು ಆಟಗಾರರನ್ನು ಗೆಲುವಿಗೆ ಇನ್ನಷ್ಟು ಪ್ರೇರೇಪಿಸಲಿದೆ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕೆ ತಿಳಿಸಿದ್ದಾರೆ.

ಮಲೇಷ್ಯಾದ ಕ್ವಾಲಾಲಂಪುರದಲ್ಲಿ ನಡೆದ 1975ರ ಆವೃತ್ತಿಯಲ್ಲಿ ಭಾರತ ತಂಡವು ಪಾಕಿಸ್ತಾನವನ್ನು ಸೋಲಿಸಿ ಚಿನ್ನದ ಪದಕ ಜಯಿಸಿತ್ತು. 1971ರಲ್ಲಿ ಕಂಚು ಮತ್ತು 1973ರಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿತ್ತು.

ಡಾಡ್ಜ್ ಬಾಲ್: ರಾಜ್ಯ ತಂಡ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಹಾಸನ: ಇಲ್ಲಿನ ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಡಾಡ್ಜ್ ಬಾಲ್ ಚಾಂಪಿಯನ್‌ಷಿಪ್‌ನ ಸಬ್‌ಜೂನಿಯರ್ಸ್ ವಿಭಾಗದಲ್ಲಿ ಬುಧವಾರ ಕರ್ನಾಟಕ ಹಾಗೂ ತಮಿಳುನಾಡು ತಂಡಗಳು ಫೈನಲ್ ಪ್ರವೇಶಿಸಿದವು.

ಸೆಮಿಫೈನಲ್ ಪಂದ್ಯಗಳಲ್ಲಿ ರಾಜ್ಯ ತಂಡವು ಕೇರಳವನ್ನು ಮಣಿಸಿದರೆ, ತಮಿಳುನಾಡು ತಂಡದವರು ಪುದುಚೇರಿ ವಿರುದ್ಧ ಗೆದ್ದು ಅಂತಿಮ ಘಟ್ಟಕ್ಕೆ ಅರ್ಹತೆ ಪಡೆದರು.

ಪುರುಷರ ಸೀನಿಯರ್ಸ್ ವಿಭಾಗದಲ್ಲಿ ಕರ್ನಾಟಕ– ಮಹಾರಾಷ್ಟ್ರ, ಆಂಧ್ರಪ್ರದೇಶ– ತಮಿಳುನಾಡು ಹಾಗೂ ಮಹಿಳೆಯರ ಸೀನಿಯರ್ಸ್ ವಿಭಾಗದಲ್ಲಿ ಮಹಾರಾಷ್ಟ್ರ –ತಮಿಳುನಾಡು, ಕರ್ನಾಟಕ– ಆಂಧ್ರಪ್ರದೇಶ, ಸಬ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಮಹಾರಾಷ್ಟ್ರ ಮತ್ತು ತಮಿಳುನಾಡು, ಕರ್ನಾಟಕ ಮತ್ತು ಕೇರಳ ನಡುವೆ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಡಿ.29ರಂದು ಈ ಹಣಾಹಣಿಗಳು ನಡೆಯಲಿವೆ.

ಟಾಮ್ ಲಥಾಮ್– ಎಎಫ್‌ಪಿ ಚಿತ್ರ

ಟೆಸ್ಟ್: ಕೇನ್, ಲಥಾಮ್ ಶತಕದ ಸೊಬಗು

ಕರಾಚಿ (ಎಎಫ್‌ಪಿ): ಕೇನ್ ವಿಲಿಯಮ್ಸನ್ ಮತ್ತು ಟಾಮ್ ಲಥಾಮ್ ಶತಕಗಳ ಬಲದಿಂದ ನ್ಯೂಜಿಲೆಂಡ್ ತಂಡವು ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಪಾಕಿಸ್ತಾನದ ವಿರುದ್ಧ ಉತ್ತಮ ಮೊತ್ತದತ್ತ ದಾಪುಗಾಲಿಟ್ಟಿದೆ.

ಕರಾಚಿ ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಬುಧವಾರದ ಆಟದ ಅಂತ್ಯಕ್ಕೆ ನ್ಯೂಜಿಲೆಂಡ್, ಆರು ವಿಕೆಟ್‌ಗೆ 440 ರನ್ ಗಳಿಸಿದೆ. ಮೊದಲ ಇನಿಂಗ್ಸ್‌ನಲ್ಲಿ ಎರಡು ರನ್‌ಗಳ ಮುನ್ನಡೆ ಸಾಧಿಸಿದೆ.

ಮಂಗಳವಾರ ವಿಕೆಟ್ ನಷ್ಟವಿಲ್ಲದೆ 165 ರನ್ ಗಳಿಸಿದ್ದ ನ್ಯೂಜಿಲೆಂಡ್ ಪರ, ಲಥಾಮ್ (113) ಹಾಗೂ ಡೆವೊನ್ ಕಾನ್ವೆ (92) ಮೊದಲ ವಿಕೆಟ್ ಜೊತೆಯಾಟದಲ್ಲಿ 183 ರನ್ ಸೇರಿಸಿದರು. ಬಳಿಕ ವಿಲಿಯಮ್ಸನ್ (ಬ್ಯಾಟಿಂಗ್ 105) ಕೊಡುಗೆ ನೀಡಿದರು.

ವಿಲಿಯಮ್ಸನ್ ಅವರು ಟೆಸ್ಟ್‌ನಲ್ಲಿ 25ನೇ ಶತಕ ಗಳಿಸಿದರೆ, ಲಥಾಮ್ 13ನೇ ಶತಕ ದಾಖಲಿಸಿದರು.

ಎರಡು ಜೀವದಾನಗಳ ಅವಕಾಶ ಪಡೆದ ವಿಲಿಯಮ್ಸನ್ ಅವರ ಇನಿಂಗ್ಸ್‌ನಲ್ಲಿ 11 ಬೌಂಡರಿಗಳಿದ್ದವು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 130.5 ಓವರ್‌ಗಳಲ್ಲಿ 438. ನ್ಯೂಜಿಲೆಂಡ್ 136 ಓವರ್‌ಗಳಲ್ಲಿ 6ಕ್ಕೆ 440 (ಟಾಮ್ ಲಥಾಮ್ 113, ಡೆವೊನ್ ಕಾನ್ವೆ 92, ಕೇನ್ ವಿಲಿಯಮ್ಸನ್ ಬ್ಯಾಟಿಂಗ್ 105, ಡೆರಿಲ್ ಮಿಚೆಲ್ 42, ಟಾಮ್ ಬ್ಲಂಡೆಲ್ 47; ಮೊಹಮ್ಮದ್ ವಾಸೀಂ 81ಕ್ಕೆ 1, ಅಬ್ರಾರ್ ಅಹಮದ್ 143ಕ್ಕೆ 3, ನೂಮಾನ್ ಅಲಿ 137ಕ್ಕೆ 2).

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಗೋವಾ ವಿರುದ್ಧ ಕರ್ನಾಟಕ ಬೃಹತ್ ಮೊತ್ತ

ನೂರನೇ ಪಂದ್ಯ; ಪಾಂಡೆ ಇನ್ನೂರು

ಪ್ರಜಾವಾಣಿ ವಾರ್ತೆ

ಪಣಜಿ: ಅನುಭವಿ ಬ್ಯಾಟರ್ ಮನೀಷ್ ಪಾಂಡೆ, ವೃತ್ತಿಜೀವನದ ತಮ್ಮ ನೂರನೇ ಪ್ರಥಮ ದರ್ಜೆ ಪಂದ್ಯದ ಸಂಭ್ರಮವನ್ನು ಭರ್ಜರಿ ದ್ವಿಶತಕದ ಮೂಲಕ ಆಚರಿಸಿಕೊಂಡರು.

ಗೋವಾ ವಿರುದ್ಧದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಎರಡನೇ ದಿನದಾಟದಲ್ಲಿ ಮೆರೆದಾಡಿದ ಪಾಂಡೆ (ಔಟಾಗದೆ 208) ಕರ್ನಾಟಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಮಯಂಕ್ ಅಗರವಾಲ್ ಬಳಗ 7 ವಿಕೆಟ್ ನಷ್ಟಕ್ಕೆ 603 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಬುಧವಾರದ ಆಟದ ಅಂತ್ಯಕ್ಕೆ ಗೋವಾ ಮೊದಲ ಇನಿಂಗ್ಸ್‌ನಲ್ಲಿ ಒಂದು ವಿಕೆಟ್‌ಗೆ 45 ರನ್ ಗಳಿಸಿತ್ತು.

ಕರ್ನಾಟಕ ತಂಡ 3 ವಿಕೆಟ್‌ಗೆ 294 ರನ್‌ಗಳಿಂದ ಎರಡನೇ ದಿನದಾಟ ಮುಂದುವರಿಸಿತ್ತು. ಮೊದಲ ದಿನ ಎಂಟು ರನ್‌ಗಳೊಂದಿಗೆ ಅಜೇಯ-ರಾಗುಳಿದಿದ್ದ ಪಾಂಡೆ, ಎರಡನೇ ದಿನ ಭರ್ತಿ 200 ರನ್ ಕಲೆಹಾಕಿದರು. ಗೋವಾ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಅವರು 14 ಬೌಂಡರಿ ಮತ್ತು 11 ಸಿಕ್ಸರ್ ಹೊಡೆದರು.

ಮಂಗಳವಾರ 73 ರನ್ ಗಳಿಸಿದ್ದ ವಿಶಾಲ್ ಒಣತ್ (91) ಅವರು ಒಂಬತ್ತು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಬಿ.ಆರ್.ಶರತ್ ಮತ್ತು ಕೆ.ಗೌತಮ್ ಉತ್ತಮ ಆರಂಭ ಪಡೆದರೂ ಅದನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸಲು ವಿಫಲರಾದರು. ಪಾಂಡೆ ಅವರು ಇವರಿಬ್ಬರ ಜತೆ 5 ಹಾಗೂ 6ನೇ ವಿಕೆಟ್‌ಗೆ ಕ್ರಮವಾಗಿ 57 ಹಾಗೂ 72 ರನ್‌ಗಳನ್ನು ಸೇರಿಸಿದರು. ಆ ಬಳಿಕ ಶುಭಾಂಗ್ ಹೆಗ್ಡೆ (3) ಅವರೊಂದಿಗೆ 7ನೇ ವಿಕೆಟ್‌ಗೆ 123 ರನ್‌ಗಳನ್ನು ಕಲೆಹಾಕಿ ಕರ್ನಾಟಕವನ್ನು ಉತ್ತಮ ಮೊತ್ತದತ್ತ ಮುನ್ನಡೆಸಿದರು.



ದ್ವಿಶತಕ ಗಳಿಸಿದ ಮನೀಷ್ ಪಾಂಡೆ

ಶುಭಾಂಗ್ ಔಟಾಗುವುದರೊಂದಿಗೆ ಮಯಂಕ್ ಅವರು ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡರು.

ಆಕ್ರಮಣ ಮತ್ತು ರಕ್ಷಣೆಯನ್ನು ಮೈಗೂಡಿಸಿಕೊಂಡು ಆಡಿದ ಪಾಂಡೆ, ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಐದು ವರ್ಷಗಳ ಬಿಡುವಿನ ಬಳಿಕ ದ್ವಿಶತಕ ಸಾಧನೆ ಮಾಡಿದರು. ಶತಕ ಪೂರೈಸಿದ ಬೆನ್ನಲ್ಲೇ ಪಾಂಡೆ ಅವರಿಗೆ ಜೀವದಾನ ಲಭಿಸಿತ್ತು. ಬದಲಿ ಆಟಗಾರ ದೀಪರಾಜ್ ಗಾಂವ್ಕರ್, ಸುಲಭ ಕ್ಯಾಚ್ ಕೈಚೆಲ್ಲಿದ್ದರು. ಆ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಇನಿಂಗ್ಸ್ ಕಟ್ಟಿದರು.

ಮೊದಲ ಇನಿಂಗ್ಸ್ ಆರಂಭಿಸಿದ ಗೋವಾ ತಂಡ, ಅಮೋಘ್ ದೇಸಾಯಿ ಅವರನ್ನು ಬೇಗನೇ ಕಳೆದುಕೊಂಡಿತು. ರೋನಿತ್ ಮೋರೆ ಎಸೆತದಲ್ಲಿ ಬೌಲ್ಡ್ ಆದರು. ಸುಮೀರನ್ ಆಮೋಣಕರ್ (ಬ್ಯಾಟಿಂಗ್ 30) ಇನ್ನಷ್ಟು ವಿಕೆಟ್ ಬೀಳದಂತೆ ನೋಡಿಕೊಂಡರು. ಆತಿಥೇಯ ತಂಡ ಇನ್ನೂ 558 ರನ್‌ಗಳ ಹಿನ್ನಡೆಯಲ್ಲಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 148.2 ಓವರ್‌ಗಳಲ್ಲಿ 7ಕ್ಕೆ 603 ಡಿಕ್ಲೇರ್ಡ್ (ಮಂಗಳವಾರದ ಆಟದ ಅಂತ್ಯಕ್ಕೆ 3ಕ್ಕೆ294))

ವಿಶಾಲ್ ಸಿ ದೇಸಾಯಿ ಬಿ ಮಿಸಾಳ್ 91 (211 ಎ, 4X11), ಮನೀಷ್ ಔಟಾಗದೆ 208 (186 ಎ, 4X14, 6X11), ಶರತ್ ಎಲ್‌ಬಿಡಬ್ಲ್ಯು ಬಿ ಲಾಡ್ 29 (35 ಎ, 4X6), ಗೌತಮ್ ಸಿ ಮತ್ತು ಬಿ ಮಿಸಾಳ್ 16 (37 ಎ, 6X1), ಶುಭಾಂಗ್ ಸಿ ಕೆರ್ಕರ್ ಬಿ ತೆಂಡೂಲ್ಕರ್ 39 (67 ಎ, 4X3, 6X2)

ಇತರೆ 21 (ಬೈ 8, ಲೆಗ್‌ಬೈ 7, ವೈಡ್ 3, ನೋಬಾಲ್ 3)

ವಿಕೆಟ್ ಪತನ: 4–351 (ವಿಶಾಲ್ ಒಣತ್; 103.6), 5–408 (ಬಿ.ಆರ್. ಶರತ್; 115.5), 6–480 (ಕೆ.ಗೌತಮ್; 127.5), 7–603 (ಶುಭಾಂಗ್ ಹೆಗ್ಡೆ; 148.2)

ಬೌಲಿಂಗ್: ಲಕ್ಷ್ಯ ಗರ್ಗ್ 27–3–98–1, ಅರ್ಜುನ್ ತೆಂಡೂಲ್ಕರ್ 26.2–4–79–2, ಫೆಲಿಕ್ಸ್ ಅಲೆಮಾವೊ 24–0–157–0, ದರ್ಶನ್ ಮಿಸಾಲ್ 47–5–145–3, ಮೋಹಿತ್ ರೆಡ್ಕರ್ 14–0–55–0, ಸಿದ್ಧೇಶ್ ಲಾಡ್ 7–0–38–1, ಸುಯಶ್ ಪ್ರಭುದೇಸಾಯಿ 3–0–16–0

ಗೋವಾ 23 ಓವರ್‌ಗಳಲ್ಲಿ 1 ವಿಕೆಟ್‌ಗೆ 45

ಆಮೋಣಕರ್ ಬ್ಯಾಟಿಂಗ್ 30 (77 ಎ, 4X6), ಅಮೋಘ್ ಬಿ ಮೋರೆ 5 (23 ಎ, 4X1), ಸುಯಶ್ ಬ್ಯಾಟಿಂಗ್ 6 (38 ಎ)

ಇತರೆ 4 (ಲೆಗ್‌ಬೈ4)

ವಿಕೆಟ್ ಪತನ: 1–22 (ಅಮೋಘ್ ದೇಸಾಯಿ; 7.6))

ಬೌಲಿಂಗ್: ವಿದ್ವತ್ ಕಾವೇರಪ್ಪ 4–2–16–0, ರೋನಿತ್ ಮೋರೆ 7–3–10–1, ಕೆ.ಗೌತಮ್ 8–6–8–0, ವಿಜಯಕುಮಾರ್ ವೈಶಾಖ್ 3–0–6–0, ಶುಭಾಂಗ್ ಹೆಗ್ಡೆ 1–0–1–0

‘ವಾರ್ನರ್ ದ್ವಿಶತಕ ಸ್ಫೂರ್ತಿ’

ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಅವರು ಮಂಗಳವಾರ ತಮ್ಮ 100ನೇ ಟೆಸ್ಟ್‌ನಲ್ಲಿ ದ್ವಿಶತಕ ಸಾಧನೆ ಮಾಡಿದ್ದರು. ಮರುದಿನ ಮನೀಷ್ ಪಾಂಡೆ ಅಂತಹದೇ ಸಾಧನೆ ಮಾಡಿದ್ದಾರೆ.

‘ಡೇವಿಡ್ ವಾರ್ನರ್ ಅವರ ದ್ವಿಶತಕದಾಟವನ್ನು ನಾನು ಯೂಟ್ಯೂಬ್‌ನಲ್ಲಿ ವೀಕ್ಷಿಸಿದ್ದೆ. ಅವರ ಆಟ ಸ್ಫೂರ್ತಿ ನೀಡಿತು’ ಎಂದು ಪಾಂಡೆ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.

‘100 ಪಂದ್ಯಗಳನ್ನು ಆಡುವುದು ಸಾಮಾನ್ಯ ವಿಷಯವಲ್ಲ. ಇದಕ್ಕಾಗಿ 14–15 ವರ್ಷಗಳು ಬೇಕಾದವು. ಈ ಇನಿಂಗ್ಸ್ ನನ್ನ ಪಾಲಿಗೆ ಮಹತ್ವದ್ದಾಗಿದೆ’ ಎಂದು 2017–18ರ ಋತುವಿನ ಬಳಿಕ ಮೊದಲ ದ್ವಿಶತಕ ಗಳಿಸಿದ ಅವರು ಹೇಳಿದರು.

ಅರ್ಷದೀಪ್ ಸಿಂಗ್

ಐಸಿಸಿ ಪ್ರಶಸ್ತಿ: ಸ್ಪರ್ಧೆಯಲ್ಲಿ ಅರ್ಷದೀಪ್

ದುಬೈ (ಪಿಟಿಐ): ಭಾರತದ ವೇಗದ ಬೌಲರ್ ಅರ್ಷದೀಪ್ ಸಿಂಗ್ ಅವರು ಐಸಿಸಿ ವರ್ಷದ ಉದಯೋನ್ಮುಖ ಆಟಗಾರ ಪ್ರಶಸ್ತಿಗೆ ನಾಮನಿರ್ದೇಶ-ನಗೊಂಡಿದ್ದಾರೆ. ಅವರು ಮಾರ್ಕೊ ಜಾನ್ಸನ್, ಫಿನ್ ಅಲೆನ್ ಮತ್ತು ಇಬ್ರಾಹಿಂ ಜದ್ರಾನ್ ಅವರೊಂದಿಗೆ ಪೈಪೋಟಿ ನಡೆಸಲಿದ್ದಾರೆ.

ಪ್ರಶಸ್ತಿ ವಿಜೇತರ ಆಯ್ಕೆಗೆ ಜನವರಿ ತಿಂಗಳಲ್ಲಿ ಮತದಾನ ನಡೆಯಲಿದೆ ಎಂದು ಐಸಿಸಿ ಪ್ರಕಟಣೆ ತಿಳಿಸಿದೆ.

ಮಹಿಳೆಯರ ವಿಭಾಗದಲ್ಲಿ ಭಾರತದ ವೇಗಿ ರೇಣುಕಾ ಸಿಂಗ್ ಮತ್ತು ಬ್ಯಾಟರ್ ಯಷ್ಟಿಕಾ ಭಾಟಿಯಾ ಅವರು ಆಸ್ಟ್ರೇಲಿಯಾದ ಡಾರ್ಸಿ ಬ್ರೌನ್ ಹಾಗೂ ಇಂಗ್ಲೆಂಡ್‌ನ ಅಲೈಸ್ ಕ್ಯಾಪ್ಸಿ ಜತೆ ಉದಯೋನ್ಮುಖ ಆಟಗಾರ್ತಿ ಪ್ರಶಸ್ತಿಗೆ ಸ್ಪರ್ಧೆಯಲ್ಲಿದ್ದಾರೆ.

ಅರ್ಷದೀಪ್ ಅವರು ಅಂತರರಾ-ಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಆರು ತಿಂಗಳಲ್ಲೇ ಈ ಪ್ರಶಸ್ತಿಗೆ ನಾಮನಿ-ರ್ದೇಶನಗೊಂಡಿರುವುದು ವಿಶೇಷ.

21 ಟಿ20 ಪಂದ್ಯಗಳನ್ನು ಆಡಿರುವ ಅವರು 18.12ರ ಸರಾಸರಿಯಲ್ಲಿ 33 ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ.

ಮೆಲ್ಬರ್ನ್‌ನಲ್ಲಿ ನಡೆದಿದ್ದ ಪಾಕಿಸ್ತಾನ ವಿರುದ್ಧದ ‘ಹೈವೋಲ್ಟೇಜ್’ ಪಂದ್ಯದಲ್ಲಿ ಅವರು ಬಾಬರ್ ಅಜಂ ಮತ್ತು ಮೊಹಮ್ಮದ್ ರಿಜ್ವಾನ್ ವಿಕೆಟ್‌ಗಳು ಸೇರಿದಂತೆ 32 ರನ್‌ಗಳಿಗೆ ಮೂರು ವಿಕೆಟ್ ಪಡೆದಿದ್ದರು.

ಕ್ಯಾರಿ ಶತಕ: ಆಸ್ಟ್ರೇಲಿಯಾ ಮೇಲುಗೈ

ಮೆಲ್ಬರ್ನ್ (ಎಪಿ): ಆಸ್ಟ್ರೇಲಿಯಾ ತಂಡ, ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಇನಿಂಗ್ಸ್ ಗೆಲುವಿನ ನಿರೀಕ್ಷೆಯಲ್ಲಿದೆ.

ಮೆಲ್ಬರ್ನ್‌ನಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನ ಅಲೆಕ್ಸ್ ಕ್ಯಾರಿ (111 ರನ್, 149 ಎ) ಗಳಿಸಿದ ಶತಕದ ನೆರವಿನಿಂದ ಆತಿಥೇಯ ತಂಡ 8 ವಿಕೆಟ್‌ಗಳಿಗೆ 575 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

386 ರನ್‌ಗಳ ಹಿನ್ನಡೆಯೊಂದಿಗೆ ಎರಡನೇ ಇನಿಂಗ್ಸ್ ಆರಂಭಿಸಿರುವ ದಕ್ಷಿಣ ಆಫ್ರಿಕಾ ಬುಧವಾರದ ಆಟದ ಅಂತ್ಯಕ್ಕೆ ಒಂದು ವಿಕೆಟ್‌ಗೆ 15 ರನ್ ಗಳಿಸಿದೆ. ಡೀನ್ ಎಲ್ಗರ್ (0) ಖಾತೆ ತೆರೆಯದೆಯೇ ಪೆವಿಲಿಯನ್‌ಗೆ ಮರಳಿದರು. ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 371 ರನ್ ಗಳಿಸಬೇಕಾದ ಸವಾಲು ಪ್ರವಾಸಿ ತಂಡದ ಮುಂದಿದೆ.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಎರಡನೇ ದಿನ ಡೇವಿಡ್ ವಾರ್ನರ್ ದ್ವಿಶತಕ ಗಳಿಸಿ ಮಿಂಚಿದ್ದರೆ, ಮೂರನೇ ದಿನ ಕ್ಯಾರಿ ಮೆರೆದಾಡಿದರು. 9 ರನ್‌ಗಳೊಂದಿಗೆ ಆಟ ಮುಂದುವರಿಸಿದ್ದ ಅವರು ತಮ್ಮ 14ನೇ ಟೆಸ್ಟ್‌ನಲ್ಲಿ ಚೊಚ್ಚಲ ಶತಕ ಸಾಧನೆ ಮಾಡಿದರು.

ಕ್ಯಾಮರಾನ್ ಗ್ರೀನ್ (51) ಮತ್ತು ನೇಥನ್ ಲಯನ್ (25) ಅವರು ತಂಡದ ಮೊತ್ತ ಹೆಚ್ಚಿಸಲು ನೆರವಾದರು. ಕ್ಯಾರಿ ಹಾಗೂ ಗ್ರೀನ್ 117 ರನ್‌ಗಳ ಜತೆಯಾಟ ನೀಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 68.4 ಓವರ್‌ಗಳಲ್ಲಿ 189. ಆಸ್ಟ್ರೇಲಿಯಾ 145 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 575 ಡಿಕ್ಲೇರ್ಡ್ (ಟ್ರ್ಯಾವಿಸ್ ಹೆಡ್ 51, ಕ್ಯಾಮರಾನ್ ಗ್ರೀನ್ ಔಟಾಗದೆ 51, ಅಲೆಕ್ಸ್ ಕ್ಯಾರಿ 111, ನೇಥನ್ ಲಯನ್ 25, ಎನ್ರಿಚ್ ನಾರ್ಕಿಯಾ 92ಕ್ಕೆ 3, ಕಗಿಸೊ ರಬಾಡ 144ಕ್ಕೆ 2) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 7 ಓವರ್‌ಗಳಲ್ಲಿ 1 ವಿಕೆಟ್‌ಗೆ 15

ಶತಕ ಗಳಿಸಿದ ಅಲೆಕ್ಸ್ ಕ್ಯಾರಿ ಸಂಭ್ರಮ –ಎಎಫ್‌ಪಿ ಚಿತ್ರ

ನೆಟ್‌ಬಾಲ್: ರಾಜ್ಯದ ಬಾಲಕಿಯರಿಗೆ ಬೆಳ್ಳಿ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದೆ.

ರಾಜ್ಯದ ಬಾಲಕಿಯರು ಫೈನಲ್ ಪಂದ್ಯದಲ್ಲಿ 36–38ರಿಂದ ಕೇರಳ ತಂಡಕ್ಕೆ ಸೋತರು.

ಕರ್ನಾಟಕ ಮತ್ತು ಹರಿಯಾಣದ ಬಾಲಕರ ತಂಡಗಳು ಜಂಟಿಯಾಗಿ ಕಂಚಿನ ಪದಕ ತಮ್ಮದಾಗಿಸಿಕೊಂಡ-ವು. ಉಭಯ ತಂಡಗಳ ನಡುವಣ ಮೂರನೇ ಸುತ್ತಿನ ಪಂದ್ಯವು 28–28ರಿಂದ ಟೈನಲ್ಲಿ ಅಂತ್ಯವಾಯಿತು.

ಹಾನಿಕಾರಕ ರಸಾಯನಿಕಗಳಿಂದ ನಿಮ್ಮ Skin ಸಂರಕ್ಷಿಸಿ ಮತ್ತು ಆಯುರ್ವೇದಿಕ ಸುರಕ್ಷೆ ನೀಡಿರಿ

New Dr. Juneja's Roop Mantra®
Ayurvedic Face Cream & Face Washes

ರೂಪ ಮಂತ್ರ ಆಯುರ್ವೇದಿಕ ಕ್ರೀಮ್‌ನಲ್ಲಿ ಅಡಗಿರುವ ಅಲೋವೆರಾ, ತುಳಸಿ, ದ್ರಾಕ್ಷಿ, ಹರಿದ್ರ, ಚಂದನ, ಬದಾಮ್ ಇತ್ಯಾದಿ ಮೂಲಿಕೆಗಳ ಸತ್ವಭರಿತ ಮಿಶ್ರಣವು ತ್ವಚೆಯಲ್ಲಿನ ನೈಸರ್ಗಿಕ ತೇವಾಂಶವನ್ನು ನಿರ್ವಹಿಸುವ ಮೂಲಕ ತ್ವಚೆಗೆ ಸೂಕ್ಷ್ಮ ಚಿಕಿತ್ಸಕಾರಕದಂತೆ ಕಾರ್ಯನಿರ್ವಹಿಸುತ್ತದೆ. ಇದು ಕಾಸ್ಮೆಟಿಕ್ ಉತ್ಪನ್ನವಲ್ಲ, ಆಯುರ್ವೇದಿಕ ಔಷಧಿಯಾಗಿದೆ.

ನಾನು ವಂದನಾ, ಮಹಾರಾಷ್ಟ್ರ ನಿವಾಸಿ. ನಾನು, ನನ್ನ ಶುಷ್ಕ ಮತ್ತು ಕಳೆಗುಂದಿದ ತ್ವಚೆಯಿಂದಾಗಿ ತುಂಬಾ ಚಿಂತಿತಳಾಗಿದ್ದೆ. ಆದರೆ, ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಉಪಯೋಗಿಸಿದ ನಂತರ, ನನ್ನ ತ್ವಚೆಯ ಆರೋಗ್ಯದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದವು. ರೂಪ ಮಂತ್ರದ ಎಲ್ಲಾ ಉತ್ಪನ್ನಗಳು ನೈಜವಾಗಿವೆ ಮತ್ತು ಅವುಗಳನ್ನು ಬಳಸಲು ನನಗೆ ತುಂಬಾ ಖುಷಿಯಾಗುತ್ತದೆ.

ನಾನು ಮನದೀಪ್ ಕೌರ್, ದೆಹಲಿ ನಿವಾಸಿ. ಕೆಲವು ವರ್ಷಗಳ ಹಿಂದೆ ನನ್ನ ತ್ವಚೆಯು ನಿಸ್ತೇಜಗೊಂಡು ಹಾನಿಯಾದ ರೀತಿಯಲ್ಲಿ ಗೋಚರಿಸುತ್ತಿತ್ತು. ಹಲವಾರು ಪ್ರಾಡಕ್ಟ್‌ಗಳನ್ನು ಬಳಸಿ ನೋಡಿದೆ, ಏನೂ ಪ್ರಯೋಜನವಾಗಲಿಲ್ಲ. ಬಳಿಕ ಒಮ್ಮೆ, ನನ್ನ ಗೆಳತಿಯೊಬ್ಬಳು ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಉಪಯೋಗಿಸುವಂತೆ ಸೂಚಿಸಿದಳು. ಈಗ ನಾನು ಅವಳಿಗೆ ಮತ್ತು ರೂಪ ಮಂತ್ರಕ್ಕೆ ಕೂಡ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ, ಈಗ ನನ್ನ ತ್ವಚೆಯು ಸಂಪೂರ್ಣ ಸುಧಾರಣೆ ಆಗಿದೆ.

ನನ್ನ ಹೆಸರು ವಿಕಾಸಕುಮಾರ್, ಉತ್ತರಪ್ರದೇಶ ನಿವಾಸಿ. ನನಗೆ ಸ್ಕಿನ್ ಪಿಗ್ಮೆಂಟೇಶನ್ ಸಮಸ್ಯೆ ಕಾಡುತ್ತಿತ್ತು. ನನ್ನ ಮುಖದ ಮೇಲಿನ ಚರ್ಮ ಪೂರ್ತಿ, ವಿಶೇಷವಾಗಿ ಕಣ್ಣುಗಳ ಸುತ್ತಲಿನ ತ್ವಚೆಯ ಮೇಲೆ ತುಂಬಾ ಪರಿಣಾಮ ಉಂಟಾಗಿತ್ತು. ನಂತರ ಒಮ್ಮೆ, ರೂಪ ಮಂತ್ರ ಕ್ರೀಮ್ ಮತ್ತು ಫೇಸ್ ವಾಷ್ ಕುರಿತು ನನಗೆ ಮಾಹಿತಿ ಸಿಕ್ಕಿತು. ಅದನ್ನು ನಿಯಮಿತವಾಗಿ ಬಳಸಿದ ನಂತರ ಪಿಗ್ಮೆಂಟೇಶನ್ ಸಮಸ್ಯೆ ಅಷ್ಟೆ ಅಲ್ಲದೆ, ಮುಖದ ಮೇಲಿನ ಮೊಡವೆಗಳು ಕೂಡ ಕಡಿಮೆಯಾದವು. ರೂಪ ಮಂತ್ರಕ್ಕೆ ನನ್ನ ದೊಡ್ಡ ಸಲಾಂ.

ನನ್ನ ಹೆಸರು ಟೀಕಾರಾಮ್ ತ್ಯಾಗಿ, ಮಧ್ಯಪ್ರದೇಶ ನಿವಾಸಿ. ನಾನು ಮೊಡವೆ, ಗುಳ್ಳೆ ಮತ್ತು ಕಪ್ಪು ಕಲೆಗಳಂತಹ ತ್ವಚೆಯ ಸಮಸ್ಯೆಗಳಿಂದ ಬಳಲುತ್ತಿದ್ದೆ. ಇದರಿಂದಾಗಿ ನನಗೆ ಅತೀವ ಬೇಸರವಾಗಿತ್ತು. ನಂತರ ಒಮ್ಮೆ, ಸ್ನೇಹಿತನೊಬ್ಬ ರೂಪ ಮಂತ್ರ ಕಂಪ್ಲೀಟ್ ಟ್ರೀಟ್‌ಮೆಂಟ್ ತೆಗೆದುಕೊಳ್ಳುವಂತೆ ಸೂಚಿಸಿದ. ನಾನು ಕೂಡ ಹಾಗೇ ಮಾಡಿದೆ, ಅದನ್ನು ನಿಯಮಿತವಾಗಿ ಬಳಸಿದ್ದರಿಂದ ತ್ವಚೆಯ ಸಮಸ್ಯೆಗಳಿಂದ ಮುಕ್ತಿ ಪಡೆಯಲು ಅನುಕೂಲವಾಯಿತು. ಇದು ಬಳಸಲು ಸುರಕ್ಷಿತವಾಗಿದೆ, ಉತ್ತಮ ಫಲಿತಾಂಶಗಳನ್ನು ನೀಡುತ್ತದೆ ಮತ್ತು ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ.

ನಾನು ಲತಾ ಕೋಟ್ಲಾವರ್, ಮಹಾರಾಷ್ಟ್ರ ನಿವಾಸಿ. ನನ್ನ ತ್ವಚೆ-ಯು ಕಳೆಗುಂದಿದಂತಾಗಿ, ಒಣಗಿ, ನಿರ್ಜೀವ ಚರ್ಮದಂತೆ ಕಾಂತಿ ಕಳೆದುಕೊಂಡಿತ್ತು. ಈ ಸಮಸ್ಯೆಗೆ ಸೂಕ್ತ ಪರಿಹಾರವೂ ಸಿಗಲಾರದಿದ್ದಕೆ ನಾನು ತುಂಬಾ ಬೇಜಾರಲ್ಲಿದ್ದೆ. ಒಂದು ದಿನ ಅದೃಷ್ಟವಶಾತ್, ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಜಾಹೀರಾತು ನೋಡಿದೆ. ಕೂಡಲೇ ಅದನ್ನು ಉಪಯೋಗಿಸಲು ಪ್ರಾರಂಭಿಸಿದೆ. ಕೆಲವೇ ದಿನಗಳಲ್ಲಿ ಮುಖದ ಮೇಲಿನ ನಿಸ್ತೇಜ ತ್ವಚೆಗೆ ಜೀವ ಬಂದಂತಾಯಿತು. ಅದರ ಫಲಿತಾಂಶಗಳಿಂದ ನನಗೆ ತುಂಬಾ ಸಂತೋಷವಾಯಿತು. ಪ್ರತಿಯೊಬ್ಬರೂ ಇದನ್ನು ಪ್ರಯತ್ನಿಸಿ ನೋಡಲೇಬೇಕು.

ನನ್ನ ಹೆಸರು ಸುಷ್ಮಾ ಕುಮಾರಿ, ಬಿಹಾರ ನಿವಾಸಿ. ನನ್ನ ತ್ವಚೆಯು ಕಳೆಗುಂದಿ ಒರಟು ಒರಟಾಗಿತ್ತು ಮತ್ತು ನನಗೆ ಮೊಡವೆ ಹಾಗೂ ಗುಳ್ಳೆಗಳ ಸಮಸ್ಯೆ ಕೂಡ ಬಾಧಿಸುತ್ತಲಿತ್ತು. ಆದರೆ ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಬಳಸಿದ ನಂತರ ನನ್ನ ತ್ವಚೆಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿತು. ಇಂತಹ ತ್ವಚೆಯ ಸಮಸ್ಯೆಗಳಿಂದ ನಿವಾರಣೆ ಪಡೆಯಲು ರೂಪ ಮಂತ್ರ ಬಳಸಬೇಕು ಎಂದು ನಾನು ಎಲ್ಲರಿಗೂ ಶಿಫಾರಸ್ಸು ಮಾಡಬಯಸುತ್ತೇನೆ.

ನಾನು ಶಾಹೀದ್ ಅಲಿ, ಉತ್ತರಪ್ರದೇಶ ನಿವಾಸಿ. ಮೊಡವೆ, ಗುಳ್ಳೆ ಮತ್ತು ಕಪ್ಪು ಕಲೆಗಳು ನನ್ನ ಚರ್ಮದ ಸಾಮಾನ್ಯ ಸಮಸ್ಯೆಗಳಾಗಿದ್ದವು. ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್‌ಗಳನ್ನು ನಿಯಮಿತವಾಗಿ ಬಳಸಿದ ಮೇಲೆ, ನನ್ನ ತ್ವಚೆಯ ಸಮಸ್ಯೆಗಳು ಕ್ರಮೇಣವಾಗಿ ಕಡಿಮೆಯಾದವು. ಈಗ ನನ್ನ ಮುಖದ ಮೇಲಿನ ತ್ವಚೆಯ ಸಮಸ್ಯೆಗಳು ಸಾಕಷ್ಟು ಕಡಿಮೆಯಾಗಿವೆ. ಇದೆಲ್ಲ ರೂಪ ಮಂತ್ರ ಕ್ರೀಮ್‌ನ ಜಾದೂ ಆಗಿದೆ. ರೂಪ ಮಂತ್ರಕ್ಕೆ ಧನ್ಯವಾದಗಳು.

ನಾನು ಕಾಲೂ ಕುಮಾರ್, ಹರ್ಯಾಣ ನಿವಾಸಿ. ಕೆಲವು ತಿಂಗಳ ಹಿಂದೆ ತನ್ನ ತ್ವಚೆಯು ಕಳಾಹೀನವಾಗಿ ಕಾಣುತ್ತಲಿತ್ತು. ಅಲ್ಲದೆ, ಮೊಡವೆ ಮತ್ತು ಗುಳ್ಳೆಗಳ ಸಮಸ್ಯೆ ಕೂಡ ನನ್ನನ್ನು ಪೀಡಿಸುತ್ತಿತ್ತು. ನಂತರ ಒಮ್ಮೆ ನನಗೆ, ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಬಗ್ಗೆ ಟಿವಿ ಜಾಹೀರಾತಿನಿಂದ ತಿಳಿಯಿತು. ನಾನು ಅದನ್ನು ಉಪಯೋಗಿಸಲು ಪ್ರಾರಂಭಿಸಿದೆ ಮತ್ತು 3–4 ವಾರಗಳಲ್ಲಿ ತ್ವಚೆಯ ಸ್ಥಿತಿಗತಿಯು ಸುಧಾರಣೆ ಆಗತೊಡಗಿತ್ತು. ಇನ್ಯಾರಿಗಾದರೂ ನನ್ನಂತೆಯೇ ಸಮಸ್ಯೆ ಇದ್ದಲ್ಲಿ, ದಯವಿಟ್ಟು ಒಂದು ಸಲ ರೂಪ ಮಂತ್ರ ಬಳಸಿ ನೋಡಿ ಎಂದು ಹೇಳಬಯಸುತ್ತೇನೆ.

ನಾನು ಸತೀಶಕುಮಾರ್, ಉತ್ತರಪ್ರದೇಶ ನಿವಾಸಿ. ಮುಖದ ಮೇಲಿನ ಮೊಡವೆ, ಗುಳ್ಳೆ, ಕಪ್ಪು ಕಳೆಗಳಿಂದಾಗಿ ನನಗೆ ತುಂಬಾ ಬೇಸರವಾಗಿತ್ತು. ನಂತರ ಒಮ್ಮೆ ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಉಪಯೋಗಿಸಲು ಪ್ರಾರಂಭಿಸಿದೆ ಮತ್ತು ಅದನ್ನು ನಿಯಮಿತವಾಗಿ ಬಳಸಿದ್ದರಿಂದ ಮುಖದ ಮೇಲಿನ ಸಮಸ್ಯೆಗಳು ಕಡಿಮೆಯಾದವು. ಅದನ್ನ ಬಳಸಿದ ನಂತರ ಉತ್ತಮ ಫಲಿತಾಂಶ ಸಿಕ್ಕಿತು, ಹೀಗಾಗಿ ಅದನ್ನು ನನ್ನ ಹೆಂಡತಿಗೆ ಕೂಡ ಬಳಸಲು ಪ್ರೇರೆಪಿಸಿದೆ ಮತ್ತು ಇದೀಗ ನಾವಿಬ್ಬರೂ ಖುಷಿಯಾಗಿದ್ದೇವೆ.

ನನ್ನ ಹೆಸರು ದಿನೇಶ ಕುಮಾರ್, ರಾಜಸ್ಥಾನ ನಿವಾಸಿ. ಕೆಲವು ದಿನಗಳ ಹಿಂದೆ ನಾನು, ಮೊಡವೆ, ಗುಳ್ಳೆ ಮತ್ತು ಕಪ್ಪು ಕಲೆಗಳ ಸಮಸ್ಯೆಗಳಿಂದ ಬಳಲುತ್ತಿದ್ದೆ. ನಂತರ ಒಂದು ದಿನ ರೂಪ ಮಂತ್ರ ಆಯುರ್ವೇದಿಕ ಕ್ರೀಮ್ ಮತ್ತು ಫೇಸ್ ವಾಷ್ ಬಗ್ಗೆ ತಿಳಿಯಿತು ಮತ್ತು ನಾನು ಅದನ್ನು ನಿಯಮಿತವಾಗಿ ಬಳಸಿದ್ದರಿಂದ ತುಂಬಾ ಅನುಕೂಲವಾಯಿತು. ಇದು ನಿಜವಾಗ್ಯೂ ಪರಿಣಾಮಕಾರಿಯಾಗಿದೆ ಮತ್ತು ಎಲ್ಲರಿಗೂ ಇದನ್ನು ಬಳಸುವಂತೆ ಹೇಳಬಯಸುತ್ತೇನೆ.

WORLD'S GREATEST BRANDS 2015-16 IUA
INDIA'S MOST TRUSTED BRAND
WORLD BRAND SUMMIT DUBAI 2016
Most Trusted Brand of Asia 2016
NO.1 BRAND INDIA 2014

Enriched by
Aloevera
Almonds
Sandal
Draksha

Yeh Koi Cosmetic Nahin Ayurvedic Aushdhi Hai.

• 24x7 Helpline : 87259 66666
fb.com/Roopmantra
www.roopmantra.com

ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಕಲಾ ಗಂಗೋತ್ರಿಗೆ ಸುವರ್ಣ ಸಂಭ್ರಮ

1

ಸುವರ್ಣ ಸಂಭ್ರಮದಲ್ಲಿ 'ಕಲಾ ಗಂಗೋತ್ರಿ'

ಡಿ.29ರಂದು ಮಂಗ ಮಾಣಿಕ್ಯ ಪ್ರಹಸನ, ಡಿ.30, 31 ರಂದು ಮುಖ್ಯಮಂತ್ರಿ, ಡಿ. 31ರಂದು ಮೈಸೂರು ಮಲ್ಲಿಗೆ, ಜನವರಿ 1 ರಂದು ಮೂಕಜ್ಜಿಯ ಕನಸುಗಳು ನಾಟಕ ಪ್ರದರ್ಶನವಾಗಲಿದೆ.

ಕಲಾಗಂಗೋತ್ರಿ ಕಲಾವಿದರ ಅಭಿನಯಿಸಿದ ಡಾ.ಬಿ.ವಿ ರಾಜಾರಾಂ ನಿರ್ದೇಶನದ "ಮೂಕಜ್ಜಿಯ ಕನಸುಗಳು" ನಾಟಕದ ದೃಶ್ಯ (ಸಂಗ್ರಹ ಚಿತ್ರ)

ಬೆಂಗಳೂರು ಕಲಾಗಂಗೋತ್ರಿ ತಂಡದ 'ಮತ್ತೆ ಮುಖ್ಯಮಂತ್ರಿ' ನಾಟಕದ ದೃಶ್ಯ(ಸಂಗ್ರಹ ಚಿತ್ರ)

ಅಸ್ಮಿತಾ ಶಾಂತಿನಗರ

ನಗರದ 'ಕಲಾ ಗಂಗೋತ್ರಿ' ರಂಗತಂಡಕ್ಕೀಗ ಸುವರ್ಣ ಸಂಭ್ರಮ. ಎಪ್ಪತ್ತರ ದಶಕದಲ್ಲಿ ಆಗಿನ್ನೂ ಆಚಾರ್ಯ ಪಾಠಶಾಲಾ ವಿದ್ಯಾರ್ಥಿಯಾಗಿದ್ದ ಡಾ. ಬಿ.ವಿ.ರಾಜಾರಾಂ ಅವರು ತಮ್ಮ ಸ್ನೇಹಿತರಾದ ಕಣ್ಣನ್, ಪೂಣಚ್ಚ, ಸತ್ಯನಾರಾಯಣ, ನಂಜುಂಡಪ್ಪ, ನರಸಿಂಹ ಶೆಟ್ಟಿ, ಕೇಶವಮೂರ್ತಿ ಮತ್ತು ಯತಿರಾಜುಲು ನಾಯ್ಡು ಅವರ ಜೊತೆ ಸೇರಿ ಆರಂಭಿಸಿದ ಕಲಾ ಗಂಗೋತ್ರಿ ತಂಡವು ಕನ್ನಡ ರಂಗಭೂಮಿಗೆ ನೀಡಿದ ಕಾಣಿಕೆ ಅನನ್ಯವಾದದ್ದು.

ಜನಪ್ರಿಯ ಹವ್ಯಾಸಿ ರಂಗಪ್ರದರ್ಶನಗಳ ಮೂಲಕ ರಂಗಾಸಕ್ತರ ಮನ ಗೆದ್ದಿರುವ ಈ ತಂಡ ಬಡಾವಣಾ ರಂಗ ಪ್ರದರ್ಶನ, ವಾರಾಂತ್ಯ ರಂಗ ಪ್ರದರ್ಶನ, ಕಾಲೇಜು ರಂಗ ಶಿಬಿರ, ಬೀದಿನಾಟಕ, ಮಕ್ಕಳ ನಾಟಕ ಹೀಗೆ ಹತ್ತು ಹಲವು ವೈವಿಧ್ಯಮಯ ಚಟುವಟಿಕೆಗಳನ್ನು 50 ವರ್ಷಗಳ ಕಾಲ ನಿರಂತರವಾಗಿ ನಡೆಸಿಕೊಂಡು ಬಂದಿರುವುದು ಹೆಗ್ಗಳಿಕೆಯ ಸಂಗತಿ. ನಾಟಕ ಪ್ರದರ್ಶನ ಮಾತ್ರವಲ್ಲದೆ ರಂಗಭೂಮಿಗೆ ಸಂಬಂಧಿಸಿದ ಕೃತಿಗಳ ಪ್ರಕಟಣೆ, ವಸ್ತು ಪ್ರದರ್ಶನ ಹೀಗೆ ಅನೇಕ ಸೃಜನಶೀಲ ಚಟುವಟಿಕೆಗಳನ್ನು ನಡೆಸುತ್ತಿರುವುದು ವಿಶೇಷ.

ಕನ್ನಡವಷ್ಟೇ ಅಲ್ಲ ಇಂಗ್ಲಿಷಿನ ಪ್ರಸಿದ್ಧ ನಾಟಕಕಾರರ ಕೃತಿಗಳನ್ನು ರಂಗಕ್ಕೆ ತರುವ ಕೆಲಸವನ್ನೂ ಕಲಾ ಗಂಗೋತ್ರಿ ತಂಡವು ನಿರಂತರವಾಗಿ ಮಾಡಿಕೊಂಡು ಬಂದಿದೆ. ಈ ಮೂಲಕ ಕನ್ನಡ ರಂಗ ಪ್ರೇಕ್ಷಕರಿಗೆ ವೈವಿಧ್ಯಮಯ ನಾಟಕಗಳ ಉಡುಗೊರೆಯನ್ನೂ ನೀಡಿದೆ. 'ಮುಖ್ಯಮಂತ್ರಿ' ದೊರೆ ಈಡಿಪಸ್, ಮ್ಯಾಕ್ ಬೆತ್, ಸ್ಮಶಾನ ಕುರುಕ್ಷೇತ್ರ, ಬೆರಳ್‌ಕೊರಳ್, ಮಹಾರಾತ್ರಿ, ಮಿಸ್ ಜೂಲಿ, ಭರತಪ್ಪನ ಸೊಂಟಕ್ಕೆ ಗಂಟೆ, ಉತ್ತಮ ಪ್ರಭುತ್ವ ಲೊಳಲೊಟ್ಟೆ, ವಿಗಡ ವಿಕ್ರಮರಾಯ, ಮೂಕಜ್ಜಿಯ ಕನಸುಗಳು, ಮೈಸೂರು ಮಲ್ಲಿಗೆ... ಹೀಗೆ ಅನೇಕ ಪ್ರಸಿದ್ಧ ನಾಟಕಗಳನ್ನು ತಂಡವು ಪ್ರದರ್ಶಿಸಿದೆ.

ಕಲಾಗಂಗೋತ್ರಿ ತಂಡದ ಕಲಾವಿದರು ಈ 50 ವರ್ಷಗಳಲ್ಲಿ ವಿದೇಶ ಸೇರಿದಂತೆ ಭಾರತದ ಹಲವು ಕೇಂದ್ರಗಳಲ್ಲಿ ಮತ್ತು ಕರ್ನಾಟಕದ ಮುಖ್ಯ ಕೇಂದ್ರಗಳಲ್ಲೂ ಸಂಚರಿಸಿ 3, 250ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ., ಪ್ರೊ.ಬಿ.ಸಿ.ಯವರ ಬದುಕು-ಬರಹ-21 ನಾಟಕಗಳು-1350 ಪುಟಗಳು, ವಿವಿಧ ಲೇಖಕರ ಸುಮಾರು 200 ಮಕ್ಕಳ ನಾಟಕಗಳು ಹೀಗೆ ಪ್ರಕಟಣೆ ಕಾರ್ಯವನ್ನು ಕಲಾಗಂಗೋತ್ರಿ ಮಾಡಿದೆ.

25 ವರ್ಷಗಳಿಂದ ಪ್ರತಿ ವರ್ಷ ನೇಪಥ್ಯ ಕಲಾ ಪದ್ದಣ್ಣ ಪ್ರಶಸ್ತಿ ನೀಡಿ ಗೌರವಿಸುವ ಕಾರ್ಯನಡೆಸುತ್ತಿದೆ. ಅ.ನ. ಕೃ. ಶತಮಾನೋತ್ಸವ ಸಂದರ್ಭದಲ್ಲಿ ಅವರ ಮೊದಲ ನಾಟಕ ಮದುವೆಯೋ ಮನೆಹಾಳೋ ಪ್ರದರ್ಶನ ಹಾಗೂ ಸಂಧ್ಯಾರಾಗ ಓದುವ ಕಾದಂಬರಿಯನ್ನು ಕೇಳುವ ಕಾದಂಬರಿಯಾಗಿ ಸಿ.ಡಿ ರೂಪದಲ್ಲಿ ಬಿಡುಗಡೆ ಮಾಡಿದೆ. ರಂಗತಂಡವೊಂದು ಎಷ್ಟೆಲ್ಲಾ ಸೃಜನಶೀಲವಾಗಿ ಚಟುವಟಿಕೆಗಳನ್ನು ನಡೆಸಬಹುದು ಎನ್ನುವುದಕ್ಕೆ ಕಲಾಗಂಗೋತ್ರಿ ತಂಡ ಉದಾಹರಣೆ. 50ರ ಸಡಗರದಲ್ಲಿರುವ ತಂಡವು ಅದನ್ನು ಸಂಭ್ರಮವಾಗಿಸುವ ನಿಟ್ಟಿನಲ್ಲಿ ಇದೇ ಡಿ. 28ರಿಂದ ಜನವರಿ 1 ರವರೆಗೆ 7 ನಾಟಕ ಪ್ರದರ್ಶನಗಳ ರಂಗಹಬ್ಬವನ್ನು ಆಯೋಜಿಸಿದೆ. ಜೆ.ಪಿ. ನಗರದ ರಂಗಶಂಕರದಲ್ಲಿ ನಾಟಕಗಳ ಪ್ರದರ್ಶನ ನಡೆಯಲಿದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ ಸರಣಿಯಲ್ಲಿ ಹೊಸ ಫೋನ್

ತಂತ್ರಜ್ಞಾನ

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎ ಸರಣಿಯಲ್ಲಿ ಹೊಸ ಮಾದರಿಗಳು ಮಾರುಕಟ್ಟೆಗೆ ಲಗ್ಗೆ ಇರಿಸಿವೆ.

A04 ಮತ್ತು A04e ಎಂಬ ಎರಡು ಮಾದರಿಗಳನ್ನು ಸ್ಯಾಮ್‌ಸಂಗ್ ಭಾರತದಲ್ಲಿ ಬಿಡುಗಡೆ ಮಾಡಿದೆ.

ಗ್ಯಾಲಕ್ಸಿ A04e ಸ್ಮಾರ್ಟ್‌ಫೋನ್‌ನಲ್ಲಿ 6.5 ಇಂಚಿನ ಎಚ್‌ಡಿ + ಡಿಸ್‌ಪ್ಲೇ, ಮೀಡಿಯಾಟೆಕ್ ಹೆಲಿಯೊ P35 12nm ಒಕ್ಟಾ ಕೋರ್ ಪ್ರೊಸೆಸರ್ ಮತ್ತು IMG PowerVR GE8320 ಗ್ರಾಫಿಕ್ಸ್ ಬೆಂಬಲ ಹೊಂದಿದೆ. ಅಲ್ಲದೆ, 3GB/4GB RAM ಮತ್ತು 32GB / 128GB ಸ್ಟೋರೇಜ್ ಆಯ್ಕೆಗಳು ಕೂಡ ದೊರೆಯಲಿದೆ. ಹಿಂಭಾಗದಲ್ಲಿ 13 ಮೆಗಾಪಿಕ್ಸೆಲ್ ಕ್ಯಾಮೆರಾ ಹಾಗೂ 5 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ, 5,000mAh ಬ್ಯಾಟರಿ ಇದೆ ಎಂದು ಕಂಪನಿ ಹೇಳಿದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ A04 ನೂತನ ಸ್ಯಾಮ್‌ಸಂಗ್ ಸ್ಮಾರ್ಟ್‌ಫೋನ್‌ನಲ್ಲಿ 6.5 ಇಂಚಿನ ಎಚ್‌ಡಿ ಡಿಸ್‌ಪ್ಲೇ, ಮೀಡಿಯಾಟೆಕ್ ಹೆಲಿಯೊ P35 12nm ಒಕ್ಟಾ ಕೋರ್ ಪ್ರೊಸೆಸರ್ ಇದೆ. ಅಲ್ಲದೆ, IMG PowerVR GE8320 ಗ್ರಾಫಿಕ್ಸ್ ಬೆಂಬಲ ಹೊಂದಿದೆ. 4GB RAM ಮತ್ತು 64GB / 128GB ಸ್ಟೋರೇಜ್ ಬೆಂಬಲ ಇದ್ದು, ಹಿಂಭಾಗದಲ್ಲಿ 50 ಮೆಗಾಪಿಕ್ಸೆಲ್ ಮುಖ್ಯ ಕ್ಯಾಮೆರಾ ಮತ್ತು 2 ಮೆಗಾಪಿಕ್ಸೆಲ್ ಸೆನ್ಸರ್ ಜತೆಗೆ 5 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ, 5,000mAh ಬ್ಯಾಟರಿ ಬೆಂಬಲ ಹೊಂದಿದೆ ಎಂದು ಸ್ಯಾಮ್‌ಸಂಗ್ ತಿಳಿಸಿದೆ.

ಬೆಲೆ ವಿವರ: ಸ್ಯಾಮ್‌ಸಂಗ್ ಗ್ಯಾಲಕ್ಸಿ A04e ತಿಳಿ ನೀಲಿ ಮತ್ತು ತಾಮ್ರದ ಬಣ್ಣದಲ್ಲಿ ಲಭ್ಯ

- 3GB RAM + 32GB ಮಾದರಿಗೆ ₹9,299
- 3GB RAM + 64GB ಆವೃತ್ತಿಗೆ ₹9,999
- 4GB RAM 128GB ಮಾದರಿಗೆ ₹11,499 ದರವಿದೆ.

'ಪದವಿಪೂರ್ವ' ಟ್ರೇಲರ್ ಬಿಡುಗಡೆ

ಪೃಥ್ವಿ ಶಾಮನೂರು, ಅಂಜಲಿ ಅನೀಶ್

'ಪದವಿಪೂರ್ವ' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ರೆಬಲ್ ಸ್ಟಾರ್ ಅಂಬರೀಶ್ ಪುತ್ರ ಅಭಿಷೇಕ್ ಅಂಬರೀಶ್ 'ಪದವಿಪೂರ್ವ' ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದರು.

'ಈ ಚಿತ್ರದ ನಾಯಕ ಪೃಥ್ವಿ ಶಾಮನೂರು ಅವರ ಉತ್ಸಾಹ ನೋಡಿದರೆ ಖುಷಿಯಾಗುತ್ತಿದೆ. ಟ್ರೇಲರ್ ಚೆನ್ನಾಗಿದೆ. ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನ ಹಾಗೂ ರೀರೆಕಾರ್ಡಿಂಗ್ ಅದ್ಭುತವಾಗಿದೆ. ಎಲ್ಲಾ ಕಲಾವಿದರ ಅಭಿನಯ ಅಮೋಘವಾಗಿದೆ. ನಿರ್ದೇಶಕ ಹರಿಪ್ರಸಾದ್ ಮೊದಲ ಬಾರಿಗೆ ನಿರ್ದೇಶನ ಮಾಡಿದ್ದಾರೆ' ಚಿತ್ರ ಭರ್ಜರಿ ಯಶಸ್ಸು ಕಾಣಲಿ ಎಂದರು ಅಭಿಷೇಕ್ ಅಂಬರೀಶ್.

ಈ ಹೊಸತಂಡ, ಹೊಸತರಹದ ಪ್ರಮೋಷನ್ ಮೂಲಕ ಜನರನ್ನು ತಲುಪುವ ಪ್ರಯತ್ನ ಮಾಡುತ್ತಿದ್ದಾರೆ. ಡಿಸೆಂಬರ್ 30ರಂದು ಚಿತ್ರ ಬಿಡುಗಡೆಯಾಗುತ್ತಿದೆ. ನೋಡಿ. ಪ್ರೋತ್ಸಾಹ ನೀಡಿ ಎಂದರು ನಿರ್ಮಾಪಕರಲ್ಲೊಬ್ಬರಾದ ಯೋಗರಾಜ್ ಭಟ್. ರವಿ ಶಾಮನೂರು ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ.

ಅಂಜಲಿ ಅನೀಶ್ ಚಿತ್ರದ ನಾಯಕಿ. ಯಶಾ ಶಿವಕುಮಾರ್, ತಾರಾಗಣದಲ್ಲಿದ್ದಾರೆ. ಛಾಯಾಗ್ರಾಹಕ ಸಂತೋಷ ರೈ ಪಾತಾಜೆ, ನೃತ್ಯ ನಿರ್ದೇಶಕ ಧನಂಜಯ್ ಹಾಗೂ ನಿರ್ಮಾಪಕ ರವಿ ಶಾಮನೂರು ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿದ್ದರು.

'ನೋಡಲಾಗದೇ ದೇವಾ...' ಗೀತೆ ಕೇಳಿದಿರಾ?

ವಿರಾಟಪುರದ ವಿರಾಗಿ ಚಿತ್ರದ ಭರ್ಜರಿ ಪ್ರಚಾರ ಆರಂಭವಾಗಿರುವುದು ಗೊತ್ತೆ ಇದೆ. ರಾಜ್ಯದ 6 ಕಡೆಗಳಿಂದ ರಥಯಾತ್ರೆ ನಡೆಯುತ್ತಿದೆ. ಈ ನಡುವೆ ಚಿತ್ರತಂಡ 'ನೋಡಲಾಗದೇ ದೇವಾ...' ಗೀತೆಯನ್ನು ಬಿಡುಗಡೆ ಮಾಡಿದೆ. ಯುಟ್ಯೂಬ್‌ನಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಬಿ.ಎಸ್. ಲಿಂಗದೇವರು ನಿರ್ದೇಶನದ 'ವಿರಾಟಪುರ ವಿರಾಗಿ', ಆಧುನಿಕ ಬಸವಣ್ಣ ಎಂದೇ ಖ್ಯಾತರಾಗಿರುವ ಹಾನಗಲ್ ಕುಮಾರ ಶಿವಯೋಗಿಗಳ ಜೀವನಾಧಾರಿತವಾಗಿದೆ. ನೋಡಲಾಗದೇ ದೇವಾ ಹಾಡಿಗೆ ಮಣಿಕಾಂತ್ ಕದ್ರಿ ಸಂಗೀತ ನೀಡಿದ್ದಾರೆ. ರವೀಂದ್ರ ಸೊರಗಾವಿ ಅವರ ಕಂಠದಲ್ಲಿ ಮೂಡಿಬಂದಿದೆ.

ಗೀತೆಯನ್ನು ಕೇಳಿ ಪ್ರತಿಕ್ರಿಯಿಸಿದ ಹಿರಿಯ ನಿರ್ದೇಶಕ ಗಿರೀಶ ಕಾಸರವಳ್ಳಿ, 'ಮೆಲಕು ಹಾಕುವ ಗೀತೆ ಬೇರೆ, ಮನ ಕಲಕುವ ಗೀತೆಯೇ ಬೇರೆ. ಮೆಲಕು ಹಾಕುವ ಗೀತೆ ಖುಷಿ ಕೊಟ್ಟರೆ ಮನಕಲು ಕುವ ಗೀತೆ ಆನಂದ ತರುತ್ತದೆ. ಎಷ್ಟೋ ದಿನಗಳ ನಂತರ ಮೆಲಕು ಹಾಕಬಹುದಾದ ಹಾಗೆಯೇ ಮನಕ್ಕೂ ತಟ್ಟುವ ಗೀತೆಯಿದು' ಎಂದು ಚಿತ್ರತಂಡವನ್ನು ಅಭಿನಂದಿಸಿದ್ದಾರೆ.

ಕುಮಾರ ಶಿವಯೋಗಿ ಪಾತ್ರದಲ್ಲಿ ಸುಚೇಂದ್ರ ಪ್ರಸಾದ್ ಅಭಿನಯಿಸಿದ್ದಾರೆ.

'ಸಮಾಧಾನ' ತಂಡ ಈ ಚಿತ್ರವನ್ನು ನಿರ್ಮಿಸಿದೆ.

ಹಾಡು ಕೇಳಲು ಲಿಂಕ್ https://www.youtube.com/watch?v=OSsnjQ8qJsc

ಸಿನಿ ಹನಿ

'ಭೂ ಮಂತರ್' ಹೇಳ್ತಿದ್ದಾರೆ ಶರಣ್

ಶರಣ್

ನಟ ಶರಣ್ 'ಭೂ ಮಂತರ್' ಚಿತ್ರದ ನಾಯಕರಾಗಿದ್ದಾರೆ. ಮೇಘನಾ ಗಾಂವ್ಕರ್, ಚಿಕ್ಕಣ್ಣ, ಅದಿತಿ ಪ್ರಭುದೇವ ಹಾಗೂ ಪ್ರಭು ಮುಂಡ್ಕರ್ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ.

ಶರಣ್ ಹಾಗೂ ಚಿಕ್ಕಣ್ಣ ಕಾಂಬಿನೇಷನ್‌ನಲ್ಲಿ ಈ ಚಿತ್ರ ಮೂಡಿಬರುತ್ತಿದೆ. ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ಮಾನಸ ತರುಣ್ ಹಾಗೂ ತರುಣ್ ಶಿವಪ್ಪ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇದು ಈ ಸಂಸ್ಥೆಯ ನಿರ್ಮಾಣದ ಐದನೇ ಚಿತ್ರ.

ನವನೀತ್ ಅವರು ಕಥೆ, ಚಿತ್ರಕಥೆ ಬರೆದು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಹಾರರ್, ಕಾಮಿಡಿ ಕಥಾಹಂದರ ಈ ಚಿತ್ರದ್ದು. ಚಿತ್ರದ ಡಬ್ಬಿಂಗ್ ಮುಗಿದಿದೆ.

ಬೆಂಗಳೂರು, ಮೈಸೂರು, ಉತ್ತರಕಾಂಡ ಹಾಗೂ ಲಂಡನ್‌ನಲ್ಲಿ ಚಿತ್ರೀಕರಣ ನಡೆದಿದೆ.

ಅನೂಪ್ ಕಟ್ಟುಕರನ್ ಛಾಯಾಗ್ರಾಹಕರು. ವೆಂಕಿ ಸಂಕಲನ, ರವಿವರ್ಮ ಸಾಹಸ ನಿರ್ದೇಶನ ಹಾಗೂ ಶಿವಕುಮಾರ್ (ಕೆ.ಜಿ.ಎಫ್. ಖ್ಯಾತಿ) ಹಾಗೂ ಮೋಹನ್ ಬಿ. ಕೆರೆ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಕ್ಲೈಮ್ಯಾಕ್ಸ್ ಹಂತದಲ್ಲಿ 'ಅನ್ ಲಾಕ್ ರಾಘವ'

ಮಿಲಿಂದ್, ರೇಚಲ್ ಡೇವಿಡ್

'ಅನ್ ಲಾಕ್ ರಾಘವ' ಸಿನಿಮಾದ ಕ್ಲೈಮ್ಯಾಕ್ಸ್ ಚಿತ್ರೀಕರಣ ಭರದಿಂದ ಸಾಗಿದೆ.

ಸತ್ಯ ಮತ್ತು ಮಯೂರ ಪಿಕ್ಚರ್ಸ್ ಬ್ಯಾನರ್ ನಡಿ ನಿರ್ಮಾಣವಾಗುತ್ತಿರುವ ಈ ಸಿನಿಮಾದ ಕ್ಲೈಮಾಕ್ಸ್ ಹಾಸ್ಯಲೇಪನದೊಂದಿಗೆ ಸಾಕಷ್ಟು ಅಚ್ಚರಿ ಮೂಡಿಸಲಿದೆ ಎನ್ನುತ್ತಿದೆ ಚಿತ್ರತಂಡ.

ದೀಪಕ್ ಮಧುವನಹಳ್ಳಿ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ಮಿಲಿಂದ್ ನಾಯಕ ನಟನಾಗಿ ನಟಿಸುತ್ತಿದ್ದು, ನಾಯಕಿಯಾಗಿ ರೇಚಲ್ ಡೇವಿಡ್ ನಟಿಸುತ್ತಿದ್ದಾರೆ. ಕ್ಲೈಮ್ಯಾಕ್ಸ್ ಚಿತ್ರೀಕರಣದಲ್ಲಿ ನಾಯಕ, ನಾಯಕಿ ಒಳಗೊಂಡಂತೆ ಸಾಧುಕೋಕಿಲ, ಸುಂದರ್, ವೀಣಾ ಸುಂದರ್, ಶೋಭರಾಜ್, ಅವಿನಾಶ್ ಸೇರಿದಂತೆ ಹಲವು ಕಲಾವಿದರು ಪಾಲ್ಗೊಂಡಿದ್ದಾರೆ.

ಚಿತ್ರದ ಕ್ಲೈಮಾಕ್ಸ್ ಚಿತ್ರೀಕರಣ ಕೆಲವೇ ದಿನಗಳಲ್ಲಿ ಮುಗಿಯಲಿದೆ. ಎರಡು ಹಾಡು ಹಾಗೂ ಮಾತಿನ ಭಾಗ ಮುಗಿಸಿದರೆ ಸಿನಿಮಾ ಚಿತ್ರೀಕರಣ ಮುಕ್ತಾಯವಾಗಲಿದೆ. ಒಟ್ಟು 50 ರಿಂದ 55 ದಿನ ಚಿತ್ರೀಕರಣ ಮಾಡಿದ್ದೇವೆ. ವಿನೋದ್ ಮಾಸ್ಟರ್ ಚಿತ್ರಕ್ಕೆ ಸಾಹಸ ನಿರ್ದೇಶನ ಮಾಡುತ್ತಿದ್ದಾರೆ. ಹೊಸ ರೀತಿಯ ಪ್ರಯತ್ನ ಸಿನಿಮಾದಲ್ಲಿದೆ. ಆಕ್ಷನ್ ಜೊತೆಗೆ ಹ್ಯೂಮರ್ ಕೂಡ ಇಡೀ ಸಿನಿಮಾದಲ್ಲಿ ಜೊತೆಯಾಗಿ ಸಾಗಲಿದೆ. ಸಿನಿಮಾಗೆ ಏನೂ ಕೊರತೆ ಆಗದ ಹಾಗೆ ನಿರ್ಮಾಪಕರು ನೋಡಿಕೊಂಡಿದ್ದಾರೆ' ಎಂದು ದೀಪಕ್ ಚಿತ್ರದ ಬಗ್ಗೆ ಮಾಹಿತಿ ಹಂಚಿಕೊಂಡರು.

ಚಿತ್ರದ ನಿರ್ಮಾಪಕ ಮಂಜುನಾಥ್ ಡಿ. ಮಾತನಾಡಿ 'ಒಳ್ಳೆಯ ಕಂಟೆಂಟ್ ಕೊಟ್ರೆ ಖಂಡಿತಾ ಜನ ಸಿನಿಮಾವನ್ನು ನೋಡಿ ಗೆಲ್ಲಿಸುತ್ತಾರೆ. ಈ ಸಿನಿಮಾದ ಕಂಟೆಂಟ್ ತುಂಬಾ ಚೆನ್ನಾಗಿದೆ, ಒಳ್ಳೆಯ ಕಲಾವಿದರು ಇದ್ದಾರೆ. ಏಪ್ರಿಲ್ ನಂತರದಲ್ಲಿ ಸಿನಿಮಾ ಬಿಡುಗಡೆ ಮಾಡಲಿದ್ದೇವೆ' ಎಂದು ತಿಳಿಸಿದರು.

ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಡಿ.ಸತ್ಯಪ್ರಕಾಶ್ ಅವರು ಮಾತನಾಡಿ 'ಖಂಡಿತವಾಗಿಯೂ, ಇಡೀ ಸಿನಿಮಾವನ್ನು ನಗ್ತಾ ನಗ್ತಾ ನೋಡುತ್ತೀರಿ. ವಸ್ತು ಬಹಳ ವಿಭಿನ್ನವಾಗಿದೆ. ದೊಡ್ಡ ದೊಡ್ಡ ಕಲಾವಿದರ ದಂಡೇ ಈ ಚಿತ್ರದಲ್ಲಿದೆ. ಸಾಧುಕೋಕಿಲ ಸರ್ ಪೂರ್ತಿ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇನ್ನು ಸುಂದರ್ ಸರ್ ಬಹಳ ವಿಭಿನ್ನ ಪಾತ್ರ ನಿರ್ವಹಿಸಿದ್ದಾರೆ. ಎಲ್ಲ ಪಾತ್ರಗಳಿಗೂ ಅದರದ್ದೇ ಆದ ವಿಶೇಷತೆಗಳಿವೆ. ಇಡೀ ಫ್ಯಾಮಿಲಿ ಒಟ್ಟಾಗಿ ಕುಳಿತು ನೋಡುವ ಸಿನಿಮಾವಿದು' ಎಂದರು.

ನಾಯಕ ನಟ ಮಿಲಿಂದ್ ಮಾತನಾಡಿ 'ಒಬ್ಬ ಹೀರೋ ಆಗಿ ನನಗೆ ಬಹಳ ಮುಖ್ಯವಾದ ಸಿನಿಮಾವಿದು. ಅದ್ಭುತವಾದ ಕಥೆ ಆಯ್ಕೆ ಮಾಡಿಕೊಂಡಿದ್ದೇನೆ. ಈ ಸಿನಿಮಾದ ಶಕ್ತಿ ಎಂದರೆ ಸತ್ಯ ಸರ್ ಬರವಣಿಗೆ. ರೋಮ್ಯಾನ್ಸ್ ಮತ್ತು ಕಾಮಿಡಿ ಜಾನರ್ ಸಿನಿಮಾವಿದು. ಮೊದಲ ಸಿನಿಮಾದಲ್ಲಿ ಪೆಟ್ಟು ತಿಂದಿದ್ದರಿಂದ, ಈ ಸಿನಿಮಾ ಮಾಡುವಾಗ ಒಂದು ಭಯ ಇತ್ತು. ನಿರ್ದೇಶಕ ದೀಪಕ್ ಸರ್ ಅದನ್ನೆಲ್ಲ ಹೋಗಲಾಡಿಸಿ, ಸಾಕಷ್ಟು ತಿದ್ದಿದ್ದಾರೆ' ಎಂದರು.

ನಾಯಕ ನಟಿ, ರೇಚಲ್ ಡೇವಿಡ್ ಮಾತನಾಡಿ, 'ಚಿತ್ರದಲ್ಲಿ ಜಾನಕಿ ಹೆಸರಲ್ಲಿ ಆರ್ಕಿಯೋಲಜಿಸ್ಟ್ ಪಾತ್ರ ನಿರ್ವಹಿಸಿದ್ದೇನೆ' ಎಂದು ತಿಳಿಸಿದರು.

ಹಿರಿಯ ನಟ ಅವಿನಾಶ್ ಮಾತನಾಡಿದರು. 'ಅನ್ ಲಾಕ್ ರಾಘವ' ಚಿತ್ರವನ್ನು ಸತ್ಯ ಹಾಗೂ ಮಯೂರ ಪಿಕ್ಚರ್ಸ್ ಬ್ಯಾನರ್ ಅಡಿ ಮಂಜುನಾಥ್ ಡಿ., ಡಿ.ಸತ್ಯಪ್ರಕಾಶ್ ಹಾಗೂ ಗಿರೀಶ್ ಕುಮಾರ್ ಜಂಟಿಯಾಗಿ ನಿರ್ಮಿಸುತ್ತಿದ್ದಾರೆ. ಸತ್ಯಪ್ರಕಾಶ್ ಕಥೆ-ಚಿತ್ರಕಥೆ-ಸಂಭಾಷಣೆ ಬರೆದಿದ್ದಾರೆ. ಲವಿತ್ ಛಾಯಾಗ್ರಾಹಣ, ಅನೂಪ್ ಸೀಳಿನ್ ಸಂಗೀತ, ಅಜಯ್ ಕುಮಾರ್ ಸಂಕಲನ ಚಿತ್ರಕ್ಕಿದೆ. ಸಾಧುಕೋಕಿಲ, ಅವಿನಾಶ್, ರಮೇಶ್ ಭಟ್, ವೀಣಾ ಸುಂದರ್, ಸುಂದರ್, ಧರ್ಮಣ್ಣ ಕಡೂರು, ಸಾಯಿ ಕುಡ್ಲ, ಭೂಮಿ ಶೆಟ್ಟಿ ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ.

ಡಾ: ಭಗವಾನ್ ಬಿ.ಸಿ ಅವರಿಗೆ ಎಫ್.ಆರ್.ಸಿ.ಎಸ್ ಪ್ರಶಸ್ತಿ



ಬೆಂಗಳೂರಿನ ಕಿಮ್ಸ್‌ನ ಉಪ ಪ್ರಾಂಶುಪಾಲರು ಹಾಗೂ ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಭಗವಾನ್ ಬಿ.ಸಿ. ರವರಿಗೆ ಪ್ರತಿಷ್ಠಿತ 'ಫೆಲೋ ಆಫ್ ರಾಯಲ್ ಕಾಲೇಜ್ ಆಫ್ ಸರ್ಜನ್ಸ್' (ಎಫ್ ಆರ್ ಸಿ ಎಸ್), ಎಡಿನ್ ಬರೋ ಪ್ರಶಸ್ತಿ ಲಭಿಸಿದೆ. ಡಾ. ಭಗವಾನ್ ಅವರು ಬ್ರಿಟನ್ನಿನ ವಿಗಾನ್ ನಲ್ಲಿರುವ ಜಾಗತಿಕ ತರಬೇತಿ ಮತ್ತು ಶಿಕ್ಷಣ ಕೇಂದ್ರದ ರಾಯಭಾರಿಯೂ ಆಗಿದ್ದಾರೆ.

ಸ್ಪರ್ಧಾ ವಾಣಿ



ಪರೀಕ್ಷೆ ಎದುರಿಸಿ, 'ಮಾದರಿ' ಅರಿಯಿರಿ

ಕೆಪಿಎಸ್‌ಸಿ ಅಣಕು ಪರೀಕ್ಷೆ

ಕರ್ನಾಟಕ ಲೋಕ ಸೇವಾ ಆಯೋಗವು (ಕೆಪಿಎಸ್‌ಸಿ) ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆನ್‌ಲೈನ್‌ನಲ್ಲಿ ನಡೆಸಲು ತೀರ್ಮಾನಿಸಿದೆ. ಸದ್ಯವೇ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು (KPSC CBRT Exam) ಆರಂಭಿಸುತ್ತಿದೆ. ಪರೀಕ್ಷೆ ಸಾಧಕ-ಬಾಧಕ ಅರಿಯಲು ಪ್ರಾಯೋಗಿಕ ಅಣಕು ಪರೀಕ್ಷೆ ನಡೆಸುತ್ತಿದೆ. ಪರೀಕ್ಷೆಯ ವಿವರ ಇಲ್ಲಿದೆ.

ಆರ್ ಕೆ ಬಾಲಚಂದ್ರ

ಕರ್ನಾಟಕ ಲೋಕಸೇವಾ ಆಯೋಗವು ಸಿಬಿಆರ್‌ಟಿ(Computer Based recruitment Test) ಮಾದರಿ ಯಲ್ಲಿಯೇ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಿದೆ. ಪರೀಕ್ಷೆ ಹೇಗೆ ನಡೆಯುತ್ತದೆ? ಇದರಿಂದ ಆಗುವ ಸಮಸ್ಯೆಗಳೇನು? ಎಂಬುದು ಸೇರಿದಂತೆ ಪರೀಕ್ಷೆಯ ಸಾಧ್ಯಾಸಾಧ್ಯತೆಗಳ ಪರಿಶೀಲನೆಗಾಗಿ ಅಣಕು ಪರೀಕ್ಷೆ (Mock Test) ನಡೆಸಲು ನಿರ್ಧರಿಸಿದೆ.

ಈ ಅಣಕು ಪರೀಕ್ಷೆಯು ರಾಜ್ಯದ ಆಯ್ದ ಜಿಲ್ಲೆಗಳಲ್ಲಿ 2023ರ ಜನವರಿ 7ರಂದು ನಡೆಯಲಿದೆ. ಮುಂದೆ ಕೆಪಿಎಸ್‌ಸಿ ನಡೆಸುವ ಸಿಬಿಆರ್‌ಟಿ ಹೇಗಿರಬಹುದು ಎಂಬುದನ್ನು ತಿಳಿಯುವ ಕುತೂಹಲವಿರುವ ಅಭ್ಯರ್ಥಿಗಳು ಅಣಕು ಪರೀಕ್ಷೆಗೆ ಹಾಜರಾಗಬಹುದು. ಇದು ಪ್ರಾಯೋಗಿಕ ಪರೀಕ್ಷೆ. ಹಾಗಾಗಿ, ಸೀಮಿತ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಮೊದಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು ಎಂದು ಕೆಪಿಎಸ್‌ಸಿ ತಿಳಿಸಿದೆ.

ಅರ್ಜಿ ಸಲ್ಲಿಸುವಾಗ ಪರೀಕ್ಷಾ ಕೇಂದ್ರವನ್ನು ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಒಂದು ಪರೀಕ್ಷಾ ಕೇಂದ್ರದಲ್ಲಿ ಇಂತಿಷ್ಟೇ ಅಭ್ಯರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ, ಅರ್ಜಿ ಸ್ವೀಕೃತಗೊಂಡ ಬಳಿಕ ಸದರಿ ಕೇಂದ್ರಕ್ಕೆ ಸ್ವೀಕೃತ ಕಾರ್ಯವನ್ನು ಸ್ಥಗಿತಗೊಳಿಸಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರೀಕ್ಷೆಯ ಪಠ್ಯಕ್ರಮ

ಪತ್ರಿಕೆ 1 : ಜನರಲ್ ಸ್ಟಡೀಸ್(ಸಾಮಾನ್ಯ ಅಧ್ಯಯನ)

- ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ 'ಸಾಮಾನ್ಯ ಜ್ಞಾನ' ವಿಷಯ (General Knowledge of Topics relating to Current Events)
- ಸಾಮಾನ್ಯ ವಿಜ್ಞಾನ (General Science)
- ಭೂಗೋಳ(Geography)
- ಸಮಾಜ ವಿಜ್ಞಾನ(Social Sciences)
- ಭಾರತೀಯ ಸಮಾಜ ಮತ್ತು ಅದರ ಚಲನಶೀಲತೆ(Indian Society and its Dynamics).
- ಭಾರತೀಯ ಇತಿಹಾಸ(Indian History)
- ಭಾರತೀಯ ಸಂವಿಧಾನ ಮತ್ತು ಸಾರ್ವಜನಿಕ ಆಡಳಿತ(Indian Constitution and Public Administration)
- ಪ್ರಾಯೋಗಿಕ ಜ್ಞಾನ ಮತ್ತು ಬೌದ್ಧಿಕ ಸಾಮರ್ಥ್ಯ(10ನೇ ತರಗತಿ ಹಂತ) (Practical Knowledge and Mental Ability (SSLC Level)).
- ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ (Social and Cultural History of Karnataka)
- ಸ್ವಾತಂತ್ರ್ಯಾ ನಂತರ ಕರ್ನಾಟಕದಲ್ಲಿ ನಡೆದ ಭೂ ಸುಧಾರಣೆ ಮತ್ತು ಸಾಮಾಜಿಕ ಬದಲಾವಣೆ (Land Reforms and Social Changes in Karnataka after Independence).
- ಕರ್ನಾಟಕದ ಆರ್ಥಿಕತೆ; ಶಕ್ತಿ ಮತ್ತು ದೌರ್ಬಲ್ಯ; ಪ್ರಸ್ತುತದ ಪರಿಸ್ಥಿತಿ (Karnataka's Economy; Its Strength and Weakness; Present Status)
- ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಸಂಘಗಳು(Rural Development, Panchayat Raj Institutions and Rural Co-operatives)
- ಕರ್ನಾಟಕದಲ್ಲಿ ಪರಿಣಾಮಕಾರಿ ಆಡಳಿತ ಅನುಷ್ಠಾನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ (Role of Science and Technology for effective administration of Karnataka)
- ಕರ್ನಾಟಕದಲ್ಲಿ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ ಪ್ರಕರಣಗಳು(Environmental Problems and the Development Issues of Karnataka)

ಅರ್ಜಿ ಸಲ್ಲಿಕೆಯ ವಿವರಗಳು

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಈಗಾಗಲೇ (ಡಿಸೆಂಬರ್ 23) ಆರಂಭವಾಗಿದೆ. ಡಿಸೆಂಬರ್ 31, ಅರ್ಜಿ ಸಲ್ಲಿಸಲು ಕೊನೆ ದಿನ. ಅರ್ಜಿಯ ಶುಲ್ಕ ₹100

ಅರ್ಜಿ ಸಲ್ಲಿಸುವುದು ಹೇಗೆ?

ಅರ್ಜಿಗಳನ್ನು ಆನ್‌ಲೈನ್ (ಅರ್ಜಿ ಸಲ್ಲಿಕೆಗೆ ಲಿಂಕ್– https://kpsc.kar.nic.in)ಮೂಲಕ ಸಲ್ಲಿಸಬೇಕು. ಅರ್ಜಿ ಭರ್ತಿ ಮಾಡಿ, ಭಾವಚಿತ್ರ ಮತ್ತು ಸಹಿಯನ್ನು ಮಾತ್ರ ಅಪ್ಲೋಡ್ ಮಾಡಬೇಕು. ಒಟ್ಟು ಐದು ಹಂತಗಳಲ್ಲಿ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ನಡೆಯಲಿದೆ. ಅದು ಹೀಗಿದೆ;

- ಹೆಸರು, ಜನ್ಮದಿನಾಂಕ, ಮೀಸಲಾತಿಗಳು, ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಭರ್ತಿ ಮಾಡಬೇಕು.
- ತಂದೆ, ತಾಯಿ, ಗಂಡ/ಹೆಂಡತಿ ಹೆಸರು, ವಿಳಾಸ ಹಾಗೂ ಪರೀಕ್ಷಾ ಕೇಂದ್ರದ ಹೆಸರು ನಮೂದಿಸಬೇಕು.
- ವಿದ್ಯಾರ್ಹತೆಯ ಕುರಿತು ಮಾಹಿತಿಯನ್ನು ಭರ್ತಿ ಮಾಡಬೇಕು.
- ಭಾವಚಿತ್ರ ಮತ್ತು ಸಹಿ ಅಪ್ಲೋಡ್ ಮಾಡಬೇಕು,
- ಅರ್ಜಿ ಶುಲ್ಕ ಪಾವತಿ

ಅರ್ಜಿ ಸಲ್ಲಿಸುವ ಎಲ್ಲಾ ಅಭ್ಯರ್ಥಿಗಳು ₹100 ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಆಸಕ್ತಿಯುಳ್ಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲಿ ಎಂಬ ಉದ್ದೇಶದಿಂದ ಶುಲ್ಕ ನಿಗದಿಪಡಿಸಲಾಗಿದೆ. ಹಾಗೆಯೇ, ಯಾವ ವರ್ಗಕ್ಕೂ ಶುಲ್ಕದಲ್ಲಿ ವಿನಾಯಿತಿ ನೀಡಿಲ್ಲ. ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಪರೀಕ್ಷೆಗೆ ಹಾಜರಾಗಲು ಅವಕಾಶವಿಲ್ಲ.

ವಿದ್ಯಾರ್ಹತೆ: ಕನಿಷ್ಠ ದ್ವಿತೀಯ ಪಿಯುಸಿ/ಡಿಪ್ಲೊಮಾ ವಿದ್ಯಾರ್ಹತೆ ಹೊಂದಿದವರು ಈ ಅಣಕು ಪರೀಕ್ಷೆ ಬರೆಯಬಹುದು.

ವಯೋಮಿತಿ: ಕನಿಷ್ಠ 18 ವರ್ಷಗಳು ಗರಿಷ್ಠ 40 ವರ್ಷಗಳು.

ಪರೀಕ್ಷೆ ಹೇಗಿರುತ್ತದೆ?

ಸಿಬಿಆರ್‌ಟಿ–ಇದು ಆನ್‌ಲೈನ್ ಪರೀಕ್ಷೆ. ಎರಡು ಗಂಟೆಗಳ ಅವಧಿಯ ಪರೀಕ್ಷೆ. ಕನ್ನಡ ಮತ್ತು ಆಂಗ್ಲಭಾಷೆ ಎರಡರಲ್ಲೂ ಪ್ರಶ್ನೆ ಪತ್ರಿಕೆಗಳಿರುತ್ತವೆ. ಪ್ರಶ್ನೆಗಳು ವಸ್ತುನಿಷ್ಠ (Objective type or multiple choice) ಮಾದರಿಯಲ್ಲಿರುತ್ತವೆ.

ಪ್ರತಿ ಪ್ರಶ್ನೆ ಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿದ್ದು, ಪ್ರತಿ ಪ್ರಶ್ನೆಗೆ 2 (ಎರಡು) ಅಂಕ. ಪ್ರತಿ ಪ್ರಶ್ನೆಗೆ 4 (ನಾಲ್ಕು) ಆಯ್ಕೆಗಳಿರುತ್ತವೆ. ಅಭ್ಯರ್ಥಿಯು ತಪ್ಪು ಉತ್ತರ ನೀಡಿದಲ್ಲಿ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ 1/4 ರಷ್ಟು ಅಂಕಗಳನ್ನು ಋಣಾತ್ಮಕ ಮೌಲ್ಯಮಾಪನದ ನಿಯಮದಂತೆ ಕಳೆಯಲಾಗುತ್ತದೆ. ಪ್ರಶ್ನೆಗೆ ಉತ್ತರಿಸದೆ ಖಾಲಿಬಿಟ್ಟಲ್ಲಿ/ ಉತ್ತರ ನೀಡದಿದ್ದಲ್ಲಿ ಆ ಪ್ರಶ್ನೆಗೆ ಯಾವುದೇ ದಂಡ ವಿಧಿಸಲಾಗುವುದಿಲ್ಲ.

ಸಿಬಿಆರ್‌ಟಿ – ಅಣಕು ಪರೀಕ್ಷೆಯಾಗಿದ್ದು, ಇದೊಂದು ಪ್ರಾಯೋಗಿಕ ಪ್ರಯತ್ನ. ಈ ಹಿನ್ನೆಲೆಯಲ್ಲಿ, ಪರೀಕ್ಷೆ ಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಆಯೋಗ ನಡೆಸುವ ಯಾವುದೇ ಪರೀಕ್ಷೆ/ ನೇಮಕಾತಿಗಳಲ್ಲಿ, ಪರಿಗಣಿಸಲಾಗುವುದಿಲ್ಲ ಹಾಗೂ ಸದರಿ ಪರೀಕ್ಷೆಯ ಫಲಿತಾಂಶಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ.

ಮಾಕ್‌ಟೆಸ್ಟ್ ಅಧಿಸೂಚನೆ ಮತ್ತು ವಿವರಕ್ಕಾಗಿ ಈ ಲಿಂಕ್ ನೋಡಿ: https://kpsc.kar.nic.in/MOCK%20 EXAM%20NOTIFICATION.pdf

(ಲೇಖಕರು : ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಮಾದರಿ ಪ್ರಶ್ನೋತ್ತರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಕೆಎಸ್‌ಆರ್‌ಪಿ ಸೇರಿದಂತೆ ಮುಂದೆ ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ.

ಸಾಮಾನ್ಯ ಜ್ಞಾನ

1) ಹಸಿರು ಹೈಡ್ರೋಜನ್‌ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ)ಹಸಿರು ಹೈಡ್ರೋಜನನ್ನು ನವೀಕರಿಸಬಹುದಾದ ಶಕ್ತಿಮೂಲಗಳನ್ನು ಬಳಸಿಕೊಂಡು ಉತ್ಪಾದಿಸಲಾಗುತ್ತದೆ.

ಬಿ) ಇದು ರಾಷ್ಟ್ರದ ಪರಿಸರ ಸುಸ್ಥಿರ ಇಂಧನ ಭದ್ರತೆಯ ಪ್ರಮುಖ ಅವಶ್ಯಕತೆಗಳಲ್ಲಿ ಒಂದಾಗಿದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿ.

1.ಹೇಳಿಕೆ ಎ ಸರಿಯಾಗಿದೆ.
2.ಹೇಳಿಕೆ ಬಿ ಸರಿಯಾಗಿದೆ.
3.ಎರಡೂ ಹೇಳಿಕೆಗಳು ತಪ್ಪಾಗಿವೆ.
4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ:4

2) ಗ್ರೀನ್ ಅಮೋನಿಯಾ ನೀತಿಯ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ) ಈ ನೀತಿಯ ಅನುಷ್ಠಾನವು ದೇಶದ ಸಾಮಾನ್ಯ ಜನರಿಗೆ ಶುದ್ಧ ಇಂಧನವನ್ನು ಒದಗಿಸುತ್ತದೆ.

ಬಿ) ಈ ನೀತಿಯ ಅನುಷ್ಠಾನವು ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ದೇಶದ ಕಚ್ಚಾ ತೈಲ ಆಮದನ್ನು ಕಡಿಮೆ ಮಾಡುತ್ತದೆ.

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1. ಹೇಳಿಕೆ ಎ ಸರಿಯಾಗಿದೆ.
2. ಹೇಳಿಕೆ ಬಿ ಸರಿಯಾಗಿದೆ.
3. ಎರಡೂ ಹೇಳಿಕೆಗಳು ತಪ್ಪಾಗಿವೆ.
4. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

3) ಡಬ್ಲ್ಯುಎಚ್‌ಒ-ಗ್ಲೋಬಲ್ ಸೆಂಟರ್ ಫಾರ್ ಟ್ರೆಡಿಷನಲ್ ಮೆಡಿಸಿನ್ ((WHO-GCTM) ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ) WHO GCTM ಅನ್ನು ಆಯುಷ್ ಸಚಿವಾಲಯದ ಅಡಿಯಲ್ಲಿ ಜಾಮ್‌ನಗರದಲ್ಲಿ ಸ್ಥಾಪಿಸುವುದಾಗಿ ಘೋಷಿಸಲಾಗಿದೆ.

ಬಿ) ಇದು ಪ್ರಪಂಚದಾದ್ಯಂತ ಸಾಂಪ್ರದಾಯಿಕ ಔಷಧಕ್ಕಾಗಿ ಮೊದಲ ಮತ್ತು ಏಕೈಕ ಜಾಗತಿಕ ಹೊರಪೋಸ್ಟ್ ಕೇಂದ್ರವಾಗಿದೆ (ಕಚೇರಿ).

ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆರಿಸಿರಿ

1.ಹೇಳಿಕೆ ಎ ಸರಿಯಾಗಿದೆ.
2.ಹೇಳಿಕೆ ಬಿ ಸರಿಯಾಗಿದೆ.
3.ಎರಡೂ ಹೇಳಿಕೆಗಳು ತಪ್ಪಾಗಿವೆ.
4.ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: 4

4) ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಚಾಲ್ತಿಯಲ್ಲಿದ್ದ ಪನ್ನಸ, ಮತ್ತರು, ಮರುತ್ತರು, ನಿವರ್ತನ ಮುಂತಾದ ಪದಗಳು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

ಎ. ಭೂ ಕಂದಾಯ ವ್ಯವಸ್ಥೆ.
ಬಿ. ಭೂ ಮಾಪನ ವ್ಯವಸ್ಥೆಯ ಮಾಪಕಗಳು.
ಸಿ. ವಾಣಿಜ್ಯ ಕಂದಾಯ ವಿಭಾಗಗಳು.
ಡಿ. ವರ್ತಕ ಸಂಘಗಳ ಹೆಸರುಗಳು.

ಉತ್ತರ: ಬಿ

5) ಬಾದಾಮಿ ಚಾಲುಕ್ಯರ ಕಾಲದ ಶಾಸನಗಳಲ್ಲಿ ಕಂಡುಬರುವ ವೀಸಾ, ಬಾಂಡಸೇರು, ಕುಳ ಮುಂತಾದ ಉಲ್ಲೇಖಗಳು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

ಎ. ತೂಕ ಮತ್ತು ಮಾಪಕದ ಸಾಧನಗಳು.
ಬಿ. ಭೂಮಾಪನದ ಅಳತೆಗಳು.
ಸಿ. ಕುಟುಂಬ ವ್ಯವಸ್ಥೆಯ ಘಟಕಗಳು.
ಡಿ. ಆಡಳಿತ ವ್ಯವಸ್ಥೆಯ ಘಟಕಗಳು.

ಉತ್ತರ: ಎ

6) ಬಾದಾಮಿ ಚಾಲುಕ್ಯರ ಶಾಸನಗಳಲ್ಲಿ ಕಂಡು ಬರುವ ಧರಣ, ವೀಸ, ಪೊನ್ನ ಮತ್ತು ಬೇಳೆ ಮುಂತಾದವು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?

ಎ. ಸೈನ್ಯಾಡಳಿತದ ಒಳಗಿನ ಘಟಕಗಳು.
ಬಿ. ಆಹಾರ ಧಾನ್ಯಗಳ ವಿಧಗಳು.
ಸಿ. ನಾಣ್ಯಗಳ ವಿಧಗಳು.
ಡಿ. ಆಡಳಿತದ ಘಟಕಗಳು.

ಉತ್ತರ: ಸಿ

7) ಈ ಕೆಳಗಿನವುಗಳಲ್ಲಿ ಯಾವೆಲ್ಲ ದೇಶಗಳು ಶಾಂಘೈ ಐದರ ಭಾಗವಾಗಿದ್ದವು?

ಎ) ಕಝಾಕಿಸ್ತಾನ್ ಗಣರಾಜ್ಯ
ಬಿ) ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ
ಸಿ) ಕಿರ್ಗಿಜ್ ಗಣರಾಜ್ಯ
ಡಿ) ರಷ್ಯಾದ ಒಕ್ಕೂಟ
ಇ) ರಿಪಬ್ಲಿಕ್ ಆಫ್ ತಜಕಿಸ್ತಾನ್
ಎಫ್) ಉಜ್ಬೇಕಿಸ್ತಾನ್ ಗಣರಾಜ್ಯ

1) (ಎ)ಹೊರತುಪಡಿಸಿ ಮೇಲಿನ ಎಲ್ಲಾ
2) (ಇ) ಹೊರತುಪಡಿಸಿ ಮೇಲಿನ ಎಲ್ಲಾ
3) (ಎ) (ಇ) ಮತ್ತು (ಎಫ್) ಹೊರತುಪಡಿಸಿ ಮೇಲಿನ ಎಲ್ಲಾ
4) (ಎಫ್) ಹೊರತುಪಡಿಸಿ ಮೇಲಿನ ಎಲ್ಲಾ

ಉತ್ತರ:4

ಇನ್ನಷ್ಟು ಪ್ರಶ್ನೋತ್ತರಗಳಿಗೆ www. prajavani.net/education-career

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

'ಸಾಮಾನ್ಯ ಜ್ಞಾನ' ಸೇರಿದಂತೆ ವಿವಿಧ ವಿಷಯಗಳ ಬಹು ಆಯ್ಕೆ ಪ್ರಶ್ನೆಗಳು, ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಚಲಿತ ವಿದ್ಯಮಾನ ಹಾಗೂ ಇನ್ನಿತರ ಮಾಹಿತಿಯ ಲೇಖನಗಳು, ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಾಕ್ಕಾಗಿ ಮೇಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

www.exammastermind.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೋತ್ತರ–

29) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ΔABC ಮತ್ತು ΔBDEಗಳು ಎರಡು ಸಮಬಾಹು ತ್ರಿಭುಜಗಳು D ಯು BC ಯ ಮಧ್ಯಬಿಂದು ಆದರೆ ΔABC ಮತ್ತು ΔBDE ಗಳ ವಿಸ್ತೀರ್ಣಗಳ ಅನುಪಾತ

(A) 2 : 1 (B) 1 : 2
(C) 4 : 1 (D) 1 : 4

ಉತ್ತರ:–(C) 4 : 1

ಪರಿಹಾರ:– . ΔABC ಮತ್ತು ΔBDE ಗಳು ಎರಡು ಸಮಬಾಹು ತ್ರಿಭುಜಗಳು D ಯು BC ಯ ಮಧ್ಯಬಿಂದು:



$\therefore BD = DC = 1/2BC$

ತ್ರಿಭುಜದ ಪ್ರತಿಯೊಂದು ಬಾಹುವು 2a.ಆಗಿರಲಿ

, $\Delta ABC \sim \Delta BDE$

$\therefore$ವಿಸ್ತೀರ್ಣ(ΔABC)/ವಿಸ್ತೀರ್ಣ (ΔBDE) $= AB^2/BD^2$

$= (2a)^2/(a)^2$

$= 4a^2/a^2 = 4/1 = 4:1$

2) ಚಿತ್ರದಲ್ಲಿ ತೋರಿಸಿರುವ ನಕ್ಷೆಯಲ್ಲಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು



ಎ) $x + y = 1$ ಮತ್ತು $2x - y = 1$
ಬಿ) $2x + y = 2$ ಮತ್ತು $x + y = 2$
ಸಿ) $2x - y = 2$ ಮತ್ತು $4x - y = 4$
ಡಿ) $y - x = 0$ ಮತ್ತು $x - y = 1$

ಉತ್ತರ:– (ಸಿ) $2x - y = 2$ ಮತ್ತು $4x - y = 4$

3) ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?

(A) 1, – 1, – 2, ... (B) 1, 5, 9, ...
(C) 2, – 2, 2, – 2, ... (D) 1, 2, 4, 8, ...

ಉತ್ತರ:– (ಬಿ) 1, 5, 9

4) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ

(A) 7 (B) 2 7
(C) – 7 (D) 2

ಉತ್ತರ:– (ಸಿ) – 7

30) ಒಂದು ಸಂಸ್ಥೆಯು ಆರಂಭದ ವರ್ಷದಲ್ಲಿ 400 ಉದ್ಯೋಗಿಗಳನ್ನು ನೇಮಿಸಿಕೊಂಡಿತು ಮತ್ತು ಪ್ರತಿ ವರ್ಷವು ಉದ್ಯೋಗಿಗಳ ಸಂಖ್ಯೆಯನ್ನು 35 ಹೆಚ್ಚಿಸಿತು. ಯಾವ ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿರುತ್ತದೆ?

ಉತ್ತರ:– ಮೊದಲ ವರ್ಷ 400 ಜನಗಳನ್ನು ನೇಮಿಸಿತು. ಒಂದೊಂದು ವರ್ಷವು 35 ಉದ್ಯೋಗಿಗಳ ಹೆಚ್ಚಳವಾಗಿದೆ. ಇದು ಸಮಾಂತರ ಶ್ರೇಢಿಯಲ್ಲಿದೆ.

$\therefore$ 400, 435,.............. 785

$a = 400, \; d = 35 \quad n = ?$

$T_n = a + (n-1)\,d$

$785 = 400 + (n-1)\,35$

$785 = 400 + 35n - 35$

$785 = 365 + 35n$

$35n = 785 - 365$

$35n = 420$

$n = \frac{420}{35}, \; n = 12$

$\therefore$ 12 ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿದೆ.

ಎಸ್ಸೆಸ್ಸೆಲ್ಸಿ

31) ಚಿತ್ರ ದಲ್ಲಿರುವಂತೆ $AB \parallel PQ$ ಮತ್ತು $AC \parallel PR$ ಆಗುವಂತೆ A, B ಮತ್ತು C ಗಳು ಕ್ರಮವಾಗಿ OP, OQ ಮತ್ತು OR ಗಳ ಚಿತ್ರದ ಮೇಲಿನ ಬಿಂದುಗಳು. ಆದರೆ $BC \parallel QR$ ಎಂದು ತೋರಿಸಿ



ಪರಿಹಾರ:– ΔOPQ ದಲ್ಲಿ, $AB \parallel PQ$ (ದತ್ತ)

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\frac{QA}{AP} = \frac{OB}{BQ}$ ....(1)

ΔOPR ದಲ್ಲಿ, $AC \parallel PR$

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$\therefore \frac{QA}{AP} = \frac{OC}{CR}$ ....(2)

ಸಮೀಕರಣ 1 ಮತ್ತು 2 ರಿಂದ,

$\frac{OB}{BQ} = \frac{OC}{CR}$

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

ΔOQR, ದಲ್ಲಿ, $BC \parallel QR$.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿಯ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಮಾದರಿ ಪ್ರಶ್ನೋತ್ತರ

ಭೌತವಿಜ್ಞಾನ

ಪಿಯುಸಿ

32) ಬಿಟ್ಟ ಸ್ಥಳ ತುಂಬಿ

1) ದ್ಯುತಿ ವಿದ್ಯುತ್ ಕೋಶವು ಒಂದು ಅರೆ ಸಿಲಿಂಡರಾಕಾರದ ....ಮತ್ತು ಅದಕ್ಕೆ ಬೆಂಬಲವಾಗಿ ವಾಹಕ ಸುರುಳಿ A (ಸಂಗ್ರಾಹಕ) ಇವುಗಳು ನಿರ್ವಾತವಿರುವ ಗಾಜು ಅಥವಾ ಸ್ಫಟಿಕ ಬಲ್ಬನ್ನು ಒಳಗೊಂಡಿರುತ್ತದೆ

ಉತ್ತರ:- ದ್ಯುತಿ ಸಂವೇದಿ ತಟ್ಟೆ C (ಉತ್ಸರ್ಜಕ)

2) ಮಾನವನ ಕಣ್ಣು ಗ್ರಹಿಸುವ ಬೆಳಕನ್ನು ಅಳೆಯುವ ವಿಭಾಗವನ್ನು .... ಎನ್ನುತ್ತೇವೆ.

ಉತ್ತರ:- ಪ್ರಭಾಮಾಪನ (Photometry))

3) ದ್ಯುತಿ ವಿದ್ಯುತ್ ಪರಿಣಾಮ ಕುರಿತು ಹಾಲ್‌ವಾಕ್ ಮತ್ತು ....ಅವಲೋಕನ ಮಾಡಿದರು

ಉತ್ತರ:- ಲಿನಾರ್ಡ್

4) ಬೆಳಕು ಯಾವುದೇ ವಸ್ತುವಿನ ಜತೆ ಪರಸ್ಪರ ಕ್ರಿಯೆಯಲ್ಲಿ ವರ್ತಿಸುವಾಗ ಅದು .... ಗಳಿಂದ ಮಾಡಲ್ಪಟ್ಟಿದೆ

ಉತ್ತರ:- ಕ್ವಾಂಟ ಅಥವಾ ಶಕ್ತಿಯ ಘಟಕ ((packet)

5) ಕಡಿಮೆ ಒತ್ತಡದಲ್ಲಿ ಪರಮಾಣುವಿನ ಅನಿಲ ಅಥವಾ ಆವಿಯ ಮೂಲಕ ವಿದ್ಯುತ್‌ನ್ನು ಸಾಮಾನ್ಯವಾಗಿ ಹರಿಸಿದಾಗ ಅದು ಉತ್ತೇಜನಗೊಳ್ಳುತ್ತದೆ ಮತ್ತು ನಿರ್ದಿಷ್ಟವಾದ ತರಂಗಾಂತರಗಳ ರೋಹಿತವನ್ನು ಹೊಂದಿರುತ್ತದೆ. ಈ ತರಹದ ರೋಹಿತವನ್ನು .... ವೆಂದು ಕರೆಯುತ್ತಾರೆ

ಉತ್ತರ:- ಉತ್ಸರ್ಜನ ರೇಖಾ ರೋಹಿತ

33) ದ್ಯುತಿ ಎಳೆಗಳು (Optical Fibre) ಬಗ್ಗೆ ಬರೆಯಿರಿ

ಉತ್ತರ:- ಶಬ್ದ ಮತ್ತು ದೃಶ್ಯದ ಸಂಜ್ಞೆಗಳನ್ನು ದೂರದೂರಕ್ಕೆ ರವಾನಿಸಲು ದ್ಯುತಿ ಎಳೆಗಳನ್ನು ಹೆಚ್ಚಾಗಿ ಈಗ ಬಳಸುತ್ತಾರೆ. ಇವುಗಳು ಕೂಡಾ ಪೂರ್ಣಾಂತರಿಕ ಪ್ರತಿಫಲನದ ಮೇಲೆಯೇ ಕಾರ್ಯನಿರ್ವಹಿಸುತ್ತವೆ. ದ್ಯುತಿ ಎಳೆಗಳನ್ನು ಉತ್ತಮ ಗುಣಮಟ್ಟದ ಸಂಯುಕ್ತ ಗಾಜಿನ / ಕ್ವಾರ್ಟ್ಸ್ ಎಳೆಗಳಿಂದ ತಯಾರಿಸುತ್ತಾರೆ. ಪ್ರತಿ ಎಳೆಯಲ್ಲಿ ಕೇಂದ್ರ ಮತ್ತು ಹೊರಮೇಲ್ಮೈ ಎಂಬ ಎರಡು ಭಾಗಗಳಿರುತ್ತವೆ. ಕೇಂದ್ರ ಭಾಗದ ವಕ್ರೀಭವನಾಂಕವು ಹೊರಮೇಲ್ಮೈಯ ವಕ್ರೀಭವನಾಂಕಕ್ಕಿಂತ ಅಧಿಕವಾಗಿರುತ್ತದೆ. ಬೆಳಕಿನ ರೂಪದಲ್ಲಿರುವ ಸಂಜ್ಞೆಗಳನ್ನು ದ್ಯುತಿ ಎಳೆಯ ಒಂದು ತುದಿಯಲ್ಲಿ ನಿರ್ದಿಷ್ಟ ಕೋನದಿಂದ ಆಪಾತಗೊಳಿಸಿದಾಗ, ಬೆಳಕು ದ್ಯುತಿ ಎಳೆಯ ಉದ್ದಕ್ಕೂ ಪದೇ ಪದೇ ಪೂರ್ಣಾಂತರಿಕ ಪ್ರತಿಫಲನಗೊಂಡು ಇನ್ನೊಂದು ತುದಿಯಿಂದ [ಚಿತ್ರದಲ್ಲಿರುವಂತೆ] ಹೊರಬರುತ್ತದೆ.



ಪ್ರತಿ ಹಂತದಲ್ಲೂ ಬೆಳಕು ಪೂರ್ಣಾಂತರಿಕ ಪ್ರತಿಫಲನಕ್ಕೆ ಒಳಗಾಗುವುದರಿಂದ ಬೆಳಕಿನ ತೀವ್ರತೆಯಲ್ಲಿ ಯಾವುದೇ ಗುರುತರ ಬದಲಾವಣೆಯಾಗುವುದಿಲ್ಲ. ಒಳ ಮೇಲ್ಮೈಯಿಂದ ಪ್ರತಿಫಲನಗೊಂಡ ಬೆಳಕು ವಿರುದ್ಧ ದಿಕ್ಕಿನಲ್ಲಿರುವ ಇನ್ನೊಂದು ಮೇಲ್ಮೈ ಮೇಲೆ ಕ್ರಾಂತಿ ಕೋನಕ್ಕಿಂತ ಅಧಿಕವಾದ ಕೋನದಲ್ಲಿ ಬೀಳುವಂತೆ ದ್ಯುತಿ ಎಳೆಗಳನ್ನು ರಚಿಸಲಾಗುತ್ತದೆ

34) ಯಾವುದಕ್ಕೆ ದ್ಯುತಿ ವಿದ್ಯುತ್ ಉತ್ಸರ್ಜನ ಎನ್ನುತಾರೆ?

ಉತ್ತರ:- ಒಂದು ಲೋಹದ ಮೇಲೆ ನಿರ್ದಿಷ್ಟ ಆವೃತ್ತಿಯ ವಿಕಿರಣವನ್ನು ಹಾಯಿಸಿದಾಗ ಲೋಹದ ಮೇಲ್ಮೈಯಿಂದ ಎಲೆಕ್ಟ್ರಾನುಗಳ ಉತ್ಸರ್ಜನೆ ಸಂಭವಿಸುತ್ತದೆ. ಇದನ್ನು ದ್ಯುತಿ ವಿದ್ಯುತ್ ಉತ್ಸರ್ಜನ ಎನ್ನುತಾರೆ. ಉತ್ಸರ್ಜಿತ ಎಲೆಕ್ಟ್ರಾನುಗಳ ದ್ಯುತಿ ಎಲೆಕ್ಟ್ರಾನುಗಳ ಎಂದು ಕರೆಯುತ್ತಾರೆ.

35) ಪೋಲರಾಯಿಡ್‌ನ ಪಾಸ್-ಅಕ್ಷ ಎಂದು ಯಾವುದನ್ನು ಕರೆಯುತ್ತಾರೆ?

ಉತ್ತರ:-ಬೆಳಕಿನ ತರಂಗಗಳು ಸ್ವಭಾವತಃ ಅಡ್ಡ ತರಂಗಗಳಾಗಿವೆ ಅಂದರೆ ಸಂಚರಣೆಯಲ್ಲಿರುವ ಬೆಳಕಿನ ತರಂಗದ ವಿದ್ಯುತ್‌ಕ್ಷೇತ್ರವು ಎಂದಿಗೂ ತರಂಗದ ಸಂಚರಣೆಯ ದಿಕ್ಕಿಗೆ ಲಂಬವಾಗಿರುತ್ತದೆ. ಇದನ್ನು ಒಂದು ಸರಳ ಪೋಲರಾಯಿಡನ್ನು ಬಳಸಿ ಸುಲಭವಾಗಿ ವಿವರಿಸಬಹುದು. ಒಂದು ಪೋಲರಾಯಿಡ್ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಜೋಡಿಸಲ್ಪಟ್ಟ ಅಣುಗಳ ಉದ್ದನೆಯ ಸರಪಣಿಯನ್ನು ಹೊಂದಿದೆ. ಈ ಅಣುಗಳ ದಿಕ್ಕಿನಲ್ಲಿರುವ ವಿದ್ಯುತ್ ಸದಿಶಗಳು (ಸಂಚರಣೆಯ ದಿಕ್ಕಿನಲ್ಲಿರುವ ಬೆಳಕಿನ ತರಂಗದ) ಹೀರಿಕೊಳ್ಳಲ್ಪಡುತ್ತವೆ. ಹೀಗೆ, ಅಂತಹ ಪೋಲರಾಯಿಡ್‌ಗೆ ಅಧ್ರುವೀಕೃತ ಬೆಳಕಿನ ತರಂಗವು ಆಪಾತವಾದರೆ, ಆ ತರಂಗವು ರೇಖೀಯವಾಗಿ ಧ್ರುವೀಕೃತ ಹೊಂದಿ ಅಣುಗಳ ಲಂಬ ದಿಕ್ಕಿನಲ್ಲಿ ವಿದ್ಯುತ್ ಸದಿಶಗಳು ಕಂಪನ ಹೊಂದಿರುತ್ತದೆ. ಈ ದಿಕ್ಕನ್ನು ಪೋಲರಾಯಿಡ್‌ನ ಪಾಸ್-ಅಕ್ಷ ಎನ್ನುವರು.

36) ಯಾವ ಚೈತನ್ಯವನ್ನು ಕರ್ಯಫಲನ ಎಂದು ಕರೆಯುತ್ತಾರೆ?

ಉತ್ತರ:- ಲೋಹಗಳ ವಾಹಕತೆಗೆ ಸ್ವತಂತ್ರ ಎಲೆಕ್ಟ್ರಾನುಗಳು [ಋಣಾತ್ಮಕ ಆವೇಶ ಕಣಗಳು] ಕಾರಣವಾಗಿವೆ, ಈ ಮುಕ್ತ ಎಲೆಕ್ಟ್ರಾನುಗಳು ಸಾಮಾನ್ಯವಾಗಿ ಲೋಹದ ಮೇಲ್ಮೈಯಿಂದ ತಪ್ಪಿಸಿಕೊಳ್ಳಲಾರವು. ಒಂದು ವೇಳೆ ಈ ಮುಕ್ತ ಎಲೆಕ್ಟ್ರಾನ್ ಹೊರಹೋಗಲು ಯತ್ನಿಸಿದರೆ ಅಲ್ಲಿ ಧನ ಆವೇಶ ಸೃಷ್ಠಿಯಾಗಿ ಅದು ಎಲೆಕ್ಟ್ರಾನನ್ನು ಮತ್ತೆ ಸೆಳೆದುಕೊಳ್ಳುತ್ತದೆ. ಅಯಾನುಗಳ ಈ ಆಕರ್ಷಕ ಬಲಗಳಿಂದ ಲೋಹದ ಮೇಲ್ಮೈಯನ್ನು ಬಿಟ್ಟು ಹೋಗಲಾರವು. ಒಂದು ವೇಳೆ ಎಲೆಕ್ಟ್ರಾನುಗಳು ಬಂಧಿತ ಶಕ್ತಿಗಿಂತ ಅಧಿಕವಾದ ಶಕ್ತಿ ಗಳಿಸಿಕೊಂಡಾಗ ಮಾತ್ರ ಹೊರಬರಲು ಸಾಧ್ಯ. ಅಂದರೆ ಯಾವ ಕನಿಷ್ಠ ಶಕ್ತಿಗೆ ಎಲೆಕ್ಟ್ರಾನುಗಳು ಲೋಹದ ಮೇಲ್ಮೈಯಿಂದ ಹೊರಬರುತ್ತವೆಯೋ ಆ ಚೈತನ್ಯವನ್ನು ಕರ್ಯಫಲನ ಎಂದು ಕರೆಯುತ್ತಾರೆ. ಅದನ್ನು ಸಂಕೇತದಿಂದ ಸೂಚಿಸಲಾಗುತ್ತದೆ ಮತ್ತು ಅದನ್ನು [ಎಲೆಕ್ಟ್ರೋನ್ ವೋಲ್ಟ್) ಅಳತೆ ಮಾಡಲಾಗುತ್ತದೆ.

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಎನ್‌ಸಿಇಆರ್‌ಟಿ: ಪ್ರಾಂಶುಪಾಲರ ಹುದ್ದೆಗಳು

ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿಮಂಡಳಿಯ(ಎನ್‌ಸಿಇಆರ್‌ಟಿ) ಮೈಸೂರು, ಶಿಲ್ಲಾಂಗ್, ಭುವನೇಶ್ವರ ಮತ್ತು ಭೋಪಾಲ್ ರಾಜ್ಯಗಳಲ್ಲಿ ಖಾಲಿ ಇರುವ ನಾಲ್ಕು ಪ್ರಾಚಾರ್ಯರ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಡಿಸೆಂಬರ್ 30 ಅರ್ಜಿ ಸಲ್ಲಿಸಲು ಕೊನೆ ದಿನ. ಆಫ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬೇಕು.

ಶೈಕ್ಷಣಿಕ ಅರ್ಹತೆ: ಎನ್‌ಸಿಇಆರ್‌ಟಿ ಅಧಿಕೃತ ಅಧಿಸೂಚನೆಯ ಪ್ರಕಾರ ಅಭ್ಯರ್ಥಿಯು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪೂರ್ಣಗೊಳಿಸಿರಬೇಕು.

ವೇತನ: ₹ 37400 ರಿಂದ ₹ 67000 ಮಾಸಿಕ

ವಯಸ್ಸಿನ ಮಿತಿ: ಗರಿಷ್ಠ 60 ವರ್ಷಗಳು

ಅರ್ಜಿ ಶುಲ್ಕ : ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹100 ಅರ್ಜಿ ಶುಲ್ಕ. ಎಸ್.ಸಿ/ಎಸ್.ಟಿ/ ಅಂಗವಿಕಲರು/ ಮಹಿಳಾ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಿಂದ ವಿನಾಯಿತಿ. ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಅರ್ಜಿ ಶುಲ್ಕ ಪಾವತಿಸಬೇಕು.

ಅರ್ಜಿ ಸಲ್ಲಿಸುವ ವಿಳಾಸ:
ಸೆಕ್ಷನ್ ಆಫೀಸರ್, ನೇಮಕಾತಿ-I ವಿಭಾಗ,
ಕೊಠಡಿ ಸಂಖ್ಯೆ -12, 5 ನೇ ಮಹಡಿ,
ಜಾಕಿರ್ ಹುಸೇನ್ ಬ್ಲಾಕ್, NCERT,
ನವದೆಹಲಿ-110016

ಅರ್ಜಿ ನಮೂನೆ ಮತ್ತು ಇತರೆ ಮಾಹಿತಿಗಾಗಿ https://ncert.nic.in/ ಈ ಜಾಲತಾಣಕ್ಕೆ ಭೇಟಿ ನೀಡಿ. ಅರ್ಜಿ ನಮೂನೆ ಡೌನ್‌ಲೋಡ್ ಮಾಡಿಕೊಳ್ಳಲು ಇಲ್ಲಿಗೆ ಭೇಟಿ ನೀಡಿ. https://ncert.nic.in/pdf/announcement/vacancies/academicvacancy/Advt_173_42en.pdf